# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

**KENDHOOLI** *Kannada Weekly*

*kendhooli.com/e-paper/*


ಯೂಪಿಯಲ್ಲಿ ಮೋಶಾ

**ಚಮತ್ಕಾರಕ್ಕೆ ಅಗ್ನಿಪರೀಕ್ಷೆ**



ಸನತ್‌ಕುಮಾರ ಬೆಳಗಲಿ ಅವರ ಅಂಕಣದಲ್ಲಿ...


ಸಂಪುಟ - 02 । ಸಂಚಿಕೆ - 66 । ಪುಟ - 16 । ರೂ. 16/- । ಫೆಬ್ರವರಿ 17 ರಿಂದ ಫೆಬ್ರವರಿ 23, 2022 KARKAN/2018/76310




# ಹೊಸಗನ್ನಡ ಕಾವ್ಯಕ್ಕೆ ಹೊಸಬೆಳಕು ಕೊಟ್ಟ ಕಣವಿ

ಸಿದ್ದು ಪರದಾಟ:

## ಇಬ್ರಾಹಿಂ ಅಪಲಾಪ


ಭಾಸ್ಕರ ರಾವ್ ಅವರ ಅಂಕಣದಲ್ಲಿ...

## ಪೊಲೀಸ್ ವ್ಯವಸ್ಥೆಯ ಕೆಟ್ಟ ಸ್ಥಿತಿಗೆ ಹೊಣೆ ಯಾರು?

ಪ್ರಾದೇಶಿಕ ಸಮಸ್ಯೆಗಿಂತ

## ರಾಜಕಾರಣವೇ ಮುಖ್ಯ

# ಸಮಾನತೆಯ ದ್ಯೋತಕವಾಗಬೇಕಿದ್ದ ಮಕ್ಕಳನ್ನು ಹಳ್ಳಕ್ಕೆ ತಳ್ಳುತ್ತಿದ್ದೇವೆ




ಎಂಥಾ ದುರದೃಷ್ಟ ನೋಡಿ..! ಎಳೆಯ ಮಕ್ಕಳಿಗೆ ಆದರ್ಶವನ್ನು ಮುಂದಿನ ಭವಿಷ್ಯದ ದೇಶ ಮತ್ತು ಜಗತ್ತಿನ ಆಗು-ಹೋಗುಗಳ ಕುರಿತು ಮನನ ಮಾಡುವ ಸಮಯದಲ್ಲಿ ಇದೆಂಥಾ ಹಿಜಾಬ್ ಪ್ರಕರಣ; ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬಹುದಾದ ಈ ವಿಷಯವನ್ನು ಅನಾವಶ್ಯಕವಾಗಿ ದೇಶಾದ್ಯಂತ ದಳ್ಳುರಿಯನ್ನಾಗಿ ಮಾಡುವ ಮೂಲಕ ಆ ಎಳೆಯ ಕುಡಿಗಳಿಗೆ ಧರ್ಮದ ವಿಷಬೀಜ ಬಿತ್ತುವ ಕೆಲಸ ಬೇಕಿತ್ತೇ?

ವ್ಯವಸ್ಥೆ ಎನ್ನುವುದು ಎಷ್ಟೊಂದು ಕುಲಗೆಟ್ಟಿದೆ ಎಂದರೆ ಅದನ್ನು ತಿದ್ದಿ ತೀಡಿ ಸಹಜಸ್ಥಿತಿಗೆ ತರಲಾರದಷ್ಟು ಕೆಟ್ಟು ಹುಣ್ಣಾಗಿದೆ.' ಧರ್ಮ' ಎನ್ನುವುದು ಈ ದೇಶದ ತಳಹದಿಯ ಮೂಲ ಬೇರು ಎನ್ನುವುದರಲ್ಲಿ ಎರಡು ಮಾತಿಲ್ಲ ಆದರೆ. ಇದರ ಹೆಸರಿನಲ್ಲಿ ನಡೆಯುತ್ತಿರುವ ರಾಜಕಾರಣ ಇದೆಯಲ್ಲ ಇದು ಇಡೀ ವ್ಯವಸ್ಥೆಯನ್ನು ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನೇ ಅರಜಾಕತೆಯನ್ನಾಗಿ ಮಾಡಹೊರಟಿದೆ. ಇದಕ್ಕೆ ಮುಲಾಮು ಹಚ್ಚದೆ ಹೋದರೆ ನಿಜಕ್ಕೂ ಮುಂದಿನ ಭಾರತದ ಭವಿಷ್ಯ ಮತ್ತಷ್ಟು ಜಟಿಲವಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈ ದೇಶದ ಬಹುತ್ವ ಸಂಸ್ಕೃತಿಯನ್ನು, ಮಾನವೀಯ ಮೌಲ್ಯಗಳನ್ನು, ಸಾಂಸ್ಕೃತಿಕ ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವಲ್ಲಿ ವಿದ್ಯಾರ್ಥಿ ಸಮುದಾಯದ ಕೊಡುಗೆ ಚಾರಿತ್ರಿಕವಾಗಿ ಮಹತ್ವದ್ದಾಗಿದೆ. ಇಂದು ಇದೇ ಸಮುದಾಯದ ನಡುವೆ ಗೋಡೆಗಳನ್ನು ಕಟ್ಟಲು ಹಿಂದೂ-ಮುಸ್ಲಿಂ ಮತಾಂಧರು ಮುಂದಾಗಿದ್ದಾರೆ. ವಿದ್ಯಾರ್ಥಿಗಳು ತಮಗೆ ಅಗತ್ಯವಾದ ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಿಕೊಳ್ಳಲು ಅನುಕೂಲ ಮಾಡಿಕೊಡಬೇಕಾಗಿರುವ ಸಂದರ್ಭದಲ್ಲಿ, ಅವರ ನಡುವೆ ಪ್ರತ್ಯೇಕತೆಯ ಭಾವನೆಗಳನ್ನು ವ್ಯವಸ್ಥಿತವಾಗಿ ಬಿತ್ತಲಾಗುತ್ತಿದೆ. ಇಲ್ಲಿ ಹಿಜಾಬ್ ಧರಿಸಲು ಮುಸ್ಲಿಂ ಹೆಣ್ಣುಮಕ್ಕಳ ಮೇಲೆ ಒತ್ತಡ ಹೇರುವ ಧಾರ್ಮಿಕ ನಾಯಕರಷ್ಟೇ ನೈತಿಕ ಹೊಣೆಯನ್ನು ಹಿಂದೂ ಯುವಕರಿಗೆ ಕೇಸರಿ ಶಾಲು ಹೇರುವ ಹಿಂದೂ ಧಾರ್ಮಿಕ ನಾಯಕರೂ ಹೊರಬೇಕಾಗಿದೆ. ಎರಡೂ ಬದಿಯಲ್ಲಿ ವಸ್ತ್ರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗುತ್ತಿದೆ, ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸಲಾಗುತ್ತಿದೆ.

ಆದರೆ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಯಾವುದೇ ಧರ್ಮದ ಮಕ್ಕಳಾಗಿರಲಿ ಅವರು ಸಮವಸ್ತ್ರವನ್ನು ಕಡ್ಡಾಯವಾಗಿ ದರಿಸಬೇಕು , ಯಾಕೆಂದರೆ ಇದು ವಿದ್ಯಾರ್ಥಿಗಳಲ್ಲಿ ಸೌಹಾರ್ದತೆಯನ್ನು ಸಾರುತ್ತದೆ ಎಲ್ಲರೂ ಒಂದೇ ಎನ್ನುವ ಮನೋಭಾವವನ್ನು ಸೃಷ್ಟಿಸುತ್ತದೆ. ಮೇಲು-ಕೀಳು ಎನ್ನುವ ಭಾವಗಳಲ್ಲಿದೆ ಸಮತೂಕವಾಗಿರುತ್ತದೆ ಹಾಗಾಗಿಯೇ ಈ ಸಮವಸ್ತ್ರವನ್ನು ಕಡ್ಡಾಯಗೊಳಸಬೇಕು ಹಾಗೆಯೇ ಎಲ್ಲಾ ಧರ್ಮದ ವಿದ್ಯಾರ್ಥಿಗಳು ಇದನ್ನು ಅನುಸರಿಸಬೇಕು. ಧರ್ಮ ಏನೇ ಹೇಳಲಿ ಅದು ಶಾಲೆಯ ಒಳಗಡೆ ಬರಬಾರದು ಆಗ ಇಂತ ಯಾವುದೇ ವಿವಾದಗಳು ಸೃಷ್ಟಿಯಾಗುವುದಿಲ್ಲ.

ಶಾಲಾ ಕಾಲೇಜುಗಳಿಗೆ ಬರುವ ಮಕ್ಕಳು ತಮ್ಮ ಎಲ್ಲ ಮತೀಯ, ಧಾರ್ಮಿಕ, ಜಾತೀಯ ಸಂಕೇತಗಳಿಂದ ಹೊರತಾಗಿ ಒಂದು ಸಮಾನ ಮನಸ್ಥಿತಿಯೊಂದಿಗೆ ಸೌಹಾರ್ದಯುತ ಸಮಾಜವನ್ನು ಪ್ರತಿನಿಧಿಸಬೇಕು



ಎನ್ನುವುದು ಭಾರತದ ಸಂವಿಧಾನದಲ್ಲೇ ತಿಳಿಸಲಾಗಿದೆ. ಆ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯ, ಭ್ರಾತೃತ್ವ ಮತ್ತು ಸಮಾನತೆಯ ಆಶಯಗಳನ್ನು ಸಾಕಾರಗೊಳಿಸಲು ದೇಶದ ವಿದ್ಯಾರ್ಥಿಗಳು ಇದನ್ನು ಅನುಸರಿಸಬೇಕು .

ಆದರೆ ಇಲ್ಲಿ ಸಮಸ್ಯೆ ಇರುವುದು ಸಮವಸ್ತ್ರದಲ್ಲಿ ಅಲ್ಲ, ಸಮಾನತೆಯ ಆಶಯ ಮತ್ತು ಅದನ್ನು ಸಾಕಾರಗೊಳಿಸುವ ಮಾರ್ಗಗಳಲ್ಲಿ. ಹಿಜಾಬ್ ಧರಿಸಿ ಬರುವ ಮುಸ್ಲಿಂ ಹೆಣ್ಣುಮಕ್ಕಳು ತಮ್ಮ ಬದುಕು ರೂಪಿಸಿಕೊಳ್ಳಲೆಂದೇ ಶಾಲೆಗೆ ಬರುತ್ತಾರೆ. ಹಿಂದೂ ಹೆಣ್ಣುಮಕ್ಕಳೂ ತಮ್ಮ ಸಂಸ್ಕೃತಿ ಮತ್ತು ಧಾರ್ಮಿಕ ಆಲೋಚನೆಗನುಗುಣವಾಗಿ ಉಡುಪು ಧರಿಸಿ ಬರುತ್ತಾರೆ. ಈ ಎಲ್ಲ ಹೆಣ್ಣು ಮಕ್ಕಳ ಆಶಯ ಸಾಮಾಜಿಕ ಮೇಲ್ಮುಖ ಚಲನೆ, ಆರ್ಥಿಕ ಸದೃಢತೆ ಮತ್ತು ಸುಭದ್ರ ಭವಿಷ್ಯ ಇವಿಷ್ಟೇ ಆಗಿರುತ್ತದೆ.

ಶಾಲಾ ಮಕ್ಕಳಲ್ಲಿ ಸಮಾನತೆಯ ಭಾವನೆಯನ್ನು ಉದ್ದೀಪನಗೊಳಿಸಲು ಬೇಕಿರುವುದು ಒಂದು ಸೌಹಾರ್ದಯುತ ವಾತಾವರಣ, ಬೌದ್ಧಿಕ ಚಿಂತನೆಯ ಪರಿಸರ ಮತ್ತು ಭ್ರಾತೃತ್ವದ ಧೋರಣೆ. ಸಮವಸ್ತ್ರ ಭೌತಿಕವಾಗಿ ತರತಮಗಳನ್ನು ದೂರವಿರಿಸಲು ನೆರವಾಗುವ ಒಂದು ಸಾಧನ ಆದರೆ ಬೌದ್ಧಿಕವಾಗಿ ಈ ಮಕ್ಕಳ ಚಿಂತನೆಗಳು ಮೂಡುವುದು ತಮ್ಮ ಕುಟುಂಬದ ನೆಲೆಗಳಿಂದಲೇ ಅಲ್ಲವೇ ? ಈ ಕುಟುಂಬಗಳು ಒಂದು ಸಾಮಾಜಿಕ ವಾತಾವರಣದಲ್ಲಿ ಬದುಕುತ್ತವೆ. ನಿತ್ಯ ಜೀವನದಲ್ಲಿ ಈ ಕುಟುಂಬಗಳು ಅಸಮಾನತೆ, ಶೋಷಣೆ, ದೌರ್ಜನ್ಯ ಮತ್ತು ತಾರತಮ್ಯಗಳ ನಡುವೆಯೇ ಬದುಕು ಸವೆಸುತ್ತವೆ. ಈ ಕುಟುಂಬಗಳಿಂದ ವಿದ್ಯಾಭ್ಯಾಸಕ್ಕಾಗಿ ಶಾಲೆಗೆ ಬರುವ ಮಕ್ಕಳು ಈ ತರತಮಗಳ ಛಾಯೆಯಲ್ಲೇ ಒಂದು ಸಮಾನತೆಯ ವಾತಾವರಣವನ್ನು ಶಾಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ.

ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ ನಮ್ಮ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಮಾನತೆಯ ಆಶಯಗಳು ಉಳಿದಿವೆಯೇ ? ಹಿಜಾಬ್ ತೆಗೆದಿಟ್ಟು ಜಾಬ್‌ಗಾಗಿಯೇ ಬರುವ ಹೆಣ್ಣುಮಕ್ಕಳಾಗಲಿ, ಹಿಜಾಬ್ ಅಗತ್ಯವಿಲ್ಲದ ಹಿಂದೂ ಹೆಣ್ಣುಮಕ್ಕಳಾಗಲೀ ಅಥವಾ ಗಂಡುಮಕ್ಕಳೇ ಆಗಲೀ ಬಾಹ್ಯ ಸಮಾಜದ ಅಸಮಾನತೆಯಿಂದ ಹೊರತಾದ ಸಮಾನತೆಯನ್ನು ಶಾಲೆಯಲ್ಲಿ ಗುರುತಿಸಲು ಸಾಧ್ಯವೇ ? ಒಕ್ಕೂಟ ಸರ್ಕಾರ ಜಾರಿಗೊಳಿಸಿರುವ ಹೊಸ ಶಿಕ್ಷಣ ನೀತಿ 2020 ಈ ಸಮಾನತೆಯನ್ನು ಸಾಕಾರಗೊಳಿಸಲು ಪೂರಕವಾಗಿದೆಯೇ ? ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತಳಮಟ್ಟದಲ್ಲಿರುವ ಮಕ್ಕಳು, ಹಿತವಲಯದಲ್ಲಿರುವ ಮುಂದುವರೆದ ಮಕ್ಕಳೊಡನೆ ಬೆರೆತು ಸಮಾನ ಶಿಕ್ಷಣ ಪಡೆಯುವ ವಾತಾವರಣವನ್ನು ಸರ್ಕಾರಗಳು ನಿರ್ಮಿಸಿವೆಯೇ ? ಖಾಸಗಿ, ಸರ್ಕಾರಿ, ಅನುದಾನಿತ, ಕೇಂದ್ರ ಪಠ್ಯಕ್ರಮದ, ರಾಜ್ಯ ಪಠ್ಯಕ್ರಮದ, ಧಾರ್ಮಿಕ ಅಲ್ಪಸಂಖ್ಯಾತರ, ಕಾರ್ಪೋರೇಟ್ ನಿಯಂತ್ರಿತ ಹೀಗೆ ಹತ್ತು ಹಲವು ಸ್ವರೂಪಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣದಲ್ಲಿ ಸಾಮಾಜಿಕ ಸಮಾನತೆ ಮತ್ತು ಸಾಂಸ್ಕೃತಿಕ ಸೌಹಾರ್ದತೆಯನ್ನು ಗುರುತಿಸಲು ಸಾಧ್ಯವೇ ?

ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಈ ಎಲ್ಲ ಶೈಕ್ಷಣಿಕ ಮಾರ್ಗಗಳು ಮಾರುಕಟ್ಟೆಗೆ ಪೂರಕವಾದ ಶಿಕ್ಷಣವನ್ನು ಮಾತ್ರವೇ ಒದಗಿಸುತ್ತವೆ. ಇದಕ್ಕೆ ಇತ್ತೀಚಿನ ಸೇರ್ಪಡೆಯಾಗಿರುವುದು ಶಿಕ್ಷಣವನ್ನು ಮತ್ತಷ್ಟು ಕಾರ್ಪೋರೇಟ್ ಹಿಡಿತಕ್ಕೆ ಸಿಲುಕಿಸುವ ಡಿಜಿಟಲ್ ಶಿಕ್ಷಣ ಅಥವಾ ಆನ್‌ಲೈನ್ ಬೋಧನಾ ಮಾದರಿಗಳು. ಹೊಸ ಶಿಕ್ಷಣ ನೀತಿಯ ಮೂಲಕ ಈ ವ್ಯವಸ್ಥೆಯೊಳಗಿನ ತಾರತಮ್ಯಗಳನ್ನು ಮತ್ತಷ್ಟು ಹಿಗ್ಗಿಸುವುದೇ ಅಲ್ಲದೆ, ಸಮಾಜದ ತಳಸಮುದಾಯದ ಮಕ್ಕಳಿಗೆ ಒದಗಿಸಲಾಗುತ್ತಿರುವ ಶಿಕ್ಷಣವೂ ಸಹ ಗಗನ ಕುಸುಮವಾಗಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಉತ್ತಮ ಶಿಕ್ಷಣ ಅಥವಾ ಗುಣಮಟ್ಟದ ಬೋಧನೆ ಎನ್ನುವುದು ಸಾರ್ವತ್ರಿಕ ಲಕ್ಷಣಗಳನ್ನು ಹೊಂದಿರಬೇಕಾದ ಸಂದರ್ಭದಲ್ಲಿ, ಉಳ್ಳವರಿಗೆ ಮಾತ್ರವೇ ಲಭ್ಯವಾಗುವ ಶೈಕ್ಷಣಿಕ ನೆಲೆಗಳನ್ನು ಮಾರುಕಟ್ಟೆಯ ನೆರವಿನೊಂದಿಗೆ ನಿರ್ಮಿಸಲಾಗುತ್ತಿದೆ. ಈ ವಾಣಿಜ್ಯೀಕರಣ ಪ್ರಕ್ರಿಯೆಯಲ್ಲೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳೂ ಸಹ ವಿದ್ಯಾರ್ಥಿಗಳನ್ನು ಪ್ರಭಾವಿಸುತ್ತಿವೆ. ಸಮಾನ ಶಿಕ್ಷಣ ಎಂದರೆ ಒಂದೇ ಪಠ್ಯಕ್ರಮ ಬೋಧನೆ ಅಲ್ಲ, ಬದಲಾಗಿ ಎಲ್ಲ ಸ್ತರಗಳ ಜನತೆಗೂ ಸಮಾನ ಬೌದ್ಧಿಕ ಸರಕುಗಳನ್ನು ಒದಗಿಸುವ, ಸಮಾನ ಸೌಲಭ್ಯಗಳನ್ನು ಕಲ್ಪಿಸುವ, ಸಮಾನ ಜ್ಞಾನ ಶಾಖೆಗಳನ್ನು ಪರಿಚಯಿಸುವ ಮತ್ತು ವಿದ್ಯಾಭ್ಯಾಸದ ನಂತರ ಸಮಾಜದಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸುವಂತಹ ವ್ಯವಸ್ಥೆ ಮಾತ್ರವೇ ಸಮಾನ ಶಿಕ್ಷಣ ಎನಿಸಿಕೊಳ್ಳುತ್ತದೆ.

ಈ ವಿವಾದ ಹೇಗಾಯಿತು ಯಾಕಾಯಿತು ಎಲ್ಲಿಂದ ಆರಂಭವಾಯಿತು ಎನ್ನುವುದು ಮುಖ್ಯವಲ್ಲ, ಇದರ ಮೂಲ ಹುಡುಕುವುದು ನಮ್ಮ ಉದ್ದೇಶವೂ ಅಲ್ಲ ಆದರೆ ಶಾಲಾ-ಕಾಲೇಜುಗಳಲ್ಲಿ ಮುಂದೆ ಈ ರೀತಿ ಆಗದೆ ನೋಡಿಕೊಳ್ಳಬೇಕಿರುವುದು ಸರ್ಕಾರದ ಆದ್ಯಕರ್ತವ್ಯ. ಈ ವಿವಾದ ಈಗ ದೇಶದ ಗಡಿಯನ್ನು ದಾಟಿ ಹೋಗಿದೆ ಇಲ್ಲಿ ಶಿಕ್ಷಣದ ಬಗ್ಗೆ ಚಿಂತನೆ ಬದಲಾಗಿ ರಾಜಕಾರಣದ ಗಾಳಿ ಜೋರಾಗಿಯೇ ಬೀಸುತ್ತಿದೆ. ಮಕ್ಕಳ ಭವಿಷ್ಯದ ಬಗ್ಗೆ ಶಿಕ್ಷಣ ವ್ಯವಸ್ಥೆಯ ಬಗ್ಗೆ ಗೌರವ ಇದ್ದಿದ್ದರೆ ಆರಂಭವಾದ ಶಾಲೆಯಲ್ಲಿಯೇ ಇದನ್ನು ಚಿವಿಟಿ ಅದಕ್ಕೊಂದು ಮುಲಾಮು ಹಚ್ಚಿ ಬಿಟ್ಟಿದ್ದರೆ ಈ ಮಟ್ಟಕ್ಕೆ ಈ ವಿವಾದ ಹರಡುತ್ತಿರಲಿಲ್ಲ. ಎರಡು ಧರ್ಮದ ಮಧ್ಯೆ ಇರುವ ಕಂದಕವನ್ನು ಮತ್ತಷ್ಟು ಬಿಗಡಾಯಿಸಿ ರಾಜಕಾರಣದ ಲೇಪನವನ್ನು ಹಚ್ಚಿಸಿದ್ದಾರೆ. ಅವರು ನಿಜಕ್ಕೂ ಮನುಷ್ಯರಲ್ಲ ಮನುಷ್ಯತ್ವವನ್ನು ಬಿಟ್ಟು ರಾಕ್ಷಸಿಪ್ರವೃತ್ತಿಯನ್ನು ಉಳ್ಳವರು ಈ ದೇಶದ ಒಂದು ಸಾಂಸ್ಕೃತಿಕರಣವನ್ನು ಕುಲಗೆಡಿಸಿ ನೋಡುವ ಪರಿಪಾಠ ಇದೆಯಲ್ಲ ಅದನ್ನು ನೀಚತನದ ಪರಮಾವಧಿಯೆಂದೆ ಪರಿಗಣಿಸಬೇಕು. ಈ ವಿವಾದ ಇಂದಿನದಲ್ಲ ವ್ಯವಸ್ಥಿತವಾದ ಸಂಚು ನಡೆಯುತ್ತಲೇ ಇದೆ ಇದರ ಹಿಂದೆ ರಾಜಕಾರಣದ ಜೊತೆಗೆ ಉದ್ಯಮಿಗಳ ನಂಟು ಇದೆ ಎನ್ನುವುದನ್ನು ನಾವು ಅಲ್ಲಗೆಳೆಯುವಂತಿಲ್ಲ .2009 ರಲ್ಲಿ ಮೊದಲ ಬಾರಿ ಮಂಗಳೂರಿನಲ್ಲಿ ಬುರ್ಕಾ/ ಸ್ಕಾರ್ಫ್ ವಿವಾದ ಭುಗಿಲೆದ್ದಿತ್ತು. ಎಸ್ ವಿ ಎಸ್ ಕಾಲೇಜಿನಲ್ಲಿ ಬುರ್ಕಾ,ಸ್ಕಾರ್ಫ್ ಬ್ಯಾನ್ ಮಾಡಲಾಗಿತ್ತು. ಅದು ರಾಜ್ಯದ ಮೊದಲ ಬುರ್ಕಾ.ಸ್ಕಾರ್ಫ್ ವಿವಾದವಾಗಿತ್ತು. ಆಗಲೂ ಫೆಬ್ರವರಿ ತಿಂಗಳಲ್ಲಿಯೇ ಈ ವಿವಾದ ಸೃಷ್ಟಿಯಾಗಿತ್ತು ಯಾಕೆ ವಿವಾದ ಆಗುತ್ತೆ ಎನ್ನುವುದೇ ಇಲ್ಲಿರುವ ಕುತೂಹಲವಾದ ಅಂಶ

ಹೆಚ್ಚಾಗಿ ಫೆಬ್ರವರಿ ಕಾಲದಲ್ಲೇ ಯಾಕೆ ಸ್ಕಾರ್ಫ್ ವಿವಾದ ತಲೆದೋರುತ್ತೆ ? ಮಾರ್ಚ್ ಎಂಬ ಆರ್ಥಿಕ ವರ್ಷಾಂತ್ಯಕ್ಕೆ ಟೆಕ್ಸ್ ಟೈಲ್ ಉದ್ಯಮದ ಕ್ಲೀಯರೆನ್ಸ್ ಸೇಲ್ ಗಾಗಿ ಫೆಬ್ರವರಿಯಲ್ಲಿ ಬುರ್ಕಾ ವಿವಾದ ಎಬ್ಬಿಸಲಾಗುತ್ತಿದೆಯೇ ? ಭಾರತದಲ್ಲಿ ಇರುವಷ್ಟು ಡಿಸೈನ್ ಡಿಸೈನ್ ಬುರ್ಕಾ, ಸ್ಕಾರ್ಫ್ ಗಳು ಜಗತ್ತಿನ ಬೇರೆಲ್ಲೂ ಇಲ್ಲವೇನೋ. ಬುರ್ಕಾ ಮಾದರಿಯ ಡ್ರೆಸ್ ಗಳೋ, ಡ್ರೆಸ್ ಮಾದರಿಯ ಬುರ್ಕಾವೋ ಎಂದು ಗೊಂದಲವಾಗುವಷ್ಟರ ಮಟ್ಟಿಗಿನ ಬುರ್ಕಾ ಡಿಸೈನ್ ಅನ್ನು ಕಂಪನಿಗಳು ರೂಪಿಸಿವೆ. ಅಂದ ಹಾಗೆ ಭಾರತದ ಟಾಪ್ ಜವಳಿ ಉದ್ಯಮ ನಡೆಸುತ್ತಿರುವವರು ಯಾರು ಗೊತ್ತಾ ? ಅರವಿಂದ್ ಲಿಮಿಟೆಡ್, ವರ್ಧಮಾನ ಟೆಕ್ಸ್ ಟೈಲ್, ವೆಲ್ಸ್ಪಾನ್ ಇಂಡಿಯಾ, ಟ್ರೈಡೆಂಟ್ ಲಿಮಿಟೆಡ್, ಕೆಪಿಆರ್ ಮಿಲ್ ಲಿಮಿಟೆಡ್, ಪೇಜ್ ಇಂಡಸ್ಟ್ರಿ, ರೂಪಾ ಅ?ಯಂಡ್ ಕಂಪನಿ ಇತ್ಯಾದಿಗಳು ಭಾರತದ ಜವಳಿ ಉದ್ಯಮವನ್ನು ಆಳುತ್ತಿದೆ. ಈಗ ನೀವು ಸಾಮಾಜಿಕ ಜಾಲತಾಣವನ್ನು ತೆರೆದಾಗ ಅಲ್ಲಿ ಈಗ ಫ್ಯಾನ್ಸಿ ಬುರ್ಕಾ ಸಪ್ಲೈಯರ್ಸ್ ಅಂತ ಜಾಹೀರಾತು ಕಾಣಿಸಿಕೊಳ್ಳುತ್ತದೆ. ಬುರ್ಕಾ ಇಶ್ಯೂ ಅಂತ ಕಳೆದ ಒಂದು ವಾರದಿಂದ ಎಷ್ಟು ಕೋಟಿ ಜನ ಗೂಗಲ್ ಸರ್ಚ್ ಮಾಡಿರಬಹುದು. ಅವರೆಲ್ಲರಿಗೂ ಇಂಡಿಯಾ ಮಾರ್ಟ್ ಡಾಟ್ ಕಾಮ್, ಫ್ಲಿಪ್ ಕಾರ್ಟ್ ನಿಂದ ಕರೆ ಬಂದಿದೆ. ಕಳೆದೊಂದು ವಾರದಲ್ಲಿ ಅವರ ವ್ಯಾಪಾರ ಎಷ್ಟಾಗಿರಬಹುದು. ಊಹಿಸಿ... ರಾಜ್ಯದ ಬಹುತೇಕ ಶಾಲೆಗಳಲ್ಲಿ ಬುರ್ಕಾ ಹಾಕಿಕೊಂಡು ಬರುತ್ತಿರಲಿಲ್ಲ ಆದರೆ ಆ ಒಂದೇ ಶಾಲೆಯಲ್ಲಿ ನಾಲ್ಕು ಜನ ಬುರ್ಕಾ ಧರಿಸುತ್ತಿದ್ದರು ಈ ವಿವಾದಿಂದ ಬೆಳಗಾಗುತ್ತಿದ್ದಂತೆ ಅದು ಆರಕ್ಕೇರಿತು ನಂತರ ಅದರ ಸಂಖ್ಯೆ ಇಡೀ ರಾಜ್ಯದಲ್ಲೆಡೆ ಅಲ್ಲದೆ ದೇಶದಲ್ಲೆಡೆ ವ್ಯಾಪಿಸಿತು ಈ ದಾರಿ ಹಿಡಿದು ಯೋಚಿಸಿ ಇದರ ಹಿಂದೆ ಇರುವ ಹುನ್ನಾರಗಳೇನು ಅಂತ..?!

# ಎಲ್ಲರವ ನಮ್ಮಣ್ಣ ಈ ಇಮ್ಮಣ್ಣ

ಇಂಥವರು



ಫೆಬ್ರವರಿ 15, ಜೆ.ಎಂ. ಇಮಾಂರವರ ಜನುಮ ದಿನ. ಇಂದಿಗೆ ಇಮಾಂರವರು ಹುಟ್ಟಿ 125 ವರ್ಷಗಳು ಸಂದವು. ಜಗಳೂರು ಮಹಮ್ಮದ್ ಇಮಾಂರವರು (15-02-1897 ರಿಂದ 03-02-1983) ಈ ನಾಡು ಕಂಡ ಅಪರೂಪದ ಧೀಮಂತ ಹಾಗೂ ಸಂಪನ್ನ ರಾಜಕಾರಣಿ. ರಾಜಕೀಯ ರಂಗದಲ್ಲಿ ಮಾತ್ರವಲ್ಲ, ಸಾಹಿತ್ಯ, ಶಿಕ್ಷಣ, ಕೃಷಿ, ನೀರಾವರಿ, ಭಾವೈಕ್ಯತೆ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಅವರೊಂದು ಅಪ್ಪಟ ಅಪರಂಜಿ. ಮೈಸೂರು ಅರಸರ ಆಳ್ವಿಕೆ ಇರಲಿ, ಪ್ರಜಾಪ್ರಭುತ್ವವೇ ಇರಲಿ ಅಲ್ಲಿ ಇಮಾಂರವರು ತಮ್ಮ ಅಪರೂಪವಾದ ವಿದ್ವತ್ತು, ಶಾಸಕಾಂಗದ ಪಾಂಡಿತ್ಯ, ರಾಜನೀತಿ, ತಜ್ಞತೆ, ಉನ್ನತ ಮೌಲ್ಯಗಳು, ಆದರ್ಶಯುತ ಬದುಕು, ಸರ್ವಧರ್ಮಗಳ ಸಮತಾಭಾವ, ಪರೋಪಕಾರಿ ಬುದ್ಧಿಗಳ ಮೂಲಕ 'ಎಲ್ಲರವ ನಮ್ಮಣ್ಣ ಈ ಇಮ್ಮಣ್ಣ' ಎಂದೇ ಹೆಸರಾದವರು.

ಜಗಳೂರು ಸನಿಹದ ಮರೇನಹಳ್ಳಿಯಲ್ಲಿ 1897 ರಲ್ಲಿ ಜೆ. ಬಡೇಸಾಬ್ ಹಾಗೂ ಚಮನ ಬೀ ದಂಪತಿಗಳ ಒಬ್ಬನೇ ಮಗನಾಗಿ ಜನಿಸಿದ ಇಮಾಂರವರು ಜಗಳೂರು, ಚಿತ್ರದುರ್ಗ ಹಾಗೂ ಮದ್ರಾಸ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ, 3 ವರ್ಷಗಳ ಕಾಲ ಚಿತ್ರದುರ್ಗದಲ್ಲಿ ವಕೀಲಿಕೆ ಮಾಡಿದರಾದರೂ ರಾಜಕೀಯ ಒಲವಿದ್ದ ಕಾರಣ ರಾಜಕಾರಣಿಯಾದರು. ಅದು ಈ ನಾಡಿಗೆ ಒಳಿತೇ ಆಯಿತು. ಇಮಾಂರವರ ಪ್ರತಿಭೆಯನ್ನು ಗುರುತಿಸಿದ ಮೈಸೂರು ಮಹರಾಜರು 1928 ರಲ್ಲಿಯೇ ಇವರನ್ನು ಮೈಸೂರು ವಿಶ್ವವಿದ್ಯಾಲಯದ ಕೌನ್ಸಿಲ್ ಹಾಗೂ ಸೆನೆಟ್ ಸದಸ್ಯರನ್ನಾಗಿ ನೇಮಕ ಮಾಡಿದರು. 1928 ರಿಂದ 1940, 1946 ರಿಂದ 1951 ರವರೆಗೆ ಇಮಾಂರವರು ಅಲ್ಲಿದ್ದು ಶಿಕ್ಷಣ ಕ್ಷೇತ್ರದಲ್ಲಿ ಒಂದು ಮೌನ ಕ್ರಾಂತಿಯನ್ನೇ ಮಾಡಿದರು. 1930 ರಲ್ಲಿಯೇ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿಯೂ ನೇಮಕವಾದರು. ಅದೇ ಕಾಲಕ್ಕೆ ಚಿತ್ರದುರ್ಗ ಜಿಲ್ಲಾ ಬೋರ್ಡ್‌ನ ಅಧ್ಯಕ್ಷತೆ ಇವರನ್ನು ಅಪ್ಪಿಕೊಂಡಿತು. 1933 ರಿಂದ 1936 ರವರೆಗೆ ಇಮಾಂರವರು ಜಗಳೂರು ಮುನಿಸಿಪಲ್ ಕೌನ್ಸಿಲ್‌ನ ಪ್ರಥಮ ಅಧ್ಯಕ್ಷರಾದರು. 1936 ರಿಂದ 40 ರವರೆಗೆ ಅವರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಕೈಗೊಂಡ ಗ್ರಾಮೀಣ ಅಭಿವೃದ್ಧಿ ಕೆಲಸಗಳು ಸಾಮಾನ್ಯ ಜನರಿಗೆ ಅತ್ಯಂತ ಉಪಯುಕ್ತವಾದವು. 1941 ರಿಂದ 1945 ರವರೆಗೆ ಇಮಾಂರವರು ಮೈಸೂರು ಮಹರಾಜರ ಆಳ್ವಿಕೆಯ ಮೈಸೂರು ರಾಜ್ಯದಲ್ಲಿ ಶಿಕ್ಷಣ, ರೇಷ್ಮೆ, ಅಬಕಾರಿ, ನೀರಾವರಿ ಹಾಗೂ ಲೋಕೋಪಯೋಗಿ ಸಚಿವರಾಗಿ ಕೈಗೊಂಡ ಕಾರ್ಯಗಳು ಇಂದಿಗೂ ಅಜರಾಮರವಾಗಿ ಉಳಿದಿವೆ. ಇವರ ಕಾರ್ಯವನ್ನು ಮೆಚ್ಚಿ 1945 ರಲ್ಲಿ ಮಹರಾಜರು "ಮುಷೀರ್‌ಉಲ್ ಮುಲ್ಕ್" ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಕರ್ನಾಟಕದ ಮೊದಲ 4 ಮುಖ್ಯಮಂತ್ರಿಗಳ ಕಾಲದಲ್ಲಿ ಇವರು ವಿರೋಧಪಕ್ಷದ ನಾಯಕರಾಗಿದ್ದದ್ದು ಒಂದು ವಿಶೇಷ. ವಿಧಾನಸೌಧದ ಕಟ್ಟಡದಲ್ಲಿ ಕೆತ್ತಲಾಗಿರುವ "ಸರ್ಕಾರದ ಕೆಲಸ ದೇವರ ಕೆಲಸ" ಎಂಬ ಧ್ಯೇಯವಾಕ್ಯದ ರೂವಾರಿ ಇಮಾಂರವರು ಎಂಬುದು ಬಹಳ ಜನರಿಗೆ ತಿಳಿಯದ ಸಂಗತಿ. 1957ರಲ್ಲಿ ಇಮಾಂರವರು ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಮೂಲಕ ಚಿತ್ರದುರ್ಗ / ತುಮಕೂರು ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು. 1971 ರಲ್ಲಿ ಮತ್ತೆ ಪುನರಾಯ್ಕೆಯಾದರು. ಲೋಕಸಭೆಯ ಹಂಗಾಮಿ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸಿದರು. ಸಮಾಜವಾದ ಮತ್ತು ಕೋಮುರಹಿತ ರಾಜಕಾರಣ ಇಮಾಂರವರ 2 ವಿಶಿಷ್ಟ ಗುಣ. "ಇಮಾಂರವರು ಸಾರ್ವಜನಿಕ ಜೀವನಕ್ಕೆ ಒಂದು ಅಲಂಕಾರಿಕ ಪ್ರಾಯವಾದ ವ್ಯಕ್ತಿ. ಅವರೊಂದು ಶೃತಿ ಮಾಡಿಟ್ಟ ವೀಣೆಯಂತೆ. ಎಂದು ಪಾಟೀಲ ಪುಟ್ಟಪ್ಪನವರು ಇಮಾಂರವರನ್ನು ಬಣ್ಣಿಸಿದ್ದಾರೆ. ಅಟಲ್ ಬಿಹಾರಿ ವಾಜಪೇಯಿ, ಜಯಪ್ರಕಾಶ್ ನಾರಾಯಣ್, ಬಿ.ಡಿ. ಜತ್ತಿ, ಆಚಾರ್ಯ ಕೃಪಲಾನಿ, ಅಶೋಕ ಮೆಹ್ತಾರಂತಹ ಹಿರಿಯರ ಒಡನಾಟದಲ್ಲಿದ್ದ ಇಮಾಂರವರು ಅವರೆಲ್ಲರ ಅಚ್ಚುಮೆಚ್ಚಿನವರಾಗಿದ್ದರು. ವಾಜಪೇಯಿಯವರು ಇಮಾಂರವರನ್ನು ಹೀಗೆ ಸ್ಮರಿಸುತ್ತಾರೆ. "ಇಮಾಂರವರು ಭಾರತದ ಹಿಂದೂ-ಮುಸ್ಲಿಂ ಸೌಹಾರ್ದತೆಯ ಪ್ರತೀಕ. ಅವರ ಜೀವನ ನಮಗೊಂದು ದೀಪದಂತೆ". ಇಮಾಂರವರು ರಾಜಕಾರಣದ ಜೊತೆಗೆ ಸಾಹಿತ್ಯ ಮತ್ತು ಕ್ರೀಡೆಗಳಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ಅವರು ಬರೆದ ಮೈಸೂರು ಆಗ ಮತ್ತು ಈಗ ಎಂಬ ಕೃತಿ ಅಪಾರ ಜನಮನ್ನಣೆ ಪಡೆದಿದೆ. ಗ್ರಾಮೀಣ ಜನರ ಜೀವನಾಡಿಯಾಗಿ ಇಮಾಂರವರು ಹಳ್ಳಿಗಳ ಅಭಿವೃದ್ಧಿಗಾಗಿ ಸಾವಿರಾರು ಕೆರೆಗಳನ್ನು ಕಟ್ಟಿಸಿದ್ದಾರೆ. ಮತ್ತು ಗ್ರಾಮೀಣ ರಸ್ತೆ, ಸೇತುವೆಗಳನ್ನು ನಿರ್ಮಿಸಿದ್ದಾರೆ ಇವರ ಪ್ರಾಮಾಣಿಕ ಹಾಗೂ ಜನಹಿತ ಕಾರ್ಯಗಳ ದ್ಯೋತಕವಾಗಿ ಅವು ಇಂದಿಗೂ ಉತ್ತಮವಾಗಿ ರಾರಾಜಿಸುತ್ತಿವೆ.

ಇಮ್ಮಣ್ಣನಂತಹವರ ಸಂತತಿ ಈಗ ಕಡಿಮೆಯಾಗುತ್ತಿದೆ. ಅವರ ಕೆಲಸ ಕಾರ್ಯಗಳಿಂದ ಸ್ಫೂರ್ತಿ ಪಡೆದು ಜನಸೇವೆ ಮಾಡುವ ಜನಪ್ರತಿನಿಧಿಗಳ ತಂಡ ಈಗ ರೂಪುಗೊಳ್ಳಬೇಕಿದೆ.

●ಎನ್.ಟಿ. ಎರ್ರಿಸ್ವಾಮಿ, ನಿವೃತ್ತ ಕೆನರಾಬ್ಯಾಂಕ್ ಡಿ.ಎಂ., ಜಗಳೂರು.



ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ


ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

ಅನಾವರಣ

**ಪತ್ರಿಕೆಗೆ ಚಂದಾದಾರರಾಗಿ ಮತ್ತಷ್ಟು ಬೆಳೆಯಲು ತಾವೂ ಬಾಗಿಯಾಗಿ ಚಂದಾದಾರರ ವಿವರ**

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

# ಸಾಮಾಜಿಕ ಕಾಳಜಿ ಎಂದರೆ ಇದೇ ಅಲ್ಲವೇ..?





ರಾಜಕಾರಣದ ವ್ಯವಸ್ಥೆ ಮತ್ತು ಅಧಿವೇಶನದ ಅವ್ಯವಸ್ಥೆ ಕುರಿತು ಇತ್ತೀಚೆಗೆ ಸಭಾಪತಿ ಬಸವರಾಜ್ ಹೊರಟ್ಟಿ ಮತ್ತು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತೀವ್ರ ಆತಂಕ ವ್ಯಕ್ತಪಡಿಸಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ.

ವಿಶ್ವೇಶ್ವರ ಹೆಗಡೆ ಕಾಗೇರಿ ಅವರು 'ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕು ಈ ಕುರಿತು ಎಲ್ಲರಿಗೂ ಮನವರಿಕೆಯಾದರೆ ಎರಡು ದಿನಗಳ ಕಾಲ ಚರ್ಚೆ ಮಾಡಲಾಗುತ್ತದೆ' ಎಂದಿದ್ದರು ಆದರೆ ಈ ಕುರಿತ ಪ್ರಸ್ತಾಪ ನೆನಗುದಿಗೆ ಬಿದ್ದಿದೆ ಯಾರೂ ಇದರ ಬಗ್ಗೆ ಚರ್ಚಿಸಲು ಸಿದ್ದರಿಲ್ಲ ಯಾಕೆಂದರೆ ಈ ಚುನಾವಣೆಗಳು ಯಾವ ರೀತಿ ನಡೆಯುತ್ತವೆ ಎನ್ನುವುದು ಈಗ ಎಲ್ಲರಿಗೂ ತಿಳಿದಿರುವ ವಿಷಯ; ಹೀಗಿರುವಾಗ ಚುನಾವಣೆ ಸುಧಾರಣೆ ಎನ್ನುವುದು ಕೇವಲ ಮಾತಿಗೆ ಮಾತ್ರ ಸೀಮಿತವಾಗಿದೆ. ಸಭಾಪತಿ ಮತ್ತು ಸಭಾಧ್ಯಕ್ಷರು ಇಬ್ಬರು ಸಮರ್ಥ ನಾಯಕರಿದ್ದಾರೆ ಇವರಿಬ್ಬರೂ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಆಸಕ್ತರಾಗಿದ್ದರು ಪಕ್ಷದ ಧುರೀಣರು ಇದಕ್ಕೆ ಸೊಪ್ಪು ಹಾಕುತ್ತಿಲ್ಲ ಎನ್ನುವುದು ಈಗ ಬೇಸರದ ಸಂಗತಿ.

ಸಭಾಪತಿ ಬಸವರಾಜ ಹೊರಟ್ಟಿ ಮತ್ತು ವಿಶ್ವೇಶ್ವರ ಹೆಗಡೆ ಕಾಗೇರಿ ನಿಜಕ್ಕೂ ಈ ಎರಡು ಸದನಗಳ ಗೌರವಕ್ಕೆ ದ್ಯೂತಕವಾದವರು ರಾಜಕಾರಣದಲ್ಲಿ ಒಂದು ಗಾಂಭೀರ್ಯಕ್ಕೆ ಮತ್ತು ಸೈದ್ಧಾಂತಿಕ ನಿಲುವುಗಳಿಗೆ ಬದ್ದರಾದವರು ಆದರೆ, ಅವರ ಮಾತುಗಳಿಗೆ ಅವರ ನಿರ್ಧಾರಗಳಿಗೆ ಪಕ್ಷಗಳು ಸೊಪ್ಪು ಹಾಕುತ್ತಿಲ್ಲ ಹೀಗಾಗಿ ಅವರ ಸಿದ್ಧಾಂತಗಳು ಮತ್ತು ಅವರ ನಂಬಿಕೆಗಳು ಅವರು ತರಲು ಹೊರಟಿರುವ ಸುಧಾರಣೆಗೆ ಹಿನ್ನೆಡೆಯಾಗಿದೆ.

ಇನ್ನೂ ಸಭಾಪತಿ ಬಸವರಾಜ್ ಹೊರಟ್ಟಿ ಅವರು ವಿಧಾನಪರಿಷತ್‌ಗೆ ಆಯ್ಕೆ ಆಗುವವರ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ .ಪರಿಷತ್ ಒಂದು ಚಿಂತಕರ ಚಾವಡಿ ಇದ್ದಹಾಗೆ ಈ ಚಾವಡಿಗೆ ಬರುವವರೆಲ್ಲರೂ ಹಣವಂತರೂ ವ್ಯಾಪರಿಗಳು, ತಜ್ಞರಲ್ಲದವರು ಬಂದು ಈ ಸಭೆಯಲ್ಲಿನ ಚರ್ಚೆಗಳ ಬದಲಿಗೆ ರಾಜಕಾರಣ ಮಾಡುತ್ತಿದ್ದಾರೆ ಎನ್ನುವ ದಾಟಿಯಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ. ನಿಜ! ಯಾರೋ ಪುಸ್ತಕ ಬರೆದ ತಕ್ಷಣ ಅವರು ಸಾಹಿತಿಗಳಾಗುವುದಿಲ್ಲ ಅಂತವರನ್ನು ಸಾಹಿತ್ಯ ಕೋಟಾದಲ್ಲಿ ವಿಧಾನಪರಿಷತ್‌ಗೆ ನೇಮಕ ಮಾಡುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ.

ಜೊತೆಗೆ ಈ ಸದನ ಡಿವಿಜಿ,ಸಿದ್ದಲಿಂಗಯ್ಯ, ಖಾದ್ರಿ ಶಾಮಣ್ಣ,ಎ.ಕೆ.ಸುಬ್ಬಯ್ಯ ನಂತವರು ಇದ್ದು ಸದನಕ್ಕೆ ಒಂದು ಗೌರವ ತಂದಿದ್ದರು ಸದನದಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತು ತಡರಾತ್ರಿಯವರೆಗೂ ಸದನ ನಡೆಯುತ್ತಿತ್ತು ಆದರೆ ಈಗ ಏನಾಗಿದೆ ಎನ್ನುವ ಆತಂಕವನ್ನು ವ್ಯಕ್ತಪಡಿಸಿದ್ದಾರೆ . ಇದು ನಿಜಕ್ಕೂ ಅಪಾಯಕಾರಿ.

ವಿಧಾನ ಪರಿತಷತ್‌ನಲ್ಲಿ ಇತ್ತೀಚೆಗೆ ಏನಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ, ಸಾಹಿತ್ಯ, ಸಿನಿಮಾ, ಶಿಕ್ಷಣ, ಪತ್ರಿಕೋದ್ಯಮ, ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರನ್ನು ಈ ಸದನಕ್ಕೆ ಆಯ್ಕೆ ಮಾಡಲಾಗುತ್ತಿತ್ತು ಆ ಮೂಲಕ ಸಮಾಜದ ವಿವಿದ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆಗಳು ಕೂಡ ನಡೆದಿರುವುದು ನಮ್ಮ ಕಣ್ಮುಂದೆ ಇವೆ, ಆದರೆ ಈಗ ಏನಾಗುತ್ತಿದೆ..? ಈ ಯಾವುದೇ ಕ್ಷೇತ್ರದಲ್ಲದವರನ್ನು ಇವತ್ತು ವಿಧಾನ ಪರಿತಷತ್‌ಗೆ ತಂದು ಕೂರಿಸಲಾಗುತ್ತಿದೆ, ಸಾಹಿತಿ ಎಂದು ಹೇಳಿಕೊಂಡು ಯಾವುದೋ ಒಂದು ಪುಸ್ತಕವನ್ನು ಬರೆದ ರಾಜಕಾರಣಿಯನ್ನು ತಂದು ಅವರಿಗೆ ಮಣೆ ಹಾಕಲಾಗುತ್ತಿದೆ, ಶಿಕ್ಷಣ ಸಂಸ್ಥೆಗಳನ್ನು ಹೊಂದಿದ ವ್ಯಾಪಾರಿಗಳನ್ನು ಶಿಕ್ಷಣ ತಜ್ಞರೆಂದು ಹೇಳಿಕೊಂಡು ವಿವಿಧ ಪಕ್ಷಗಳು ಅವರನ್ನು ಆ ಕ್ಷೇತ್ರದಿಂದ ನೇಮಕ ಮಾಡುತ್ತಾರೆ, ಇನ್ನೂ ಸಾಮಾಜಿಕ ಕ್ಷೇತ್ರ ಎನ್ನುವ ನೆಪದಲ್ಲಿ ಹಮ್ಮು-ಬಿಮ್ಮಿಲ್ಲದೆ ರಾಜಕಾರಣಿಗಳನ್ನೇ ನೇಮಕ ಮಾಡಲಾಗುತ್ತದೆ ಇದಕ್ಕೆ ನಮ್ಮ ಮುಂದೆ ಹಲವಾರು ಉದಾಹರಣೆಗಳಿವೆ. ಇಂತವರ ಪರಿಷತ್‌ನಲ್ಲಿ ಏನು ಮಾಡಲು ಸಾಧ್ಯ ಅದೇ ರಾಜಕಾರಣ ಅದೇ ಒಂದು ಪಕ್ಷದ ಸಿದ್ಧಾಂತಗಳ ಕುರಿತು ಅರೆಚಾಟ, ಕಿತ್ತಾಟ, ಪ್ರತಿಗಳನ್ನು ಹಿರಿದು ಹಾಕುವ ಬಿನ್ನಾಣಗಳೇ ನಡೆಯುತ್ತವೆಯೇ ಹೊರೆತು . ಶಿಕ್ಷಣ ಕುರಿತು ಸಮಗ್ರವಾದ ಚರ್ಚೆ ಮಾಡಲು ಯಾರು ಸಿದ್ದವಿಲ್ಲ ಇಂದು ಶಿಕ್ಷಣ ಕ್ಷೇತ್ರ ಕುಸಿದು ಹೋಗಿದೆ ಆ ವ್ಯವಸ್ಥೆ ಸರಿಪಡಿಸುವುದು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಹೇಗೆ ಯಾವೆಲ್ಲ ವಿಷಯಗಳು ಪಠ್ಯದಲ್ಲಿದ್ದರೆ ಮಕ್ಕಳ ಜ್ಞಾನಕ್ಕೆ ಪೂರಕವಾಗುತ್ತದೆ ಎನ್ನುವ ಚರ್ಚೆಗಳೇನಾದರೂ ಪರಿಷತ್‌ನಲ್ಲಿ ನಡೆಯುತ್ತವೆಯೇ ಊಹೂ ಯಾವುದೇ ಕಾರಣಕ್ಕೂ ಅಲ್ಲಿ ಇಂತ ವಿಷಯಗಳು ನಡೆಯುವುದಿಲ್ಲ, ಬದಲಾಗಿ ಬೇಡವಾದ ವಿಷಯಗಳ ಕುರಿತು ಅನಾವಶ್ಯಕ ವಾಗ್ವಾದಗಳಾಗುತ್ತವೆ ಒಂದು ಉತ್ತಮ ವಿಷಯ ಕುರಿತು ಯಾರೂ ಚರ್ಚೆ ಮಾಡುವುದೇ ಇಲ್ಲ ಎನ್ನುವುದೇ ಆತಂಕಕಾರಿ ವಿಷಯವಾಗಿದೆ.

ಹಿಂದೆ ಹಲವಾರು ಗಣ್ಯರು ವಿಷಕ್ಕನುಗುಣವಾಗಿ ಮುಕ್ತವಾಗಿ ಚರ್ಚೆ ಮಾಡುತ್ತಿದ್ದರು ಅದನ್ನು ಸರ್ಕಾರ ಆಡಳಿತದಲ್ಲಿ ಜಾರಿಗೊಳಿಸುವ ಕುರಿತು ಒತ್ತಾಯಗಳನ್ನು ಮಾಡುತ್ತಿದ್ದರು ಆದರೆ ಈಗ ಅಂತ ಯಾವುದೇ ಗುಣಾತ್ಮಕ ವಿಷಯಗಳ ಮೇಲೆ ಚರ್ಚೆಗಳಾಗುವುದಿಲ್ಲ. ಬದಲಾಗಿ ಮೊದಲೆ ಎಲ್ಲೋ ನಿವೇಷನಗಳ ಅವ್ಯವಹಾರ, ಇನ್ನೆಲ್ಲೋ ಆದ ಸಣ್ಣ ಗಲಭೆಯನ್ನು ದೊಡ್ಡದಾಗಿ ಮಡುವುದು ಇಂತ ಹಲವಾರು ಬೇಡವಾದ ವಿಷಯಗಳ ಕುರಿತು ನಿರುಪಯುಕ್ತ ಚರ್ಚೆಗಳನ್ನು ಮಾಡಲಾಗುತ್ತದೆ. ಯಾಕೆಂದರೆ ವಿಧಾನ ಪರಿಷತ್ ಎಂಬ ಅನುಭವ ಮಂಟಪಕ್ಕೆ ಬರುವವರೆಲ್ಲರೂ ಅನಾನುಭವಿಗಳು ಎಲ್ಲರೂ ರಿಯಲ್‌ಎಸ್ಟೇಟ್ ಉದ್ಯಮಿಗಳು, ಶಿಕ್ಷಣ ಸಂಸ್ಥೆಗಳು ಹೊಂದಿದ ವ್ಯಾಪಾರಿಗಳೇ ಆಗಿರುವಾಗ ಅನುಭವ ಮಂಟಪದಲ್ಲಿ ಇಂತವರಿಂದ ಇನ್ನೆಂತ ವಿಷಯಗಳ ಚರ್ಚೆಗಳಾಗುತ್ತವೆ. ಅನುಭವವಿಲ್ಲ ಅನಾನಭಿವಿಗಳ ಅವಿವೇಕಗಳು ಪ್ರದರ್ಶನವಾಗುತ್ತವಷ್ಟೆ.


ಇಂತ ಹೊತ್ತಿನಲ್ಲಿ ಸಭಾಪತಿ ಬಸವರಾಜ್ ಹೊರಟ್ಟಿ ಆತಂಕ ವ್ಯಕ್ತಪಡಿಸುವ ಮೂಲಕ ಒಂದು ಸಂವಿಧಾನದ ಆಶಯಗಳಿಗೆ ಧ್ವನಿಯಾಗಿದ್ದಾರೆ ಆದರೆ ಮತ್ತೇ ಇಂತ ಅನುಭವಿಗಳು ಇಂತ ಅನುಭವ ಮಂಟಪಕ್ಕೆ ಬರಲು ಸಾಧ್ಯವೇ ಎನ್ನುವ ಪ್ರಶ್ನೆ. ಇನ್ನೂ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕೂಡ ಚುನಾವಣೆ ವ್ಯವಸ್ಥೆ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ, ಜೊತೆಗೆ ಸುಧಾರಣೆಗೆ ಒತ್ತನೀಡುವ ದ್ವನಿಯಾಗಿದ್ದಾರೆ ಇಂತವರ ಕಾಳಜಿಯಿಂದ ಸದ್ಯ ಒಂದಿಷ್ಟು ಸಮಾಜದಲ್ಲಿ ಉತ್ತಮ ಕೆಲಸಗಳಾಗುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

# ನ್ಯೂಸ್ ಚಾನಲ್‌ಗಳ ರೇಟಿಂಗ್‌ನಲ್ಲಿ ಮಹಾ ಕುಸಿತ..!

**ಹಿಟ್ & ರನ್**

**ನ್ಯೂಸ್** ಚಾನಲ್‌ಗಳು ಎಂಥಾ ಪರಿಸ್ಥಿತಿಗೆ ತಲುಪಿವೆ ನೋಡಿ! ಸಾಮಾಜಿಕ ಕಳಕಳಿಯೆ ಇಲ್ಲದೆ ಬೇಕಾಬಿಟ್ಟಿ ಸುದ್ದಿಗಳನ್ನು ದಿನ ನಿತ್ಯ ಜನರಿಗೆ ತುರುಕಲು ಹೋಗಿ ಎಂಥಾ ಪರಿಸ್ಥಿತಿಗೆ ಬಂದು ನಿಂತಿವೆ.

ಹೌದು ಕನ್ನಡ ನ್ಯೂಸ್ ಚಾನಲ್‌ಗಳ ಪರಿಸ್ಥಿತಿ ಈಗ ತೀರ ಹದಗೆಟ್ಟಿದೆ, ಸುದ್ದಿಗಳಲ್ಲದ ಸುದ್ದಿಗಳನ್ನು ಇಡೀ ದಿನ ಪ್ರಸಾರ ಮಾಡುವುದು, ಯಾವಾಗಲೋ ಆದ ಸುದ್ದಿಗಳನ್ನು ಮಹಾಬ್ರೇಕಿಂಗ್ ಎಂದು ಬಿಂಬಿಸುವುದು, ಅನವಾಶ್ಯಕವಾಗಿ ಬೇಡದ ಸುದ್ದಿಗಳನ್ನು ಎಳೆಯುತ್ತಾ ಹೋಗುವುದು. ಹೀಗೆ ಹತ್ತು ಹಲವಾರು ಬೇಡದ ಸುದ್ದಿಗಳನ್ನು ನೀಡುತ್ತಾ ಹೋಗಿ ಈಗ ರೇಟಿಂಗ್ ನಲ್ಲಿ ಹಿಂದೆ ಬಿದ್ದಿವೆ. ಎಸ್ ಈ ಹಿಂದೆ ಪ್ರತಿವಾರ ಯಾವ ಚಾನೆಲ್ ಎಷ್ಟು ಟಿಆರ್‌ಪಿ ಇದೆ ಎನ್ನುವುದನ್ನು ತಿಳಿಸಲಾಗುತ್ತಿತ್ತು ಆದರೆ ಈಗ ಅದು ಆಗುತ್ತಿಲ್ಲ ಕಾರಣ ರಿಪಬ್ಲಿಕ್ ಚಾನಲ್‌ನ ಮುಖ್ಯಸ್ಥರು ಅದರ ದಂಧೆ ಮಾಡಲು ಹೋಗಿ ಸಿಕ್ಕಿಹಾಕಿಕೊಂಡ ನಂತರ ಈಗ ವಾರದ ಟಿಆರ್‌ಪಿ ರೇಟ್ ನಿಂತಿದೆ ಬದಲಾಗಿ ಒಟ್ಟಾರೆ ಕನ್ನಡ ನ್ಯೂಸ್ ಚಾನಲ್‌ಗಳ ರೇಟ್ ಎಷ್ಟು ಎನ್ನುವದನ್ನು ಪ್ರತಿ ವಾರವೂ ತಿಳಿಸಲಾಗುತ್ತದೆ ಅದರಂತೆ ಈ ವಾರ ಕೇವಲ 194ಕ್ಕೆ ಬಂದು ನಿಂತಿದೆ ಇದರ ಹಿಂದಿನ ವಾರ235 ಇತ್ತು ಆಂದರೆ ವಾರ ವಾರವೂ ರೇಟಿಂಗ್‌ನಲ್ಲಿ ಕುಸುಯುತ್ತಾ ಸಾಗುತ್ತಿದೆ ಅಂದರೆ




ಕನ್ನಡಿಗರು ನ್ಯೂಸ್ ಚಾನಲ್‌ಗಳ ವೀಕ್ಷಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ ಅಂತ.

ಇದರ ಆದಾರದ ಮೇಲೆಯೇ ಕಮರ್ಷಿಯಲ್ ಅಂದರೆ ಜಾಹಿರಾತುಗಳ ರೇಟುಗಳು ಕೂಡ ನಿರ್ಧಾರವಾಗುತ್ತದೆ. 2008ರಲ್ಲಿ ಒಟ್ಟಾರೆ ಕನ್ನಡದ ನ್ಯೂಸ್ ಚಾನಲ್‌ಗಳ ರೇಟು 600 ಇತ್ತು ಆ ನಂತರ 2010 ರಲ್ಲಿ 530ಕ್ಕಿಳಿದಿತ್ತು 2015 ರಲ್ಲಿ 450ಕ್ಕೆ ಬಂದಿತ್ತು ಬರು ಬರುತ್ತಾ ಅದರ ರೇಟ್ ಕಡಿಮೆಯಾಗುತ್ತಾ ಇದೆ 2018ರಲ್ಲಿ 420 ಇತ್ತು ಹೀಗೆ ವರ್ಷ ಮತ್ತು ವಾರಕ್ಕೊಮ್ಮೆ ವೀಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದೆ . ಇದಕ್ಕೆ ಪ್ರಮುಖ ಕಾರಣ ನ್ಯೂಸ್ ಚಾನಲ್‌ಗಳ ದುಂಡವರ್ತನೆಗಳು. ತಮಗೆ ಬೇಕಾದ ಸುದ್ದಿಗಳನ್ನು ಮಾತ್ರ ಇಡೀ ದಿನ ನೀಡುವುದು . ಕನ್ನಡ ನ್ಯೂಸ್ ಚಾನಲ್‌ಗಳು ಪ್ರಸಾರ ಮಾಡುವ ಸುದ್ದಿಗಳ ಗುಣಮಟ್ಟದ ಜೊತೆಗೆ ಚಾನಲ್ ಮಾಲೀಕರು ತಮಗೆ ಬೇಕಾದ ತಮಗೆ ಆಧಾರ ಬರುವ ಸುದ್ದಿಗಳನ್ನು ಮಾತ್ರ ಪ್ರಸಾರ ಮಾಡಿಸುತ್ತಾ ಹೋಗುತ್ತಿದ್ದಾರೆ ಹೀಗಾಗಿ ಬೇಡದ ಸುದ್ದಿಗಳನ್ನು ಜನರಿಗೆ ಹೇಳುತ್ತಾ ಹೋದರೆ ಹೇಗೆ ವೀಕ್ಷಕರು ಅದನ್ನು ನಿರಾಕರಿಸುತ್ತಾರೆ ಎನ್ನುವುದಕ್ಕೆ ಇದೇ ಸಾಕ್ಷಿಯಾಗಿದೆ. ಕಳೆದ ಎರಡು ವರ್ಷದ ಅವಧಿಯಲ್ಲಿ ಹತ್ತು ಸುದ್ದಿಗಳನ್ನು ಹೊರೆತು ಪಡಿಸಿ ಬೇರೆ ಸುದ್ದಿಗಳೆ ಇಲ್ಲ ಎನ್ನುವಂತೆ ಬಿಂಬಿಸಿದ್ದೇ ಈ ನ್ಯೂಸ್ ಚಾನಲ್‌ಗಳ ಮಹಾ ಸುದ್ದಿ. ಹೌದು ಕೊರೊನಾ, ದರ್ಶನ್ ವಿವಾದ, ಡ್ರಗ್ಸ್, ಮೇಕೆದಾಟು, ಹಿಜಾಬ್,ಕೆಲವು ರಾಜಕೀಯ ವಿವಾದಗಳ ಕುರಿತು ಸುದ್ದಿಗಳನ್ನು ಬಿಟ್ಟರೆ ಬೇರೆ ಸುದ್ದಿಗಳೇ ಇಲ್ಲ ಎನ್ನುವಂತೆ ಬಿಂಬಿಸಿವೆ. ಇಡೀ ದಿನ ಇವೇ ಸುದ್ದಿಗಲನ್ನು ಪ್ರಸಾರ ಮಾಡುವ ಮೂಲಕ ವೀಕ್ಷಕರ ಅಲಸ್ಯಕ್ಕೆ ಕಾರಣವಾಗಿವೆ ಹೀಗಾಗಿಯೇ ಈಗ ನ್ಯೂಸ್ ಅನ್ನು ನೋಡುವುದೇ ಕಡಿಮೆ ಮಾಡಿದ್ದಾರೆ ಸಾಕಷ್ಟು ವೀಕ್ಷಕರು ಹಾಗಾಗಿಯೇ ಪ್ರತಿ ವಾರವೂ ರೇಟಿಂಗ್‌ನಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಲೇ ಇವೆ. ಇಷ್ಟಾದರೂ ಈ ನ್ಯೂಸ್ ಚಾನಲ್‌ಗಳು ಬುದ್ದಿ ಬಂದಂತೆ ಕಾಣುತ್ತಿಲ್ಲ ಪ್ಯಾನಲ್ ನಲ್ಲಿ ಕೂತು ಅರೆಚಾಟ ನಮ್ಮದೇ ಬ್ರೇಕಿಂಗ್ ಎಂಬುವ ಹಬ್ಬರಗಳು ಇನ್ನೂ ಜೋರಾಗುತ್ತಿವೆ ಆ ಮೂಲಕ ತಮ್ಮ ರೇಟಿಂಗ್ ಅನ್ನು ಹೆಚ್ಚಿಕೊಳ್ಳುತ್ತಾದ್ದಾರೆಯೇ ಹೊರೆತು ನ್ಯೂಸ್ ಚಾನಲ್‌ನ ರೇಟಿಂಗ್ ಅಲ್ಲ ಎನ್ನುವುದು ಸತ್ಯ.

# ಯೂಪಿಯಲ್ಲಿ ಮೋಶಾ ಚಮತ್ಕಾರಕ್ಕೆ ಅಗ್ನಿಪರೀಕ್ಷೆ

ದೆಹಲಿ ದೃಷ್ಟಿ

ಡಿ.ಉಮಾಪತಿ
ಹಿರಿಯ ಪತ್ರಕರ್ತರು





ಮೊದಲ ಎರಡು ಹಂತಗಳ ಮತದಾನದಲ್ಲಿ ಉತ್ತರಪ್ರದೇಶದಲ್ಲಿ ಬಿಜೆಪಿ ಮುಳುಗುವ ನಿಶ್ಚಿತ ಸುಳಿವುಗಳು ಮೇಲೆ ತೇಲಿವೆ. ಮೋದಿ-ಶಾ-ಯೋಗಿ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ಹೀಗಾಗಿ ಮುಂಬರುವ ದಿನಗಳಲ್ಲಿ ಈ ರಾಜ್ಯವು ಬಿಜೆಪಿ ಬಡಿದೆಬ್ಬಿಸಬಹುದಾದ ಭಾವೋದ್ವೇಗದ ಬಿರುಗಾಳಿಗೆ ಸಿಕ್ಕರೆ ಅಚ್ಚರಿಪಡಬೇಕಿಲ್ಲ.

ಹಾಲಿ ಯೋಗಿ ಸರ್ಕಾರ ಮಾತ್ರವಲ್ಲ, ಎರಡು ವರ್ಷಗಳ ನಂತರ 2024ರಲ್ಲಿ ಮೋದಿ ಸರ್ಕಾರದ ಅಳಿವು ಉಳಿವನ್ನೂ ಪ್ರಭಾವಿಸುವ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗೆ ಏಳು ಹಂತದ ಮತದಾನ ಜರುಗಿದೆ. ಸೋಮವಾರ ಎರಡನೆಯ ಹಂತದ ಮತದಾನ ಮುಗಿದಿದ್ದು ಬಿಜೆಪಿಯನ್ನು ಕಳವಳಕ್ಕೆ ತಳ್ಳಿದೆ.

ಕಳೆದ ಸಲ ಬೀಸಿದ್ದ ಬಿಜೆಪಿ ಪರ ಗಾಳಿ ಈ ಸಲ ಕಂಡು ಬಂದಿಲ್ಲ. ಪರವಾದ ಗಾಳಿ ಒತ್ತಟ್ಟಿಗಿರಲಿ, ಮೊದಲ ಎರಡು ಹಂತಗಳಲ್ಲಿ ಎದುರುಗಾಳಿ ಬೀಸಿರುವ ಸೂಚನೆಗಳಿವೆ. ಬಿಜೆಪಿ ಬೆಂಬಲಿಗರು ಉತ್ಸಾಹ ಕಳೆದುಕೊಂಡಿದ್ದು ಮತಗಟ್ಟೆಯಿಂದ ದೂರ ಉಳಿದಿದ್ದಾರೆ. ಗೋವಾ ಮತ್ತು ಉತ್ತರಾಖಂಡದಲ್ಲಿ ಬಿಜೆಪಿ ತನ್ನ ಸರ್ಕಾರಗಳನ್ನು ಕಳೆದುಕೊಳ್ಳುವ ದುಸ್ಥಿತಿ ಎದುರಿಸಿದೆ.



ಉತ್ತರಪ್ರದೇಶದಲ್ಲಿ ಉಳಿದ ಆರು ಹಂತಗಳಲ್ಲಿ ತಡವಾಗಿಯಾದರೂ ತನ್ನ ರಣತಂತ್ರ ಬದಲಿಸಿ 'ಬಿಜೆಪಿಗೆ ಚುನಾವಣೆಗಳನ್ನು ಗೆದ್ದುಕೊಡುವ ಜಾದೂಗಾರ ಅಮಿತ್ ಶಾ 'ಚಮತ್ಕಾರ' ಮಾಡದೆ ಹೋದರೆ ಸೋಲು ಗೋಡೆ ಮೇಲಿನ ಬರೆಹ.

ಹಿಂದೂ-ಮುಸ್ಲಿಮ್ ಧೃವೀಕರಣ, ಯಾದವೇತರ ಹಿಂದುಳಿದ ಜಾತಿಗಳು ಮತ್ತು ಮೇಲ್ಜಾತಿಗಳ ಸಾಮಾಜಿಕ ಎಂಜಿನಿಯರಿಂಗ್ ನ ಬಿಜೆಪಿ ತಂತ್ರಗಳು ಶಿಖರ ಮುಟ್ಟಿಬಿಟ್ಟಿವೆ. ಅಲ್ಲಿಂದ ಕೆಳಗೆ ಇಳಿಯಬೇಕೇ ವಿನಾ ಮೇಲೇರುವ ಸಾಧ್ಯತೆ ಇಲ್ಲ. ಶಿಖರದಲ್ಲೇ ಉಳಿಯುವ ಶಕ್ತಿಯೂ ಬಿಜೆಪಿಗೆ ಉಳಿದಿಲ್ಲ. ಧೃವೀಕರಣದ ಹೊಸ ಪ್ರಯತ್ನಗಳು ಫಲ ನೀಡುತ್ತಿಲ್ಲ. ಧೃವೀಕರಣದ ಬೆಂಕಿಗೆ ಅರಿವಿಲ್ಲದೆ ತುಪ್ಪ ಸುರಿಯುವ ತಪ್ಪುಗಳನ್ನು ಪ್ರತಿಪಕ್ಷಗಳು ಮಾಡುತ್ತಿಲ್ಲ. ಯೋಗಿ-ಮೋದಿ ಅವರನ್ನು ಅಭಿವೃದ್ಧಿ ಕಾರ್ಯಗಳ ತಕ್ಕಡಿಯಲ್ಲಿಟ್ಟು ನೋಡಲಾಗುತ್ತಿದೆ. ಈ ದಿಸೆಯಲ್ಲಿ ಇಬ್ಬರ ಸಾಧನೆಗಳೂ ನಿರಾಶಾದಾಯಕ.




2014ರ ಲೋಕಸಭೆ, 2017ರ ವಿಧಾನಸಭೆ ಹಾಗೂ 2019ರ ಲೋಕಸಭೆ ಚುನಾವಣೆಗಳಲ್ಲಿ ಉತ್ತರಪ್ರದೇಶದ ಮತದಾರರು ನರೇಂದ್ರ ಮೋದಿ ಮತ್ತು ಬಿಜೆಪಿಗೆ ಅಭೂತಪೂರ್ವ ಗೆಲುವು ಗಳಿಸಿಕೊಟ್ಟಿದ್ದಾರೆ. ಮೂರು ಚುನಾವಣೆಗಳ ಸತತ ಗೆಲುವು ಆಳುವ ಪಕ್ಷ ಬಿಜೆಪಿಯಲ್ಲಿ ಅತಿಯಾದ ಆತ್ಮವಿಶ್ವಾಸ ಮೂಡಿಸಿದ್ದುಂಟು.

ಆದರೆ ಇತ್ತೀಚೆಗೆ ಸಿಡಿದಿರುವ ಸಂಕೇತಗಳು ಬಿಜೆಪಿಯ ನಿದ್ದೆ ಕೆಡಿಸಿವೆ. ದೆಹಲಿಯ ಗಡಿಗಳಲ್ಲಿ ಹದಿಮೂರು ತಿಂಗಳ ಕಾಲ ಜರುಗಿದ ರೈತ ಚಳವಳಿ ವಿಶೇಷವಾಗಿ ಪಶ್ಚಿಮ ಉತ್ತರಪ್ರದೇಶದಲ್ಲಿ ಬಿಜೆಪಿಯ ಕಾಲಕೆಳಗಿನ ನೆಲವನ್ನು ನಡುಗಿಸಿದೆ. ಚುನಾವಣೆಗಳಲ್ಲಿ ಪಶ್ಚಿಮ ಉತ್ತರಪ್ರದೇಶದಲ್ಲಿ ಬೀಸುವ ಗಾಳಿ ಈ ದೈತ್ಯ ರಾಜ್ಯದ ಇತರೆ ಸೀಮೆಗಳ ಮೇಲೂ ಪ್ರಭಾವ ಬೀರುತ್ತದೆಂಬ ನಂಬಿಕೆಗೆ ಆಧಾರಗಳಿವೆ.

ಸಾಮಾಜಿಕ-ಆರ್ಥಿಕ-ರಾಜಕೀಯ ನೆಲೆಗಳಲ್ಲಿ ಕರ್ನಾಟಕದ ಒಕ್ಕಲಿಗ ಜನಾಂಗಕ್ಕೆ ಹೋಲಿಸಬಹುದಾದ ಉತ್ತರ ಭಾರತದ ಬಲಿಷ್ಠ ಜಾತಿ ಜಾಟರದು. ವಿಶೇಷವಾಗಿ ಪಶ್ಚಿಮ ಉತ್ತರಪ್ರದೇಶದಲ್ಲಿ ಅವರ ಜನಸಂಖ್ಯಾ ಪ್ರಮಾಣ ಶೇ.20ಕ್ಕೂ ಹೆಚ್ಚು. ರಾಜ್ಯದಲ್ಲಿ ಇವರ ಪ್ರಮಾಣ ಶೇ.2ರಷ್ಟು. ಮೊದಲ ಹಂತದ ಮತದಾನ ಜರುಗಿರುವ ಪಶ್ಚಿಮ ಉತ್ತರಪ್ರದೇಶದಲ್ಲಿ ಈ ಜನಾಂಗದ ಪ್ರಭಾವ ಮಾಮೂಲಾಗಿಯೇ ಬಲು ದಟ್ಟ.

ಮೋದಿಯವರು ಮೂರು ಕೃಷಿ ಕಾನೂನುಗಳನ್ನು ವಾಪಸು ತೆಗೆದುಕೊಂಡ ನಂತರ ರೈತರ ನೈತಿಕ ಸ್ಥೈರ್ಯ ಎತ್ತರದಲ್ಲಿದೆ. ಗೋರಕ್ಷಣೆಯ ಹೆಸರಿನಲ್ಲಿ ಯೋಗಿ ಸರ್ಕಾರ ತಂದಿರುವ ಕಾನೂನಿನ ಫಲವಾಗಿ ಬೀಡಾಡಿ ದನಗಳು ಹಿಂಡು ಹಿಂಡಾಗಿ ಹೊಲಗಳ ನುಗ್ಗಿ ಮೇಯುತ್ತಿವೆ. ಅಡುಗೆ ಅನಿಲ ಸಿಲಿಂಡರ್ ದರ, ಟ್ರ್ಯಾಕ್ಟರುಗಳಿಗೆ ತುಂಬಿಸಬೇಕಿರುವ ಡೀಸೆಲ್ ದರ ಮುಗಿಲು ಮುಟ್ಟಿರುವ ಕುರಿತು ಭಾರೀ ಅಸಮಾಧಾನ ನೆಲೆಸಿದೆ. ಮೂರೂ ಚುನಾವಣೆಗಳಲ್ಲಿ ಬಲವಾಗಿ ಬಿಜೆಪಿಯ ಕೈ ಹಿಡಿದಿದ್ದ ಯುವಜನರು ನಿರುದ್ಯೋಗ ಸಮಸ್ಯೆಯಿಂದ ಭ್ರಮನಿರಸನ ಹೊಂದಿದ್ದಾರೆ.

ಇದೇ ಹತ್ತರಂದು ನಡೆದ ಮೊದಲ ಹಂತದ ಮತದಾನ ಹನ್ನೊಂದು ಜಿಲ್ಲೆಗಳಲ್ಲಿ ಹಂಚಿ ಹೋಗಿರುವ 58 ಸೀಟುಗಳಲ್ಲಿ ಪಕ್ಷಗಳ ಹಣೆಬರೆಹ ಬರೆಯಲಿದೆ. ಈ 58 ಸೀಟುಗಳ ಪೈಕಿ ಕಳೆದ ಬಾರಿ 53ನ್ನು ಮತ್ತು ಎರಡನೆಯ ಹಂತದ 55 ಸೀಟುಗಳ ಪೈಕಿ 38ನ್ನು ಗೆದ್ದು ವಿಕ್ರಮ ಸ್ಥಾಪಿಸಿತ್ತು ಬಿಜೆಪಿ. ಕಳೆದ ಮೂರು ಚುನಾವಣೆಗಳಲ್ಲಿ ಜಾಟರು ದೊಡ್ಡ ಪ್ರಮಾಣದಲ್ಲಿ ಬಿಜೆಪಿಯತ್ತ ಸರಿದಿದ್ದರು. ಚರಣಸಿಂಗ್ ನಿಧನದ ನಂತರ ಅವರ ಮಗ ಅಜಿತ್ ಸಿಂಗ್ ಬಿಜೆಪಿಯೊಂದಿಗೆ ಸರಸವಾಡಿದ ಕಾರಣ ಮುಸ್ಲಿಮರು ಲೋಕದಳದಿಂದ ದೂರವಾಗಿದ್ದರು. ಅಜಿತ್ ಸಿಂಗ್ ಕೂಡ ನಿಧನದ ನಂತರ. ಪಕ್ಷದ ಆಡಳಿತಸೂತ್ರ ಅವರ ಮಗ ಜಯಂತ್ ಚೌಧರಿ ಕೈಯಲ್ಲಿದೆ. ಸಮಾಜವಾದಿ ಪಕ್ಷದ ತಲೆಯಾಳು ಅಖಿಲೇಶ್ ಸಿಂಗ್ ಈ ಸಲ ಹಲವು ಸಣ್ಣ ಪಕ್ಷಗಳನ್ನು ಸೆಳೆದು ಬಣ್ಣಬಣ್ಣದ ಬೆಚ್ಚನೆಯ ಕೌದಿ ಹೊಲಿದಿದ್ದಾರೆ. ಪಕ್ಷ ಕಳೆದುಕೊಂಡಿರುವ ಜನಾಧಾರವನ್ನು ಮರಳಿ ಗಳಿಸಲು ಹಗಲಿರುಳು ಶ್ರಮಿಸಿರುವ ಜಯಂತ್ ಮತ್ತು ಅಖಿಲೇಶ್ ಮಾಡಿಕೊಂಡಿರುವ ಚುನಾವಣಾ ಮೈತ್ರಿಯು ಇಬ್ಬರ ಶಕ್ತಿಯನ್ನು ಇಮ್ಮಡಿಗೊಳಿಸಿದೆ. ದೆಹಲಿ ಗಡಿಗಳಲ್ಲಿ ಜರುಗಿದ ರೈತ ಚಳವಳಿಯು ಅವರ ಈ ಪ್ರಯತ್ನಕ್ಕೆ ಅನುಕೂಲಕರವಾಗಿ ಪರಿಣಮಿಸಿದೆ. ಅಜಿತ್ ಸಿಂಗ್ ಮತ್ತು ಜಯಂತ್ ಚೌಧರಿ ಅವರ ಲೋಕದಳವನ್ನು ಸೋಲಿಸಿದ್ದ ಜಾಟ ಜನಾಂಗ ಅದಕ್ಕಾಗಿ ಪಶ್ಚಾತ್ತಾಪಪಡುತ್ತಿದೆ. ಬಿಜೆಪಿ ಹುಟ್ಟಿ ಹಾಕಿದ ಹಿಂದೂ-ಮುಸ್ಲಿಮ್ ಧೃವೀಕರಣದ ಅಲೆಯಲ್ಲಿ ತೇಲಿ ಹೋಗಿದ್ದ ಬಹುತೇಕ ಜಾಟರು ಈ ಸಲ ಬಿಜೆಪಿಗೆ ಎದುರಾಗಿ ನಿಂತಿದ್ದಾರೆ.




ಉತ್ತರಪ್ರದೇಶದಲ್ಲಿ ಯಾದವರದು ಸಂಖ್ಯಾಬಾಹುಳ್ಯದಲ್ಲಿ ಪ್ರಭಾವೀ ಹಿಂದುಳಿದ ಜಾತಿ. ಇವರ ಪ್ರಾಬಲ್ಯದಿಂದ ಅಸಮಾಧಾನಗೊಂಡ ಇತರೆ ಹಿಂದುಳಿದ ಮತ್ತು ಅತಿ ಹಿಂದುಳಿದ ಜನಾಂಗಗಳನ್ನು ಒಲಿಸಿಕೊಂಡಿದ್ದು ಬಿಜೆಪಿಗೆ ಕಳೆದ ಮೂರು ಚುನಾವಣೆಗಳಲ್ಲಿ ಭಾರೀ ಶಕ್ತಿ ನೀಡಿತ್ತು. ಮುಖ್ಯಮಂತ್ರಿ ಆದಿತ್ಯನಾಥ ಅವರ ಕಾರ್ಯವೈಖರಿಯಿಂದ ಕುದಿಯುತ್ತಿದ್ದ ಕೆಲ ಪ್ರಮುಖ ಓ.ಬಿ.ಸಿ. ನಾಯಕರು ಪಕ್ಷ ತೊರೆದು ಅಖಿಲೇಶ್ ಅವರೊಂದಿಗೆ ಕೈ ಜೋಡಿಸಿರುವ ವಿದ್ಯಮಾನ ಬಿಜೆಪಿಯ ಶಕ್ತಿಯನ್ನು ಕುಂದಿಸಿರುವಲ್ಲಿ ಅನುಮಾನವಿಲ್ಲ. ತಮ್ಮ ಜಾತಿ ರಜಪೂತರ ಪಕ್ಷಪಾತಿಯೆಂದು ಆಡಳಿತದಲ್ಲಿ ಢಾಳಾಗಿ ತೋರಿಸಿಕೊಂಡಿರುವ ಮುಖ್ಯಮಂತ್ರಿ ಆದಿತ್ಯನಾಥ ಅವರು ಬಿಜೆಪಿಯ ಕಟ್ಟರ್ ಬೆಂಬಲಿಗರಾಗಿದ್ದ ಬ್ರಾಹ್ಮಣರನ್ನೂ ಸಾಕಷ್ಟು ಎದುರು ಹಾಕಿಕೊಂಡಿದ್ದಾರೆ. ಉತ್ತರಪ್ರದೇಶದಲ್ಲಿ ಶೇ.12ಕ್ಕೂ ಹೆಚ್ಚು ಪ್ರಮಾಣದಲ್ಲಿರುವ ಬ್ರಾಹ್ಮಣರು ಈಗಲೂ ಬಿಜೆಪಿಯ ಬೆಂಬಲಿಗರೇ. ಆದರೆ ಕಳೆದ ಮೂರೂ ಚುನಾವಣೆಗಳಲ್ಲಿ ಕಂಡು ಬಂದಿದ್ದ ಅವರ ಅಖಂಡ ಬೆಂಬಲದಲ್ಲಿ ಈ ಸಲ ಬಿರುಕುಗಳು ಮೂಡಿವೆ.



ಪಶ್ಚಿಮ ಉತ್ತರಪ್ರದೇಶ ಸೀಮೆಯಲ್ಲಿ ಮುಸಲ್ಮಾನರ ಪ್ರಮಾಣ ರಾಜ್ಯದಲ್ಲೇ ಅತಿ ಹೆಚ್ಚು. ಹನ್ನೆರಡು ಜಿಲ್ಲೆಗಳ ಲೆಕ್ಕ ಹಿಡಿದರೆ ಈ ಪ್ರಮಾಣ ಶೇ.35. ಲಾಗಾಯತಿನಿಂದ ಚೌಧರಿ ಚರಣಸಿಂಗ್ ಅವರ ಅನುಯಾಯಿಗಳು. ಜಯಂತ್ ಚೌಧರಿ ಕಾಲದಲ್ಲಿ ಲೋಕದಳದಿಂದ ದೂರ ಸರಿದಿದ್ದರು. 2013ರಲ್ಲಿ ಬಿಜೆಪಿ ಬಡಿದೆಬ್ಬಿಸಿದ್ದ ಕೋಮುವಾದಿ ಧೃವೀಕರಣವನ್ನು ರೈತ ಚಳವಳಿ ಕರಗಿಸಿರುವ ನಿಚ್ಚಳ ಸೂಚನೆಗಳಿವೆ. ಜಾಟರು ಮತ್ತು ಮುಸಲ್ಮಾನರು ಪುನಃ ಹತ್ತಿರವಾಗಿದ್ದಾರೆ. ಇಬ್ಬರ ಸಂಯುಕ್ತ ಶಕ್ತಿ ಬಿಜೆಪಿಗೆ ಮುಳುವಾಗಬಲ್ಲದು. ಮಾಯಾವತೀ ಅವರ ಬಿ.ಎಸ್.ಪಿ. ಮತ್ತು ಅಖಿಲೇಶ್-ಜಯಂತ್ ಅವರ ಮೈತ್ರಿಕೂಟದ ನಡುವೆ ಅವರು ಆಯ್ಕೆ ಮಾಡಿಕೊಳ್ಳಬೇಕಿದೆ. ಬಿಜೆಪಿ ವಿರುದ್ಧ ಮಾಯಾವತೀ ಅವರ ವಿರೋಧ ಇತ್ತೀಚಿನ ದಿನಗಳಲ್ಲಿ ಮೊಂಡಾಗಿರುವ ಬೆಳವಣಿಗೆಯನ್ನು ಮುಸಲ್ಮಾನರು ಗಮನಿಸಿದ್ದಾರೆ.

ಸೋಮವಾರ ಮತದಾನ ನಡೆದ ಉತ್ತರಪ್ರದೇಶದ ಹನ್ನೊಂದು ಜಿಲ್ಲೆಯ ಐದರಲ್ಲಿ ಮುಸಲ್ಮಾನರ ಮತದಾರರ ಪ್ರಮಾಣ ಶೇ.40ರಿಂದ 50. ರಾಂಪುರದಲ್ಲಿ ಶೇ..60. ಮುರಾದಾಬಾದಿನಲ್ಲಿ ಶೇ. 47, ಬಿಜನೂರಿನಲ್ಲಿ ಶೇ.43, ಶಹಜಹಾನಪೂರ ಮತ್ತು ಮುಝಫ್ಫರ್ ಪುರದಲ್ಲಿ ಶೇ.41. ಈ ಮತಗಳು ಕಳೆದ ಸಲದಂತೆ ಬಿ.ಎಸ್.ಪಿ. ಮತ್ತು ಸಮಾಜವಾದಿ ಪಾರ್ಟಿಯ ನಡುವೆ ದೊಡ್ಡ ಪ್ರಮಾಣದಲ್ಲಿ ಚೆದುರಿರುವ ಸಂಕೇತಗಳಿಲ್ಲ. ಈ ಬೆಳವಣಿಗೆ ಬಿಜೆಪಿಗೆ ಒಳ್ಳೆಯ ಸುದ್ದಿಯೇನೂ ಅಲ್ಲ. ಕಡೆಯ ಗಳಿಗೆಯ ತನಕ ಯಾವ ಪಕ್ಷಕ್ಕೆ ಮತ ನೀಡಬೇಕೆಂದು ನಿರ್ಧರಿಸದೆ ಗೋಡೆಯ ಮೇಲೆ ಕುಳಿತುಕೊಳ್ಳುವ ಮತದಾರರ ಸಂಖ್ಯೆ ಸಣ್ಣದೇನೂ ಅಲ್ಲ. ಅವರು ಕಡೆಯ ನಿಮಿಷಗಳಲ್ಲಿ ಗೆಲ್ಲುವ ಪಕ್ಷದತ್ತ ವಾಲುತ್ತಾರೆ. ಈ ಬಾಬತ್ತಿನಲ್ಲಿಯೂ ಬಿಜೆಪಿ ಏಟು ತಿನ್ನುವ ಸಾಧ್ಯತೆಯೇ ಹೆಚ್ಚು.

ರಾಜ್ಯದ ಉಳಿದ ಭಾಗಗಳಾದ ಬುಂದೇಲಖಂಡ ಮತ್ತು ಅವಧದಲ್ಲಿ ಬಿಜೆಪಿ ಅಷ್ಟಾಗಿ ಶಕ್ತಿಗುಂದಿಲ್ಲ. ಪೂರ್ವಾಂಚಲದಲ್ಲಿ ಸಮ ಸಮ ಸ್ಪರ್ಧೆ ಏರ್ಪಡುವ ಸೂಚನೆಗಳಿವೆ. ಒಂದು ಮತ್ತು ಎರಡನೆಯ ಹಂತದ ಒಟ್ಟು ಸೀಟುಗಳ ಸಂಖ್ಯೆ 113. ಈ ಪೈಕಿ 91 ಸೀಟು ಬಾಚಿದ್ದ ಬಿಜೆಪಿ ಈ ಸಲ ಭಾರೀ ನಷ್ಟ ಎದುರಿಸಲಿದೆ.

ಪಶ್ಚಿಮ ಯೂಪಿಯ ಗಾಳಿ ಇತರೆಡೆಗೆ ಬೀಸಿದ್ದನ್ನು ಕಳೆದ ಚುನಾವಣೆಗಳಲ್ಲಿ ಕಂಡು ಬಂದಿದೆ. ಈ ಗಾಳಿಯನ್ನು ತಡೆದು ನಿಲ್ಲಿಸಲು ಬಿಜೆಪಿ ಯಾವ ತಂತ್ರ ಬಳಸಲಿದೆಯೆಂದು ಕಾದು ನೋಡಬೇಕಿದೆ.



# ಹೊಸಗನ್ನಡ ಕಾವ್ಯಕ್ಕೆ ಹೊಸಬೆಳಕು ಕೊಟ್ಟ ಕಣವಿ

**ಪ್ರತಿಮೆ ಸಂಕೇತಗಳನ್ನು ಅಂದಿನ ಸಂದರ್ಭದ ಅನುಭವಗಳ ಹಂದರದ ಮೇಲೆ ಹೆಣೆಯುವ ಪ್ರಯತ್ನ, ಆಗಾಗ್ಗೆ ಕಾಮದ ಅತಿರೇಕ, ಒಂಟಿತನದ ಅಳಲು ಅಸಹನೆ ಇವೇ ಪ್ರಧಾನವಾಗಿ ಕಂಡುಬಂದ ನವ್ಯಮಾರ್ಗದೊಂದಿಗೆ ಕಣವಿಯವರಾಗಲೀ, ಅವರಂಥ ಅವರ ಸಮಕಾಲೀನ ಕವಿಗಳಾಗಲಿ ನೇರವಾಗಿ ಹೋರಾಟದ ಕಣಕ್ಕೆ ಇಳಿಯಲಿಲ್ಲವಾದರೂ ಅದರಲ್ಲಿಯ ಕೆಲವು ಲಕ್ಷಣಗಳನ್ನು ಗುರುತಿಸಿ ಅವನ್ನು ತಮ್ಮ ಕಾವ್ಯದಲ್ಲಿ ಬೆಸುಗೆ ಮಾಡಿಕೊಳ್ಳುವುದರ ಜೊತೆಗೆ ಇದೊಂದು ಬಗೆಯ ಸಮನ್ವಯ ಪ್ರಯತ್ನವೋ, ನವೋದಯ ನವ್ಯಮಾರ್ಗಗಳ ಸೇತುಬಂಧವೋ ಎನಿಸುವ ಮಟ್ಟಿಗೆ ಇವರು ಕಾವ್ಯ ರಚನೆ ಮಾಡಿದರು. ಪ್ರಾರಂಭದಲ್ಲಿ ಇವರು ನವೋದಯ ಕಲಿಕಾ ಮಾರ್ಗಕ್ಕೆ ಸಂಪೂರ್ಣವಾಗಿ ತೆತ್ತುಕೊಂಡು, ಆಗ ಗಟ್ಟಿಯಾಗಿ ನಿರ್ಮಿಸಿಕೊಂಡ ಮನೋಧರ್ಮದ ಬಲದಿಂದಾಗಿ ಪ್ರಗತಿದೃಷ್ಟಿಗೂ ಸಂಪೂರ್ಣವಾಗಿ ಮಾರುಹೋಗದೆ, ನವ್ಯಮಾರ್ಗವನ್ನು ತಮ್ಮ ಸ್ವಭಾವಕ್ಕೆ ತಕ್ಕಂತೆ ಹೊಂದಿಸಿಕೊಂಡು, ಅರಗಿಸಿಕೊಂಡು, ಒಂದು ರೀತಿಯಲ್ಲಿ ನವೋದಯ ಕಾವ್ಯದ ಪಾತ್ರವನ್ನು ವಿಸ್ತರಿಸಲು ನಡೆಸಿದ ಯತ್ನ ಇವರ ಕವಿತೆಗಳಲ್ಲಿ ನಮಗೆ ಕಾಣುತ್ತದೆ.**

● ವ.ತಿ.ಮಂಜುನಾಥ

ಬಹುಶಃ ನಾನು ಹತ್ತನೇ ತರಗತಿ ಇರಬಹುದು ಆಗ ನನಗೆ ಚೆನ್ನವೀರ ಕಣವಿಯವರ ಕಾವ್ಯಾಕ್ಷಿ ಮತ್ತು ಆಕಾಶ ಬುಟ್ಟಿ ಕವನ ಸಂಕಲನ ನನ್ನ ತಾತ ಕಲ್ಲಪ್ಪನವರ ಕಪಾಟಿನಿಂದ ತಗೆದು ಓದಿದ ಆ ಕಾವ್ಯದ ಮೊದಲ ಅನುಭವವಾದರೂ ಆ ಕವನಗಳ ಭಾವನೆಯಲ್ಲಿನ ಕಾವ್ಯ ಪ್ರಜ್ಞೆಯ ಆಶಯಗಳು ನನ್ನ ಎದೆಗೆ ನಾಟಿ ಆ ಬೆಳಕಿನ ಕಾವ್ಯದ ಹಾದಿ ನನ್ನೊಳಗಿನ ಕಾವ್ಯಪ್ರಜ್ಞೆಗೆ ಪ್ರಗಾಥವಾದಂತಾಗಿತ್ತು. ಆಗಲೇ ನಾನು ಗೀಚಿದ್ದ ಎರಡು ಪದ್ಯಗಳು ನನ್ನ ಸ್ನೇಹಿತರ ಹಾಸ್ಯಕ್ಕೆ ಅಹಾರವಾಗಿದ್ದವು.

ಇದಾದ ನಂತರ ನಾನು ಕುವೆಂಪು ಮತ್ತು ಜಿ.ಎಸ್ ಶಿವರುದ್ರಪ್ಪ ಅವರ ಸಾಹಿತ್ಯದ ತುಡಿತಗಳಿಗೆ ನನ್ನ ಮನಸ್ಸು ಪ್ರಭಾವಗೊಂಡಿತು.ಈ ಮೂವರ ಕಾವ್ಯ ಮತ್ತು ಸಾಹಿತ್ಯ ದ ಆಕರ ಗ್ರಂಥಗಳ ಓದುತ್ತಲೇ ನನ್ನಲ್ಲಿನ ಕವಿ ಮನಸ್ಸು ಹಲವಾರು ಕವನಗಳ ಹುಟ್ಟಿಗೂ ಕಾರಣವಾಗಿತ್ತು.

ಚನ್ನವೀರ ಕಣವಿ ಅವರ ಹಲವು ಕವನ ಸಂಕಲನಗಳು ಓದುತ್ತಾ ಸಾಗುತ್ತಲೇ ಅವರ ಬೆಳಕಿನ ಹಾದಿಯಲ್ಲಿ ಸಾಗಿದ ಕವನಗಳು ಸಾಹಿತ್ಯ ಲೋಕದ ಹೊಸ ಆಯಾಮಗಳಿಗೆ ಕಾರಣವಾಗಿದ್ದವು ಎನ್ನುವುದನ್ನು ನಾನು ಗಮನಿಸುತ್ತಲೇ ಸಾಗಿದೆ .ಕಣವಿ ಅವರ ಸಾಹಿತ್ಯದಲ್ಲಿ ಕುವೆಂಪು,ಬೇಂದ್ರೆ ಮತ್ತು ಶಿವರುದ್ರಪ್ಪ ಅವರ ಪ್ರಭಾವಗೊಂಡಿದ್ದರು ಹಾಗಾಗಿಯೇ ಆಧುನಿಕ ನವೋದಯ ಮತ್ತು ನವ್ಯಮಾರ್ಗಗಳ ನಡುವೆ ನಿರ್ಮಾಣಗೊಂಡಿರುವ ಕಂದರಕ್ಕೆ ಸೇತುವೆಯಾಗಿದ್ದವು.ಈ ಅಂಶವನ್ನು ಅವರು ಕವನ ಸಂಕಲನದ ಮುನ್ನುಡಿಯೊಂದರಲ್ಲಿ ಬರೆದುಕೊಂಡಿದ್ದಾರೆ.

ನಾನು ಯಾವ ಪಂಥದ ಕವಿಯೋ, ನನಗೆ ತಿಳಿದಿಲ್ಲ. ಆ ಕುರಿತು ಚರ್ಚೆ ಮಾಡುವವರು ಮಾಡಿಕೊಳ್ಳಲಿ. ಒಟ್ಟಿನಲ್ಲಿ ನಾನು ಕವಿ ಎಂಬುದಷ್ಟೇ ಮುಖ್ಯವಾದದ್ದು, ಅಷ್ಟು ಸಾಕು ಎಂಬ ಅಭಿಪ್ರಾಯವನ್ನು ಕಣವಿಯವರು ವ್ಯಕ್ತಪಡಿಸಿದ್ದುಂಟು. ಪ್ರಕೃತಿಲೀಲೆ, ಪ್ರಣಯ, ದಾಂಪತ್ಯ, ವಾತ್ಸಲ್ಯ ಈ ಮೊದಲಾದ ರಮ್ಯ ಪರಂಪರೆಯ ವಿಷಯಗಳೊಡನೆ ನವ್ಯ ವಿಷಯಗಳೂ ಕಣವಿಯವರ ಕೃತಿಗಳಲ್ಲಿ ಸೇರಿರುತ್ತದೆ. ಒಂದೊಂದಕ್ಕೂ ತಾಕಲಾಟವಿಲ್ಲ. ಸಮಾನ ಭೂಮಿಕೆ ಅವರ ಸುತ್ತ ಹೊಂದಿಸುತ್ತದೆ. ಎಂಬುದು ಮುಗಳಿಯವರ ಅಭಿಪ್ರಾಯ


ಇವರು ಸಾನೆಟ್ ಅಥವಾ ಸುನೀತಕ್ಕೆ ಒಂದು ರೂಪವನ್ನು ನೀಡಿದ್ದಾರೆ. ವ್ಯಕ್ತಿ ಚಿತ್ರಗಳ ರಚನೆಗೆ ಈ ಪ್ರಕಾರವನ್ನು ಮುಖ್ಯವಾಗಿ ಬಳಸಿಕೊಂಡಿದ್ದಾರೆ.

ಬೆಳಕಿಗಾಗಿ ತುಡಿಯುವುದು, ಬೆಳಕಿನತ್ತ ಸಾಗುವುದು ಇವರ ಕಾವ್ಯದ ನಿತ್ಯ ಹಂಬಲ . ಅದು ಒಂದು ರೀತಿಯಲ್ಲಿ ಇವರ ಕಾವ್ಯ ನಿರ್ಮಾಣ ಪ್ರಕ್ರಿಯೆಯ ಉದ್ದಕ್ಕೂ ಧಾರೆಯಂತೆ



ಹರಿದು ಬಂದಿದೆ. ಇವರ ಆಯ್ದ ಕವನಗಳ ಸಂಕಲನದ ಚಿರಂತನದಾಹವೂ ಇದನ್ನೇ ಸಂಕೇತಿಸುತ್ತದೆ. ಇವರ ದಾಹ ಪ್ರಜ್ಞೆ ಬೆಳಕಿಗಾಗಿ. ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ. ಎನಿತು ಮಾನವನೆದೆಯ ಆಳ ಅಗಲ ಎಂಬುದಾಗಿ ಇವರ ಕವಿಹೃದಯ ಹಂಬಲಿಸುತ್ತದೆ. ಇವರ ಮೊದಲನೆಯ ಕಾವ್ಯ ಸಂಕಲನವಾದ ಕಾವ್ಯಾಕ್ಷಿಯ ಮೊದಲನೆಯ ಕವಿತೆ ಇದನ್ನೇ ಕುರಿತದ್ದು.

"ನೀನು ಹೇಳ್ದ ಕವಿತೆಯ ತಂತ್ರ ಸವಿಯ ಹಾಡಲೊರೆದ ಮಂತ್ರ, ಬಾಳ ಹಣತೆಯಲ್ಲಿ ತಾಯೆ ಬೆಳಕು ಚಿಮ್ಮಿತು "ಎನ್ನುತ್ತಾರೆ "ಕವಿ. ಯುಗಯುಗಾಂತ್ಯದವರೆಗೆ ಜಗವ ಬೆಳಗಿಸಬಲ್ಲ ಎಲೆ ಚಿರಂತನ ಬೆಳಕೆ ನೀನೆ ಬೇಕು" ಎಂಬುದು ಇನ್ನೊಂದು ಕವನದಲ್ಲಿಯ ಪ್ರಾರ್ಥನೆ.





ಕಣವಿಯವರ ಕಾವ್ಯಕರ್ಮದ ವಿಕಾಸದ ಹಾದಿಯ ಹಲವು ಘಟ್ಟಗಳನ್ನು ಇವರ ಕವನಗಳಲ್ಲಿ ಗುರುತಿಸುವುದು ಸಾಧ್ಯ. ಭಾವಜೀವಿ ಎಂಬ ಕವನ ಇವರ ಆತ್ಮಕಥನ. ಅದರ ಮೇಲೆ ಮಧುರಚೆನ್ನರ 'ನನ್ನ ನಲ್ಲ ಕವಿತೆಯ ಪ್ರಭಾವವಿದೆ ಎಂದು ವಿಮರ್ಶಕರು ಗುರುತಿಸಿದ್ದಾರೆ. ಪ್ರಕೃತಿ ಗೀತೆಗಳ ರಚನೆಯೂ ಬೇಂದ್ರೆ,ಕುವೆಂಪು ರಚನೆಗಳಿಂದ ಪ್ರಭಾವಿತವಾಗಿರುವುದು ಕಂಡುಬರುತ್ತದೆ.

ಕಣವಿಯವರು ಕ್ರಮೇಣ ಅನುಕರಣೆಯ ಹಾದಿ ಬಿಟ್ಟು ಸ್ವತಂತ್ರ ಮನೋಧರ್ಮದ ಗರಿಕೂಡಿಸಿಕೊಂಡು ಕಾವ್ಯಾಕಾಶದಲ್ಲಿ ಉಡ್ಡಯನ ಮಾಡಿದ್ದರ ಲಕ್ಷಣಗಳು ಅನಂತರದ ಕವನಗಳಲ್ಲಿ ಕಾಣಬರುತ್ತದೆ. ಕಣವಿಯವರು ಬದುಕನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಕಾಣತೊಡಗುತ್ತಾರೆ. ಸ್ವೋಪಜ್ಞತೆಯನ್ನು ಮೆರೆಯುತ್ತಾರೆ. ಸಮಾಜದ ದೋಷಗಳ ಮೇಲೆ ಬೆಳಕು ಚೆಲ್ಲುತ್ತಾರೆ, ಅದನ್ನು ಟೀಕಿಸುತ್ತಾರೆ. ವ್ಯಂಗ್ಯದ ಬಾರುಕೋಲುಗಳನ್ನು ಬೀಸುತ್ತಾರೆ. ಪ್ರಗತಿಶೀಲ ಚಳವಳಿಯ ಮತ್ತು ಆ ಮನೋಧರ್ಮದ ಲೇಖಕರ ಪ್ರಭಾವಕ್ಕೆ ಇವರು ಒಳಗಾಗದಂತೆ ಕಾಣುತ್ತಾರೆ. ಒಮ್ಮೊಮ್ಮೆ ಕಾವ್ಯ ಗುಣ ಹಿಂದಕ್ಕೆ ಸರಿಯಿತೋ, ಕವಿತೆ ವಾಚ್ಯವಾಗುತ್ತಿದೆಯೋ ಎನಿಸಿದರೂ ಅದೊಂದು ದೋಷವೆಂದು ಗುರುತಿಸಲಾಗದಷ್ಟು ಅಲ್ಲಿ ಸೊಗಸಿರುತ್ತದೆ. ಒಂದು ರೀತಿಯಲ್ಲಿ ರಮ್ಯಕಾವ್ಯ ಪ್ರಭಾವದಿಂದ ಬಿಡುಗಡೆ ಹೊಂದದ ಇವರ ದಾರಿಗೆ ಇದೊಂದು ಸಾಧನವಾಗಿ ಪರಿಣಮಿಸಿದ್ದಿರಬಹುದು. ಆದರೆ ದೂರ ಹೋಗಬಹುದಾದ ಅಪಾಯಕ್ಕೆ ಇವರು ಸಿಲುಕದೆ ವಿಕಾಸದ ಹಾದಿಯಲ್ಲಿ ಮುನ್ನಡೆಯುತ್ತಾರೆ.

ಆ ವೇಳೆಗೆ ನವ್ಯಕಾವ್ಯದ ಯುಗದ ಉದಯವಾಗುತಿತ್ತು. ಅಡಿಗರ ಏರುದನಿ, ಪರಿಸರಕ್ಕೆ ಅವರ ತೀವ್ರ ಪ್ರತಿಕ್ರಿಯೆ, ಸಮಾಜ ಮುಖಿಯಾಗುವುದಕ್ಕಿಂತ ವ್ಯಕ್ತಿಗತವಾಗಿ ಚಿಂತನೆಯ ಹರಿವು, ಭಾಷೆ, ಲಯ ಮುಂತಾದವನ್ನೂ ಹೊಸದುಗೊಳಿಸಿಕೊಳ್ಳುವ ಕಾಳಜಿ, ಅವಕ್ಕೆ ಹೊಸದಾಗಿ ಶಕ್ತಿ ತುಬುವ ಪ್ರಯತ್ನ, ಕಣವಿಯವರದು.ಇವರ ಪ್ರಮುಖ ಕೃತಿಗಳು

ಪ್ರತಿಮೆ ಸಂಕೇತಗಳನ್ನು ಅಂದಿನ ಸಂದರ್ಭದ ಅನುಭವಗಳ ಹಂದರದ ಮೇಲೆ ಹೆಣೆಯುವ ಪ್ರಯತ್ನ, ಆಗಾಗ್ಗೆ ಕಾಮದ ಅತಿರೇಕ, ಒಂಟಿತನದ ಅಳಲು ಅಸಹನೆ ಇವೇ ಪ್ರಧಾನವಾಗಿ ಕಂಡುಬಂದ ನವ್ಯಮಾರ್ಗದೊಂದಿಗೆ ಕಣವಿಯವರಾಗಲೀ, ಅವರಂಥ ಅವರ ಸಮಕಾಲೀನ ಕವಿಗಳಾಗಲಿ ನೇರವಾಗಿ ಹೋರಾಟದ ಕಣಕ್ಕೆ ಇಳಿಯಲಿಲ್ಲವಾದರೂ ಅದರಲ್ಲಿಯ ಕೆಲವು ಲಕ್ಷಣಗಳನ್ನು ಗುರುತಿಸಿ ಅವನ್ನು ತಮ್ಮ ಕಾವ್ಯದಲ್ಲಿ ಬೆಸುಗೆ ಮಾಡಿಕೊಳ್ಳುವುದರ ಜೊತೆಗೆ ಇದೊಂದು ಬಗೆಯ ಸಮನ್ವಯ ಪ್ರಯತ್ನವೋ, ನವೋದಯ ನವ್ಯಮಾರ್ಗಗಳ ಸೇತುಬಂಧವೋ ಎನಿಸುವ ಮಟ್ಟಿಗೆ ಇವರು ಕಾವ್ಯ ರಚನೆ ಮಾಡಿದರು. ಪ್ರಾರಂಭದಲ್ಲಿ ಇವರು ನವೋದಯ ಕಲಿಕಾ ಮಾರ್ಗಕ್ಕೆ ಸಂಪೂರ್ಣವಾಗಿ ತೆತ್ತುಕೊಂಡು, ಆಗ ಗಟ್ಟಿಯಾಗಿ ನಿರ್ಮಿಸಿಕೊಂಡ ಮನೋಧರ್ಮದ ಬಲದಿಂದಾಗಿ ಪ್ರಗತಿದೃಷ್ಟಿಗೂ ಸಂಪೂರ್ಣವಾಗಿ ಮಾರುಹೋಗದೆ, ನವ್ಯಮಾರ್ಗವನ್ನು ತಮ್ಮ ಸ್ವಭಾವಕ್ಕೆ ತಕ್ಕಂತೆ ಹೊಂದಿಸಿಕೊಂಡು, ಅರಗಿಸಿಕೊಂಡು, ಒಂದು ರೀತಿಯಲ್ಲಿ ನವೋದಯ ಕಾವ್ಯದ ಪಾತ್ರವನ್ನು ವಿಸ್ತರಿಸಲು ನಡೆಸಿದ ಯತ್ನ ಇವರ ಕವಿತೆಗಳಲ್ಲಿ ನಮಗೆ ಕಾಣುತ್ತದೆ.

ಚೆನ್ನವೀರ ಕಣವಿ ಸಾರ್ಥಕ ಕವಿ. ಕವಿತಾ ರಚನೆಯೇ ಅಲ್ಲದೆ ವಿಮರ್ಶೆಯ ಹಾದಿಯಲ್ಲೂ ಇವರು ನಡೆದು ಬಂದಿದ್ದಾರೆ ಜಿ.ಎಸ್.ಎಸ್. ತರದಲ್ಲೇ ಹೆಚ್ಚು ವಿಮರ್ಶೆ ಬರೆಯದಿದ್ದರೂ ಚಲುವಾದ ವಿಮರ್ಶೆ ಬರೆದಿದ್ದಾರೆ.

**ಎಲ್ಲಾ ಹಣತೆಗಳಿಂದ
ಕತ್ತಲೆಯು ಕರಗುವುದು
ಎಷ್ಟು ಕವಿತೆಗೆ
ಜಗದ ಕಣ್ಣು ತೆರೆಯುವುದು.**

**ಒಂದಿದ್ದರೂ ಸಾಕು
ಮನೆಗೆ ಬೆಳಕಾಗುವುದು
ಒಂದು ಕವಿತೆಗೂ
ಕೂಡ ಮನ ಕರಗುವುದು
– ಚನ್ನವೀರ ಕಣವಿ**

# ಉತ್ತರ ಪ್ರದೇಶದಲ್ಲಿ ಬಿಜೆಪಿ ಮುಗ್ಗರಿಸಿ ಬೀಳುವದೇ?



ಸನತ್‌ಕುಮಾರ ಬೆಳಗಲಿ
ಹಿರಿಯ ಪತ್ರಕರ್ತರು

ಉತ್ತರ ಪ್ರದೇಶದಲ್ಲಿ ಗೆಲುವಿನ ಬಾವುಟ ಹಾರಿಸುವ ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯ ಮಂತ್ರಿ ಆದಿತ್ಯನಾಥರ ಕನಸು ಭಗ್ನ ವಾಗುವ ಸೂಚನೆಗಳು ಆ ರಾಜ್ಯದಿಂದ ಬರುತ್ತಿವೆ.

ಹಿಜಾಬ್ – ಕೇಸರಿ ಶಾಲುಗಳ ಸೃಷ್ಟಿತ ವಿವಾದದಲ್ಲಿ ಕರ್ನಾಟಕದ ತತ್ತರಿಸಿ ಹೋಗಿದೆ. ಆದರೆ ಗುಜರಾತ್ ನಂತರ ಉತ್ತರ ಪ್ರದೇಶವನ್ನು "ಹಿಂದುತ್ವ" ದ ಪ್ರಯೋಗ ಶಾಲೆ ಮಾಡಲು ಹೊರಟ ಬಿಜೆಪಿ ಪ್ರತಿರೋಧದ ಅಲೆಗಳ ಅಬ್ಬರದಿಂದ ಏದುಸಿರು ಬಿಡುತ್ತಿದೆ.

ಅಯೋಧ್ಯೆಯ ಬಾಬರಿ ಮಸೀದಿಯನ್ನು ಉರುಳಿಸಿ ,ರಾಮ ಮಂದಿರ ನಿರ್ಮಿಸಲು ಶಿಲಾನ್ಯಾಸ ನೆರವೇರಿಸಿದ ನಂತರ ಶೂದ್ರ ಸಮುದಾಯಗಳ ಸಹಿತ ಎಲ್ಲ ಮುಸ್ಲಿಮೇತರ ಸಮುದಾಯಗಳ ಜನರಲ್ಲಿ ಅದರಲ್ಲೂ ಯುವಕರಲ್ಲಿ ಏರಿದ್ದ ಹಿಂದುತ್ವದ ನಶೆ ಇಳಿಯತೊಡಗಿದೆ. ಆದಿತ್ಯನಾಥನ ಐದು ವರ್ಷಗಳ ಆಡಳಿತದ ಕಹಿ ಫಲವನ್ನು ಸವಿದ ಜನ ಸಾಮಾನ್ಯರು ಬದುಕಿನ ಎಲ್ಲ ಪ್ರಶ್ನೆಗಳಿಗೆ ಧರ್ಮದಲ್ಲಿ ,ಮತ್ತು ಜಾತಿ ಮತದಲ್ಲಿ ಉತ್ತರ ಸಿಗುವದಿಲ್ಲ ಎಂಬ ಕಟು ಸತ್ಯ ವನ್ನು ಅರಿತುಕೊಳ್ಳುತ್ತಿದ್ದಾರೆ.ಈ ಅರಿವಿನ ಸುಳಿವು ಸಿಕ್ಕಿರುವ ಬಿಜೆಪಿ ನಾಯಕರು ಮಾತ್ರವಲ್ಲ ಅವರ ನಾಗಪುರದ ಗುರುಗಳು ಕಂಗಾಲಾಗಿದ್ದಾರೆ.

ಭಾರತದ ಅತ್ಯಂತ ದೊಡ್ಡ ರಾಜ್ಯವೆಂದು ಹೆಸರಾದ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶ ಮುಂಬರುವ ಲೋಕಸಭಾ ಚುನಾವಣೆಗಳ ಮೇಲೆ ಪರಿಣಾಮ ಬೀರುವದರಿಂದ ಶತಾಯ ಗತಾಯ ಆ ರಾಜ್ಯವನ್ನು ಗೆಲ್ಲಲೇ ಬೇಕೆಂದು ಪ್ರಧಾನಿ ಮೋದಿ,ಯೋಗಿ,ಅಮೀತಶಾ ಹಗಲೂ ರಾತ್ರಿ ಬೆವರಿಳಿಸುತ್ತಿದ್ದರೂ ಫಲಿತಾಂಶ ತಮ್ಮ ಪರವಾಗಿ ಬರುತ್ತದೆ ಎಂಬ ಭರವಸೆ ಅವರಲ್ಲೂ ಉಳಿದಿಲ್ಲ.

ಅದರಲ್ಲೂ ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತಂದು ರೈತಾಪಿ ವರ್ಗವನ್ನು ನೇಣುಗಂಬಕ್ಕೇರಿಸಲು ಹೊರಟಿದ್ದ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಪಶ್ಚಿಮ ಉತ್ತರ ಪ್ರದೇಶದ ಜಾಟ್ ಸಮುದಾಯ ತಿರುಗಿ ಬಿದ್ದಿದೆ.ಜಾಟರನ್ನು ಪ್ರತಿನಿಧಿಸುವ ರಾಷ್ಟ್ರೀಯ ಲೋಕದಳ ಈ ಸಲ ಅಖಿಲೇಶ ಯಾದವರ ಸಮಾಜವಾದಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡಿರುವದರಿಂದ ಬಿಜೆಪಿ ಗೆ ದಿಕ್ಕು ತಪ್ಪಿದಂತಾಗಿದೆ.ಜಾಟರನ್ನು ಒಲೈಸಲು ಕೃಷಿ ಕಾಯ್ದೆಯನ್ನು ಮೋದಿ ಸರಕಾರ ವಾಪಸು ಪಡೆದುಕೊಂಡಿದ್ದರೂ ಜಾಟ್ ಸಮುದಾಯದ ರೈತರು ಇವರನ್ನು ನಂಬುತ್ತಿಲ್ಲ.

ನೀವೆಲ್ಲ ಹಿಂದುಗಳೆಂದು ಕರೆದ ಮಾತ್ರಕ್ಕೆ, ಹಿಂದೂ ಸಮಾಜೋ ತ್ಸವ ಮಾಡಿದ ಮಾತ್ರಕ್ಕೆ ತಳ ಸಮುದಾಯಗಳ ಬಡವರಿಗೆ ಒಮ್ಮಿಂದೊಮ್ಮಲೆ ಸಾಮಾಜಿಕ ಘನತೆ ಗೌರವಗಳು ಸಿಗುವದಿಲ್ಲ.ಹಿಂದು ಎಂದು ಗರ್ವದಿಂದ ಕೂಗಿದ ತಕ್ಷಣ ಆಹಾರ ಧಾನ್ಯ ಗಳ ಬೆಲೆ ಇಳಿಯುವದಿಲ್ಲ.ಪೆಟ್ರೋಲ್, ಡಿಸೇಲ್,ಅಡಿಗೆ ಅನಿಲದ ಧಾರಣೆ ಕಡಿಮೆಯಾಗುವದಿಲ್ಲ.ಹಿಂದು ಬಂಧು ಒಂದು ಓಟಿಗಾಗಿ ಹೇಳಿದ ತಕ್ಷಣ ಕೈಗೆ ಕೆಲಸ ಸಿಗುವದಿಲ್ಲ. ಎಂಬುದು ತಡವಾಗಿ ತಿಳಿದುಕೊಂಡ ಉತ್ತರ




ಪ್ರದೇಶದ ಮತದಾರರು ಧರ್ಮದ ಹೆಸರಿನಲ್ಲಿ ದ್ವೇಷವನ್ನು ಬಿಟ್ಟು ಇನ್ನೇನನ್ನೂ ನೀಡದ ಮಾತಿನ ಮಲ್ಲರಿಗೆ ಪಾಠ ಕಲಿಸಲು ಮುಂದಾಗಿರುವ ವರದಿಗಳು ಬರುತ್ತಲೇ ಇವೆ.

ಕೃಷಿ ಕಾಯ್ದೆಗಳ ವಿರುದ್ಧ ಲಖೀಮಪುರ ಖೇರಿಯಲ್ಲಿ ರೈತರ ಮೇಲೆ ಜೀಪು ಹರಿಸಿ ನಾಲ್ವರು ರೈತರನ್ನು ಹಾಡೇ ಹಗಲು ಕೊಂದಿದ್ದ ಕೇಂದ್ರ ಸಚಿವ ಅಜಯ ಮಿಶ್ರಾನ ಮಗ ಅಶೀಶ್ ಮಿಶ್ರಾನನ್ನು ರಕ್ಷಿಸಲು ಮೋದಿ, ಯೋಗಿ,ಜೋಡಿ ನಡೆಸಿದ ಪ್ರಯತ್ನ ವನ್ನು ರೈತರು ಮರೆತಿಲ್ಲ. ಕೊನೆಗೆ ರೈತರು ಪಟ್ಟು ಹಿಡಿದಾಗ ಈ ಅಶಿಶ್ ಮಿಶ್ರಾನನ್ನು ಬಂಧಿಸಲಾಯಿತು.ಆದರೆಗ ಇದೀಗ ಆತನಿಗೆ ಅಲಹಾಬಾದ್ ಹೈಕೋರ್ಟ್ ಜಾಮೀನು



ನೀಡಿದೆ.ಚುನಾವಣೆ ಯನ್ನು ಗಮನದಲ್ಲಿಟ್ಟುಕೊಂಡು ಆಶಿಶನಿಗೆ ಜಾಮೀನು ನೀಡಲಾಗಿದೆ ಎಂದು ವ್ಯಾಪಕ ಟೀಕೆ ವ್ಯಕ್ತವಾಗಿದೆ.ನಾಲ್ವರು ರೈತರನ್ನು ಕೊಲೆ ಮಾಡಿದ ಪ್ರಕರಣದಲ್ಲಿ ಘಟನೆ ನಡೆದು ನಾಲ್ಕೇ ತಿಂಗಳಲ್ಲಿ ಜಾಮೀನು ದೊರೆತಿರುವದು ನಮ್ಮ ನ್ಯಾಯಾಂಗ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಆದಿತ್ಯನಾಥನನ್ನು ಮುಖ್ಯ ಮಂತ್ರಿ ಮಾಡಿ ಬಿಜೆಪಿ ಹೇಳಿಕೊಳ್ಳುವ ಯಾವ ಸಾಧನೆಯನ್ನೂ ಮಾಡಿಲ್ಲ. ಬದಲಾಗಿ ಇವರ ಆಡಳಿತದಲ್ಲಿ ಅಲ್ಪಸಂಖ್ಯಾತ ಮಾತ್ರವಲ್ಲ,ದಲಿತ ,ದಮನಿತ ಸಮುದಾಯಗಳ ಜನರಿಗೆ ರಕ್ಷಣೆ ಇರಲಿಲ್ಲ.ಹಾಥರಾಸ್ ನಲ್ಲಿ ದಲಿತ ಯುವತಿಯ ಮೇಲೆ ಅತ್ಯಾಚಾರ ಮಾಡಿದ ಮೇಲ್ವರ್ಗದ ಬಿಜೆಪಿ ನಾಯಕನನ್ನು ರಕ್ಷಿಸಲು ಬಿಜೆಪಿ ಯೋಗಿ ಸರ್ಕಾರ ನಡೆಸಿದ ಕಸರತ್ತನ್ನು ಅಲ್ಲಿನ ದಮನಿತ ಸಮುದಾಯ ಮರೆತಿಲ್ಲ.

ಸಮಾಜವಾದಿ ಪಕ್ಷದ ಸಾಮಾಜಿಕ ನ್ಯಾಯದ ತತ್ವ ಪ್ರಣಾಲಿಗೆ ಎದುರಾಗಿ ತಮ್ಮದ ಸಾಮಾಜಿಕ ಸಾಮರಸ್ಯ ಸಿದ್ಧಾಂತ ಎಂದು ಮೋದಿ,ಯೋಗಿ ಜೋಡಿ ರೈಲು ಬಿಡುತ್ತಿದ್ದರೂ ಇವರ ಸಾಮರಸ್ಯ ಎಂಥದು ಎಂದು ಅರಿತುಕೊಂಡ ಉತ್ತರ ಪ್ರದೇಶ ದ ಬಿಜೆಪಿ ಶಾಸಕರೇ ಪಕ್ಷಕ್ಕೆ ರಾಜೀನಾಮೆ ನೀಡಿ ಸಮಾಜವಾದಿ ಪಕ್ಷವನ್ನು ಸೇರುತ್ತಿದ್ದಾರೆ.ಹೀಗಾಗಿ ಕುಸಿಯುತ್ತಿರುವ ಕೋಟೆಯನ್ನು ಉಳಿಸಿಕೊಳ್ಳಲು ಮೋದೀಜಿ ಅವರು ಔರಂಗಜೇಬ– ಶಿವಾಜಿಯ ಕತೆಗಳನ್ನು ಹೇಳುತ್ತಿದ್ದಾರೆ.

ತನ್ನ ಆಡಳಿತದಲ್ಲಿ ಮಹಿಳೆಯರು ಸುರಕ್ಷಿತವಾಗಿದ್ದಾರೆ ಎಂದು ಆದಿತ್ಯನಾಥ ಹೇಳುತ್ತಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ತಳ ಸಮುದಾಯ ಗಳ ಯುವತಿಯರು ಹೊಲದ ಕೆಲಸಕ್ಕೆ ಅಥವಾ ದನ ಕರುಗಳನ್ನು ಮೇಯಿಸಲು ಹೊರಗೆ ಹೋದರೆ ಸುರಕ್ಷಿತ ವಾಗಿ ಮನೆಗೆ ವಾಪಸಾಗಲು ಸಾಧ್ಯವಿಲ್ಲ. ಅತ್ಯಾಚಾರ, ಮಾನಭಂಗ,ಕೊಲೆ ,ಅಲ್ಲಿ ಸಾಮಾನ್ಯ ಸಂಗತಿಗಳಾಗಿವೆ ಎಂದು ಅಧಿಕೃತ ಅಂಕಿ ಅಂಶಗಳೇ ಹೇಳುತ್ತವೆ.2020 ರ ವರ್ಷದಲ್ಲಿ ಯೋಗಿ ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಚಾರ ಮತ್ತು ದೌರ್ಜನ್ಯದ 9864 ಪ್ರಕರಣಗಳು ನಡೆದಿವೆ ಎಂದು ನ್ಯಾಷನಲ್ ಕ್ರೈಂ ಬ್ಯುರೊ ತಿಳಿಸಿದೆ.2018 ರಲ್ಲಿ ಮಹಿಳೆಯರ ಮೇಲೆ 59,445 ದೌರ್ಜನ್ಯ ದ ಪ್ರಕರಣಗಳು ನಡೆದಿವೆ.2019 ರಲ್ಲಿ ಮಹಿಳೆಯರ ಮೇಲೆ 59 ,853 ದೌರ್ಜನ್ಯ ದ ಪ್ರಕರಣಗಳು ನಡೆದಿವೆ.ಈ ಅಂಕಿ ಅಂಶಗಳಿಗೆ ಆದಿತ್ಯನಾಥರ ಬಳಿ ಉತ್ತರವಿಲ್ಲ.ಪ್ರಧಾನಿ ಮೋದೀಜಿ ಚುನಾವಣಾ ಭಾಷಣಗಳಲ್ಲಿ ಅದೇ ಹಳೆಯ ಔರಂಗಜೇಬ,ಶಿವಾಜಿಯ ಕತೆ ಹೇಳುತ್ತಾರೆ.

ಬಾಬಾಸಾಹೇಬರ ಕಾಲದಿಂದಲೂ ಬಹುತೇಕ ಎಲ್ಲ ಪ್ರಗತಿಪರರಾಗಲಿ ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಪ್ರತಿಪಾದಿಸುತ್ತ ಬಂದಿದ್ದಾರೆ.ಇದಕ್ಕೆ ಪ್ರತಿಯಾಗಿ ಸಂಘಪರಿವಾರ ಸಾಮರಸ್ಯ ಎಂಬ ವಂಚನೆಯ ಹುಸಿ ತತ್ವ ಪ್ರಣಾಲಿಯನ್ನು ಮುಂದೆ ಮಾಡಿ ದಲಿತ ,ದಮನಿತ ಸಮುದಾಯ ಗಳಿಗೆ ಸಾಮಾಜಿಕ ನ್ಯಾಯ ವನ್ನು ನಿರಾಕರಿಸುತ್ತ ಎಷ್ಟೇ ತುಳಿತಕ್ಕೊಳಗಾದರೂ ಮೈ ಮೇಲೆ ಬಾಸುಂಡೆಗಳು ಮೂಡಿದರೂ ಬರೆ ಕೊಟ್ಟವರೊಂದಿಗೆ "ಸಾಮರಸ್ಯ" ದಿಂದಿರಿ ಎಂದು ಬುರುಡೆ ಬಿಡುತ್ತಾ ಬಂದಿದ್ದಾರೆ.ಇದರ ಹಿಂದಿನ ವಂಚನೆ ಉತ್ತರ ಪ್ರದೇಶದ ಮತದಾರರಿಗೆ ಅರಿವಾಗಿದೆ ಎಂದು ಇತ್ತೀಚಿನ ವರದಿಗಳು ತಿಳಿಸುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಪ್ರಧಾನ ಮಂತ್ರಿ ಆವಾಸ ಯೋಜನೆಯ ಅಡಿಯಲ್ಲಿ ಬಂದ ಹಣಕಾಸು ನೆರವನ್ನು ದಲಿತ ,ದಮನಿತ ಸಮುದಾಯ ಗಳಿಗೆ ನೀಡಲಾಗುತ್ತಿಲ್ಲ.ತಳ ಸಮುದಾಯ ಗಳ ಯುವತಿಯರ ಮೇಲೆ ಅತ್ಯಾಚಾರ, ಬಲಾತ್ಕಾರ ನಡೆದರೆ ಅಪರಾಧಿಗಳನ್ನು ಹಿಡಿಯಬೇಕಾದ ಪೊಲೀಸರು ಅಪರಾಧ ಎಸಗಿದವರ ಪರವಾಗಿ ನಿಲ್ಲುತ್ತಾರೆ.ಇದರಿಂದ ರೋಸಿ ಹೋದ ನೊಂದ ಜನ ಯೋಗಿಗೆ ಪಾಠ ಕಲಿಸಲು ಸಜ್ಜಾಗಿ ನಿಂತಿದ್ದಾರೆ.

ನಿತ್ಯ ಮಾನಭಂಗ,ಅತ್ಯಾಚಾರ, ಮತ್ತು ಹತ್ಯೆಗೀಡಾಗುವ ಮಹಿಳೆಯರು ಯಾವ ಸಮುದಾಯದವರೆಂದು ಪ್ರತ್ಯೇಕಿಸಿ ಹೇಳಬೇಕಾಗಿಲ್ಲ.ಶತಶತಮಾನಗಳಿಂದ ಈ ಕ್ರೌರ್ಯ ವನ್ನು ಅನುಭವಿಸುತ್ತ ಬಂದ ಸಮುದಾಯ ಗಳ ಮಹಿಳೆಯರೇ ಮತ್ತೆ ಬಲಿ ಪಶುವಾಗುತ್ತಿದ್ದಾರೆ.

: ಕಿವಿಯ ಮೇಲೆ ಬರೀ ಹಿಂದುತ್ವದ ಹೂವನ್ನಿಟ್ಟು ಮೇಲ್ವರ್ಗ,ಮೇಲ್ಜಾತಿಗಳ ಹಿತಾಸಕ್ತಿಗಳನ್ನು ರಕ್ಷಿಸುವ ಬಿಜೆಪಿ ಯ ಹಿಂದುತ್ವದ ಬೂಟಾಟಿಕೆ ಉತ್ತರ ಪ್ರದೇಶದ ದಮನಿತ ಸಮುದಾಯ ಗಳಿಗೆ ಅರ್ಥವಾಗಿದೆ. ಕೈಗೆ ಕೆಲಸ ನೀಡದ,ಶಾಲೆ ಕಾಲೇಜು ಗಳಲ್ಲಿ ಪ್ರವೇಶ ಸಿಗದ,ಹೊಟ್ಟೆಗೆ ಅನ್ನ ನೀಡದ ರಾಜಕೀಯ ಹಿಂದುತ್ವದ ಟೋಪಿ ಹಾಕಿಸಿಕೊಳ್ಳಲು ವಂಚಿತ ಸಮುದಾಯಗಳು ಈ ಬಾರಿ ತಯಾರಿಲ್ಲ.

: ಸಮಾಜವಾದಿ ನಾಯಕರಾದ ಮುಲಾಯಮ್ ಸಿಂಗ್ ಯಾದವ ಮತ್ತು ನ ಲಾಲೂ ಪ್ರಸಾದ ಯಾದವರ ಅಹಿಂದ ತತ್ವ ಪ್ರಣಾಲಿಗೆ ಪ್ರತಿಯಾಗಿ ಆರ್.ಎಸ್.ಎಸ್.ಚಿಂತಕ ಗೋವಿಂದಾಚಾರ್ಯ ಅವರು ರೂಪಿಸಿದ ಸೋಶಿಯಲ್ ಇಂಜನಿಯರಿಂಗ್ ಸೂತ್ರ ಇಲ್ಲಿಯವರೆಗೆ ಬಿಜೆಪಿ ಗೆ ನೆರವಾಗುತ್ತ ಬಂದಿದೆ.ಅಂದರೆ ಹಿಂದುಳಿದ ವರ್ಗಗಳಲ್ಲೇ ನಿರ್ಲಕ್ಷಿತ ಸಣ್ಣ ಜಾತಿಗಳನ್ನು ಬುಟ್ಟಿಗೆ ಹಾಕಿಕೊಂಡು ತನ್ನದೇ ಹಿಂದುತ್ವದ ಓಟ್ ಬ್ಯಾಂಕನ್ನು ಬಿಜೆಪಿ ನಿರ್ಮಿಸಿಕೊಂಡಿದೆ.( ಉದಾಹರಣೆಗೆ ಕರ್ನಾಟಕದಲ್ಲಿ ದಲಿತರನ್ನು ಬಲಗೈ ಎಡಗೈ ಎಂದು ವಿಭಜಿಸಿ ತನ್ನದೇ ಓಟ್ ಬ್ಯಾಂಕ್ ನಿರ್ಮಿಸಿಕೊಂಡಂತೆ)ಆದರೆ ಉತ್ತರ ಪ್ರದೇಶದಲ್ಲಿ ಈ ಚುನಾವಣಾ ಉದ್ದೇಶದ ಓಟ್ ಬ್ಯಾಂಕ್ ಈ ಸಲ ಕೈ ಕೊಡುವ ಸೂಚನೆಗಳಿವೆ.ಸಮಾನತೆ, ಸಾಮಾಜಿಕ ನ್ಯಾಯ ಬಯಸುವ,ಸರ್ಕಾರದ ನೌಕರಿಗಳಲ್ಲಿ ತಮ್ಮ ಪಾಲು ಕೇಳುವ,ಶಾಲೆ ಕಾಲೇಜುಗಳಲ್ಲಿ ಪ್ರವೇಶ ಕೇಳುವ ತಳ ಸಮುದಾಯಗಳು ಈ ಸಲ ಬಿಜೆಪಿ ಗೆ ಪಾಠ ಕಲಿಸುವ ಸೂಚನೆಗಳಿವೆ.

ಇತರ ಹಿಂದುಳಿದ ಸಮುದಾಯಗಳಿಗೆ ಉದ್ಯೋಗ, ಮತ್ತು ಶಿಕ್ಷಣದಲ್ಲಿ ಶೇಕಡಾ27 ರಷ್ಟು ಮೀಸಲು ಒದಗಿಸಲು ತಾನೇ ನೇಮಿಸಿದ ಸಾಮಾಜಿಕ ನ್ಯಾಯ ಆಯೋಗದ ವರದಿಯ ಜಾರಿಗೆ ಯೋಗಿ ಸರಕಾರ ತಯಾರಿಲ್ಲ ಎಂಬುದ ಹಿಂದುಳಿದ ಸಮುದಾಯ ಗಳಲ್ಲಿ ಆಕ್ರೋಶ ಕ್ಕೆ ಕಾರಣವಾಗಿದೆ. ಕೊವಿಡ್ ಸಾಂಕ್ರಾಮಿಕ ನಿರ್ವಹಣೆಯನ್ನು ಸರಿಯಾಗಿ ಮಾಡಿಲ್ಲ ಎಂಬ ಪ್ರತಿಪಕ್ಷ ಗಳ ಟೀಕೆಗೆ ಉತ್ತರಿಸುವಾಗ "ಲಾಕ್ ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಹೋಗಲು ಪ್ರತಿಪಕ್ಷ ಗಳು ಪ್ರಚೋದನೆ ನೀಡಿದ್ದರಿಂದ ಕೊರೊನಾ ಭಾರತದಾದ್ಯಂತ ವ್ಯಾಪಿಸಿತು " ಎಂಬ ಹಾಸ್ಯಾಸ್ಪದ ಮಾತನ್ನು ಮೋದಿ ಆಡಿದರು. ಬಿಜೆಪಿ ಆಡಳಿತದ ರುಚಿ ಕಂಡ ಉತ್ತರ ಪ್ರದೇಶದ ಮತದಾರರು ಈ ಸಲ ಅದಕ್ಕೆ ಪಾಠ ಕಲಿಸುವ ಸೂಚನೆ ಗಳಿವೆ.ಉತ್ತರ ಪ್ರದೇಶ ಸೌಹಾರ್ದ ಕರ್ನಾಟಕದತ್ತ ಬರುತ್ತಿದೆ. ಆದರೆ ಕರ್ನಾಟಕ ಯೋಗಿಯ ಉತ್ತರ ಪ್ರದೇಶದತ್ತ ಹೊರಟಿದೆ.ಇದೇ ನಮ್ಮ ನಾಡಿನ ದುರಂತ.

ಇದರಿಂದ ಹತಾಶರಾಗಿರುವ ಪ್ರಧಾನಿ ನರೇಂದ್ರ ಮೋದಿಯವರು ಸಂಸತ್ತಿನಲ್ಲಿ ಮಾತಾಡುವಾಗ ಚುನಾವಣಾ ಸಭೆಯಲ್ಲಿ ಮಾತಾಡಿದಂತೆ ಮಾತಾಡಿದ್ದಾರೆ.ರಾಷ್ಟ್ರಪತಿಯವರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವದನ್ನು ಬಿಟ್ಟು ಸರ್ಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಏನೇನೋ ಮಾತಾಡಿದ್ದಾರೆ.



ರಾಜ್ಯದ ಜನಪ್ರಿಯ ನಾಯಕರಲ್ಲಿ ಒಬ್ಬರೆನಿಸಿರುವ ಸಿದ್ದರಾಮಯ್ಯ ತಮ್ಮ ಸ್ಪರ್ಧೆಗೆ ಸುರಕ್ಷಿತ ಕ್ಷೇತ್ರದ ಹುಡುಕಾಟದಲ್ಲಿದ್ದಾರೆ. ಇದೇ ಕೊನೆ ಚುನಾವಣೆ ಎಂದು ದೇವೇಗೌಡರಂತೆ ಈ ಹಿಂದೆ ಹೇಳಿದ್ದ ಸಿದ್ದರಾಮಯ್ಯ ಮತ್ತೆ ಸಿಎಂ ಆಗುವ ಕನಸಿನಲ್ಲಿ ಕ್ಷೇತ್ರ ಹುಟುಕಾಟದ ಪರದಾಟದಲ್ಲಿದ್ದಾರೆ. ಐದು ವರ್ಷ ಸಿಎಂ ಆಗಿದ್ದ ಅವರಿಗೆ ಈ ಪರಿಸ್ಥಿತಿ ಬರಬಾರದಾಗಿತ್ತು. ಅವರ ಜೊತೆಗೆ ಜೆಡಿಎಸ್ ತೊರೆದು ಬಂದಿದ್ದ ಸಿ.ಎಂ. ಇಬ್ರಾಹಿಂ ಈಗ ಕಾಂಗ್ರೆಸ್ ಬಿಡುವ ಮಾತನಾಡುತ್ತ ಜೆಡಿಎಸ್ ಕದ ಬಡಿಯುತ್ತಿದ್ದಾರೆ. ಸಿದ್ದರಾಮಯ್ಯ ಹಿಂದೆ ಅವರ ಸಮುದಾಯ ಗಟ್ಟಿಯಾಗಿ ನಿಂತಿದೆ. ಆದರೆ ಇಬ್ರಾಹಿಂ ಹಿಂದೆ ಕೈಬೆರಳೆಣಿಕೆ ಜನರೂ ಇಲ್ಲ.

# ಸಿದ್ದು ಪರದಾಟ: ಇಬ್ರಾಹಿಂ ಅಪಲಾಪ

**ರಾಜಸೂತ್ರ**

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



1) ಕಳೆದ ಕೆಲವು ದಿವಸಗಳಿಂದ ಕಾಂಗ್ರೆಸ್ ಪಕ್ಷದ ಒಳಗೆ ಅದಕ್ಕೆ ಹೊಂದಿಕೊಂಡಂತೆ ಹೊರಗೆ ಎರಡು ಸಂಗತಿ ಚರ್ಚೆಗೆ ಒಳಗಾಗಿವೆ. ಬರಲಿರುವ ಚುನಾವಣೆಯಲ್ಲಿ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎನ್ನುವುದು ಚರ್ಚೆಯಾಗುತ್ತಿರುವ ಒಂದು ಸಂಗತಿ. ವಿಧಾನ ಪರಿಷತ್ ಸದಸ್ಯ ಸಿ.ಎಂ.ಇಬ್ರಾಹಿಂ ಎಂಬ ತಥಾಕಥಿತ ಮುಸ್ಲಿಂ ನಾಯಕ ಕಾಂಗ್ರೆಸ್ ಪಕ್ಷವನ್ನು ಒದ್ದು ಹೊರಕ್ಕೆ ಹೋಗಲಿರುವುದಾಗಿ ಮಾಡುತ್ತಿರುವ ಸದ್ದು ಎರಡನೆಯದು. ಈ ಇಬ್ಬರು ಭವಿಷ್ಯತ್ತಿನಲ್ಲಿ ಇಡಬಹುದಾದ ಹೆಜ್ಜೆ ಕುತೂಹಲ ಕೆರಳಿಸಿರುವುದು ಸತ್ಯ.

2) ರಾಜ್ಯದಲ್ಲಿ ಕೆಲವೇ ಕೆಲವರು ಎನ್ನಬಹುದಾದ ಮಾಸ್ ಲೀಡರ್‌ಗಳಲ್ಲಿ ಸಿದ್ದರಾಮಯ್ಯ ನಿಸ್ಸಂಶಯವಾಗಿ ಒಬ್ಬರು. ಜನತಾ ಪರಿವಾರದ ಮಾರ್ಗ ಹಿಡಿದು ಜನತಾ ದಳದ ಭಾಗವಾಗಿ ಜಾತ್ಯತೀತ ಜನತಾ ದಳದ ಮುಂಚೂಣಿ ನಾಯಕರಾಗಿ ಬೆಳೆದ ಸಿದ್ದರಾಮಯ್ಯ ತಾವು ಹುಟ್ಟಿಬೆಳೆದ ಕುರುಬ ಸಮುದಾಯವನ್ನು ಅತ್ಯಂತ ಪ್ರಬಲ ರಾಜಕೀಯ ಶಕ್ತಿಯನ್ನಾಗಿಸಿದ್ದಾರೆ. ಆ ಸಮುದಾಯಕ್ಕೆ ಸಿದ್ದರಾಮಯ್ಯ ಮಾತೆಂದರೆ ವೇದವಾಕ್ಯ. ಇಂಥವರನ್ನು ಸೋಲಿಸಿ ಎಂದೋ ಅಥವಾ ಗೆಲ್ಲಿಸಿ ಎಂದೋ ಸಿದ್ದರಾಮಯ್ಯ



ಕಣ್ಸನ್ನೆ ಮಾಡಿದರೂ ಸಾಕು, ಆ ಸಮುದಾಯದ ಮತದಾರರು ಚಾಚೂತಪ್ಪದೆ ಪಾಲಿಸುತ್ತಾರೆ. ರಾಜ್ಯ ನಾಯಕ ಆಗುವುದಕ್ಕೂ ಸಮುದಾಯದ ನಾಯಕ ಆಗುವುದಕ್ಕೂ ಬಹಳ ವ್ಯತ್ಯಾಸವಿದೆ. ರಾಜ್ಯದ ಸರ್ವ ಸಮುದಾಯದ ನಾಯಕರಾಗಿ ಯಶಸ್ಸು ಕಂಡವರು ಅಪರೂಪ. ಜಾತಿ ಬಲವೇ ಇಲ್ಲವಾಗಿದ್ದ ದೇವರಾಜ ಅರಸು, ರಾಮಕೃಷ್ಣ ಹೆಗಡೆಯಂಥ ಕೆಲವರು ಮಾತ್ರ ಈ ಎತ್ತರಕ್ಕೆ ಏರಿದರು. ಆದರೆ ಅದು ಬಹಳ ಕಷ್ಟದ ಗುರಿ. ಮುಟ್ಟುವುದು ಅಸಾಧ್ಯ. ಸರಳ ಸುಲಭದ ಮಾರ್ಗವೆಂದರೆ ಜಾತಿ ಸಮುದಾಯದ ಮುಖಂಡರಾಗುವುದು. ಜಾತಿ ನಾಯಕರಾದರೆ ಅದರಿಂದ ರಾಜಕೀಯ ಲಾಭ ಹೆಚ್ಚು ಎನ್ನುವುದು ಅನುಭವಿ ಸಿದ್ದರಾಮಯ್ಯನವರಿಗೆ ಗೊತ್ತಿದೆ. ಎಂದೇ ಅವರು ಕುರುಬ ಸಮುದಾಯದ ಕೆ.ಎಸ್.ಈಶ್ವರಪ್ಪ, ಬಂಡೆಪ್ಪ ಕಾಶೆಂಪುರ ಮುಂತಾದವರು ರೇಸಿನಲ್ಲಿ ಇಲ್ಲದಂತೆ ಮಾಡಿ ಮೇಲುಗೈ ಸಾಧಿಸಿದ್ದಾರೆ.

3) ರಾಜ್ಯದ ಅನೇಕ ವಿಧಾನ ಸಭಾ ಕ್ಷೇತ್ರಗಳಲ್ಲಿ ಕುರುಬ ಮತದಾರರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಇದು ವಿಪಕ್ಷ ನಾಯಕರ ನಿರುಮ್ಮಳಕ್ಕೆ ಕಾರಣವಾಗಬೇಕಿತ್ತು. ಯೋಚನೆಗೆ ಅವಕಾಶವಿಲ್ಲ ಎಂಬಂಥ ಸನ್ನಿವೇಶ ಸೃಷ್ಟಿಸಬೇಕಿತ್ತು. ಆದರೆ ಎಲ್ಲೋ ಏನೋ ಎಡವಟ್ಟಾಗುತ್ತಿದೆ ಎಂಬ ಆತಂಕ ಅವರನ್ನು ಆವರಿಸಿದಂತಿದೆ. ಅವರ ನೆಚ್ಚಿನ ಚಾಮುಂಡೇಶ್ವರಿ (ಮೈಸೂರು) ಕ್ಷೇತ್ರ ಅವರಿಗೆ ಕೈಕೊಟ್ಟಿದ್ದು 1918ರ ಚುನಾವಣೆ ಫಲಿತ. ಅತ್ಯಂತ ಜನಾನುರಾಗಿ ನಾಯಕ ಎನಿಸಿದ್ದ ಅವರು ತಾವೇ ಪೋಷಿಸಿದ ಕ್ಷೇತ್ರದಲ್ಲಿ ಮೂವತ್ತು ಸಾವಿರಕ್ಕೂ ಅಧಿಕ ಮತಗಳಿಂದ ಪರಾಜಿತರಾದ ಬೆಳವಣಿಗೆ ಕ್ಷಣಕ್ಷಣವೂ ಅವರನ್ನು ಹಿಂಡಿಹಿಪ್ಪೆ ಮಾಡುತ್ತಿದೆ. ಕಳೆದುಕೊಂಡಿದ್ದನ್ನು ಕಳೆದುಕೊಂಡಲ್ಲೆ ಹುಡುಕಬೇಕು ಎನ್ನುತ್ತದೆ ಜೆನ್ ಗಾದೆ. ಅಂಥ ಯತ್ನಕ್ಕೆ ಕೈ ಹಾಕಿದರೆ ಮತ್ತೆ ಅದೇ ಹಳೆ ಗತಿ ಎದುರಾಗಬಹುದೆಂಬ ಭಯ ಅವರ ಆತಂಕದ ಮೂಲ. 2018ರಲ್ಲಿ ಜೆಡಿಎಸ್‌ನ ಜಿ.ಟಿ. ದೇವೇಗೌಡರು ಸಿದ್ದರಾಮಯ್ಯನವರನ್ನು ಮಣಿಸಿದರು. ಆ ಚುನಾವಣೆಯಲ್ಲಿ ಸಿದ್ದರಾಮಯ್ಯ ಸೋಲಿಗೆ ವ್ಯವಸ್ಥಿತವಾಗಿ ಬಲೆ ಹೆಣೆದವರು ಎಚ್.ಡಿ. ಕುಮಾರಸ್ವಾಮಿ. ಆ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರಿಗೆ ತಮ್ಮ ಪಕ್ಷದ ಜಿಟಿಜಿ ಗೆಲುವಿಗಿಂತ ಕಾಂಗ್ರೆಸ್‌ನ ಸಿದ್ದರಾಮಯ್ಯ ಸೋಲು ಮುಖ್ಯವಾಗಿತ್ತು. ಈಗ ಜಿಟಿಜಿ ಒಂದು ಕಾಲನ್ನು ಜೆಡಿಎಸ್‌ನಿಂದ ಹೊರಕ್ಕೆ ಕಾಂಗ್ರೆಸ್‌ನತ್ತ ಇಟ್ಟಿದ್ದಾರೆ. ಕಾಂಗ್ರೆಸ್‌ಗೆ ಅವರು ಬಂದುದೇ ಹೌದಾದರೆ ಚಾಮುಂಡೇಶ್ವರಿ ಟಿಕೆಟ್ ಅವರಿಗೇ. ಅಲ್ಲಿ ಸಿದ್ದರಾಮಯ್ಯಗೆ ಟಿಕೆಟ್ ಸಿಗದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹರಸಾಹಸ ಮಾಡಿಯಾದರೂ ಗೆಲುವು ಸಾಧಿಸುತ್ತಾರೆ! ವರುಣ ಕ್ಷೇತ್ರವನ್ನು ಮಗ ಯತೀಂದ್ರಗೆ ಬಿಟ್ಟುಕೊಟ್ಟಿರುವ ಸಿದ್ದರಾಮಯ್ಯ ಅಲ್ಲಿ ಮತ್ತೆ ಕಾಲಿಟ್ಟು ಮಗನಿಗೆ ಡಿಸ್ಟರ್ಬ್ ಮಾಡಲಾರರು. ಪ್ರಸ್ತುತ ಶಾಸಕರಾಗಿರುವ ಬಾದಾಮಿ ಕ್ಷೇತ್ರದಲ್ಲಿ ಸಿದ್ದು ಪುನಃ ಸ್ಪರ್ಧಿಸುವುದು ಅನುಮಾನ.



4) ಇದು ಬರಿ ಗಾಳಿ ಮಾತಲ್ಲ. ಬಿ.ಬಿ. ಚಿಮ್ಮಣಕಟ್ಟಿ ಕುರುಬ ಸಮುದಾಯಕ್ಕೆ ಸೇರಿದ ಕಾಂಗ್ರೆಸ್‌ನ ಹಿರಿಯ ಮುಖಂಡ. ಗುಂಡೂರಾವ್ ಸಂಪುಟದಲ್ಲಿ ಸಚಿವರಾಗಿದ್ದವರು. ಕಳೆದ ಸಲ ಬಾದಾಮಿಯನ್ನು ಸಿದ್ದರಾಮಯ್ಯನವರಿಗಾಗಿ "ತ್ಯಾಗ" ಮಾಡಿದ ಅವರು ಈಗ ಮತ್ತೆ ಅದೇ "ತಪ್ಪು" ಮಾಡಲು ಸಿದ್ಧರಿಲ್ಲ. ಅವರೆ ಹೇಳಿದ್ದಾಗಿ ವರದಿಯಾಗಿರುವಂತೆ "ತ್ಯಾಗರಾಜ" ಎನಿಸಿಕೊಳ್ಳುವುದು ಅವರಿಗೆ ಬೇಕಾಗಿಲ್ಲ. 1978, 83, 94, 99 ಹಾಗೂ 2013ರಲ್ಲಿ ಹೀಗೆ ಐದು ಬಾರಿ ವಿಧಾನ ಸಭೆಗೆ ಬಾದಾಮಿಯಿಂದ ಆಯ್ಕೆಯಾಗಿದ್ದ ಚಿಮ್ಮಣಕಟ್ಟಿ, ಪುನಃ ಸಿದ್ದರಾಮಯ್ಯ ಸ್ಪರ್ಧಿಸುವುದಕ್ಕೆ ಬಹಿರಂಗವಾಗಿಯೆ ವಿರೋಧ ವ್ಯಕ್ತಪಡಿಸಿದ್ದಾರೆ. "ನಲವತ್ತು ನಲವತ್ತೈದು ವರ್ಷದಿಂದ ಕ್ಷೇತ್ರವನ್ನು ನಾವು ಅಭಿವೃದ್ಧಿಪಡಿಸುವುದು; ಚುನಾವಣೆ ಸಮಯದಲ್ಲಿ ಯಾರ್ಯಾರೊ (ಸಿದ್ದರಾಮಯ್ಯ ಎಂದು ಓದಿಕೊಳ್ಳಿ) ಬಂದು ಸ್ಪರ್ಧಿಸುವುದು ಎಷ್ಟು ಸರಿ" ಎಂದು ಅವರು ಇತ್ತೀಚಿಗೆ ಕೇಳಿದ ಸಭೆಯಲ್ಲಿ ಸ್ವತಃ ಸಿದ್ದರಾಮಯ್ಯ ಹಾಜರಿದ್ದರು. ಅನ್ನ ಬೆಂದಿದೆಯೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಒಂದೆರಡು ಅಗುಳನ್ನು ಹಿಸುಕಿದರೆ ಸಾಕು. ಬಾದಾಮಿಯಲ್ಲಿ ಸಿದ್ದರಾಮಯ್ಯ ಗೆಲುವಿಗೆ ಹಗಲಿರುಳೂ ದುಡಿದಿದ್ದ ಮತ್ತೊಬ್ಬ ಹಿರಿಯ ಮುಖಂಡ ಎಸ್.ಆರ್.ಪಾಟೀಲರೂ ಮೊದಲಿನಂತಿಲ್ಲ. ತಮ್ಮನ್ನು ಎಂಎಲ್‌ಸಿಯಾಗಿ ಪುನರಾಯ್ಕೆ ಮಾಡಲು ಹೈಕಮಾಂಡ್ ಮಟ್ಟದಲ್ಲಿ ಯತ್ನಿಸದೆ ಮೌನಕ್ಕೆ ಮೊರೆ ಹೋದ ಸಿದ್ದರಾಮಯ್ಯ ಗೆಲುವಿಗೆ ಪಾಟೀಲರು ತ್ರಿಕರಣಪೂರ್ವಕ ಯತ್ನಿಸಿಯಾರೆಂಬ ಭರವಸೆ ಇಲ್ಲವೇ ಇಲ್ಲ. ಇದರ ಲೆಕ್ಕಾಚಾರ ಹಾಕಿರುವ ಸಿದ್ದರಾಮಯ್ಯ ಕೆಲವರನ್ನು ಸುರಕ್ಷಿತ ಕ್ಷೇತ್ರದ ಆಯ್ಕೆಗೆ ಛೂ ಬಿಟ್ಟಿದ್ದಾರೆ. ಕೊಪ್ಪಳ ಕ್ಷೇತ್ರದ ಶಾಸಕ ರಾಘವೇಂದ್ರ ಇಟ್ನಾಳ ಸ್ವತಃ ಕುರುಬ ಸಮುದಾಯದವರೇ ಆಗಿದ್ದು ಸಿದ್ದರಾಮಯ್ಯನವರಿಗಾಗಿ "ತ್ಯಾಗ"ಕ್ಕೆ ಸಿದ್ಧ ಎಂದಿದ್ದಾರೆ.



ಇತ್ತ ಚಾಮರಾಜಪೇಟೆ (ಬೆಂಗಳೂರು) ಶಾಸಕ ಜಮೀರ್ ಅಹಮದ್ ಖಾನ್ ತಮ್ಮ ಕ್ಷೇತ್ರವನ್ನು ಸಿದ್ದರಾಮಯ್ಯನವರಿಗೆ ಬಿಟ್ಟುಕೊಡುವುದಾಗಿ ಹೇಳಿದ್ದಾರೆ. ಕೊಪ್ಪಳದಲ್ಲಿ ಕುರುಬ ಮತದಾರರು ನಿರ್ಣಾಯಕ. ಚಾಮರಾಜಪೇಟೆ ಕ್ಷೇತ್ರದಲ್ಲಿ ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೆಚ್ಚಿನ ವಿವರಣೆ ಅನಗತ್ಯ.

2013ರ ಚುನಾವಣೆಯಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಬರುವುದು ಖಚಿತವಾಗಿತ್ತು. ಆಡಳಿತಾರೂಢ ಬಿಜೆಪಿಯಿಂದ ಬಿ.ಎಸ್.ಯಡಿಯೂರಪ್ಪ ಸಿಡಿದು ಕೆಜೆಪಿ ಕಟ್ಟಿದ್ದರು. ಆಡಳಿತ ವಿರೋಧಿ ಅಲೆಯೂ ಸೇರಿಕೊಂಡು ವಿಧಾನ ಸೌಧದ ಮೂರನೇ ಮಹಡಿ ದಾರಿ ಕಾಂಗ್ರೆಸ್‌ಗೆ ಸುಗಮವಾಗಿತ್ತು. ಆಗ ಮುಖ್ಯಮಂತ್ರಿ ಸ್ಥಾನಕ್ಕೆ ಡಾ.ಜಿ.ಪರಮೇಶ್ವರ ಮತ್ತು ಸಿದ್ದರಾಮಯ್ಯ ಹೆಸರು ಪೈಪೋಟಿಯಲ್ಲಿದ್ದವು. ಆ ಪೈಪೋಟಿ ಕೊರಟಗೆರೆ ಕ್ಷೇತ್ರದಲ್ಲಿ ಪರಮೇಶ್ವರ್ ಸೋಲಿನೊಂದಿಗೆ ನಿವಾರಣೆಯಾಗಿತ್ತು. ಆಗ ಕೇಳಿ ಬಂದ ಸುದ್ದಿ ಪ್ರಕಾರ ಆ ಸೋಲಿನ ಹಿಂದೆ ಸಿದ್ದರಾಮಯ್ಯ ಬೆಂಬಲಿಗರ ಕೈ ಕೆಲಸ ಮಾಡಿತ್ತು. ಬರಲಿರುವ ಚುನಾವಣೆಯಲ್ಲಿ ಡಿ.ಕೆ.ಶಿವಕುಮಾರ್ ಇದೇ ಕೆಲಸ ಮಾಡಲಾರರು ಎಂಬ ಧೈರ್ಯ ಸಿದ್ದರಾಮಯ್ಯ ಅವರಲ್ಲಿಲ್ಲ. ಹಾಗಾಗಿ ಸುರಕ್ಷಿತ ಕ್ಷೇತ್ರಕ್ಕಾಗಿ ಅವರ ಹುಡುಕಾಟ, ಪರದಾಟ ಸಾಗಿದೆ.



5) ಮೂರ್ಛೆರೋಗ (ಫಿಟ್ಸ್) ಸಮಸ್ಯೆ ಇರುವವರಲ್ಲಿ ಅದು ಆಗಾಗ ಮರುಕಳಿಸುತ್ತಿರುತ್ತದೆ. ಸಿ.ಎಂ. ಇಬ್ರಾಹಿಂರ ಮನೋಸಂರಚನೆ ಒಂದು ರೀತಿಯಲ್ಲಿ ಫಿಟ್ಸ್ ರೋಗದಂತೆ. ವರ್ಷದಲ್ಲಿ ಒಮ್ಮೆಯಾದರೂ ತಾವಿರುವ ಪಕ್ಷವನ್ನು ತೊರೆಯುವ ಮಾತನ್ನು ಅವರು ಆಡುತ್ತಿರುತ್ತಾರೆ. ಸಿದ್ದರಾಮಯ್ಯ ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಬಂದಾಗ ಅವರೊಂದಿಗೆ ಕೈ ಪಾಳಯ ಕೂಡಿಕೊಂಡ ಹಲವು ಮುಖಂಡರಲ್ಲಿ ಇಬ್ರಾಹಿಂ ಕೂಡಾ ಒಬ್ಬರು. ಜೆಡಿಎಸ್ ಹಾಗೂ ಅಪ್ಪಮಕ್ಕಳ ಸಹವಾಸ ಸಿದ್ದರಾಮಯ್ಯನವರಿಗೆ ಸಾಕಾಗಿತ್ತು. ಅದಕ್ಕೆ ಪೂರಕ ಎಂಬಂತೆ ಪಕ್ಷದಿಂದ ಅವರನ್ನು ಗೌಡರು ಹೊರಕ್ಕೆ ಹಾಕಿದರು. ಆ ಕ್ಷಣಕ್ಕೆ ಕಾಯುತ್ತಿದ್ದ ಕಾಂಗ್ರೆಸ್ಸು ಸಿದ್ದರಾಮಯ್ಯನವರಿಗೆ ಕೆಂಪು ಹಾಸಿನ ಸ್ವಾಗತ ಕೋರಿ ರಾಜಮರ್ಯಾದೆಯೊಂದಿಗೆ ಬರ ಮಾಡಿಕೊಂಡಿತು. ತನ್ನನ್ನು ಹೊರ ಹಾಕಿದ ಪಕ್ಷಕ್ಕೆ ಬುದ್ಧಿ ಕಲಿಸುವ ಉಪಾಯವಾಗಿ ಅದರಲ್ಲಿದ್ದ ಕೆಲವು ಪ್ರಮುಖ ನಾಯಕರನ್ನು ತನ್ನ ಜೊತೆ ಹೊರಹೆಜ್ಜೆ ಹಾಕುವಂತೆ ಮಾಡುವಲ್ಲಿ ಸಿದ್ದರಾಮಯ್ಯ ಯಶಸ್ವಿಯಾದರು. ಜೆಡಿಎಸ್ ತೊರೆದು ತನ್ನ ಜೊತೆ ಬಂದವರಿಗೆಲ್ಲರಿಗೂ ಕಾಂಗ್ರೆಸ್ ಹೆಬ್ಬಾಗಿಲು ತೆರೆಯುವಂತೆಯೂ ಮಾಡಿದರು. ಇದೀಗ ಇಬ್ರಾಹಿಂ ಕಾಂಗ್ರೆಸ್ ತೊರೆಯುವ ಮಾತಾಡಿದ್ದಾರೆ. ಇದು ಹೊಸದೇನೂ ಅಲ್ಲ. ಆಗಾಗ ಪಕ್ಷ ಬಿಡುವ ಮಾತನ್ನು ಅವರು ಆಡುತ್ತ ಇರುತ್ತಾರೆ. 2018ರ ನಂತರದಲ್ಲಿ ನಡೆದ ಕೆಲವು ಉಪ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಭಾಷಣ ಮಾಡುವ ಕೆಲಸಕ್ಕೂ ಇಬ್ರಾಹಿಂ ಹೋಗಲಿಲ್ಲ. ಪಕ್ಷದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂದು ತಮ್ಮದೆ ಧಾಟಿಯಲ್ಲಿ ವ್ಯಂಗ್ಯ ತಮಾಶೆ ಮಾಡುತ್ತ ದಿನಾ ದೂಡುವ ಕೆಲಸ ಮಾಡಿದವರು ಇಬ್ರಾಹಿಂ.



6) 1978ರಲ್ಲಿ ಒಮ್ಮೆ ಮಾತ್ರ ವಿಧಾನ ಸಭೆಗೆ ಆಯ್ಕೆಯಾಗಿದ್ದ ಇಬ್ರಾಹಿಂ ತದನಂತರದಲ್ಲಿ ರಾಜ್ಯಸಭೆ, ವಿಧಾನ ಪರಿಷತ್ತು ಎಂದು ಮೈಕೈ ನೋವಿಲ್ಲದ ರಾಜಕೀಯವನ್ನೇ ಮಾಡಿಕೊಂಡು ಬಂದವರು. ವೀರೇಂದ್ರ ಪಾಟೀಲರ ಆಶೀರ್ವಾದದಿಂದ ಬೆಳೆದು ದೇವೇಗೌಡರ ಗರಡಿಯಲ್ಲಿ ಕುಸ್ತಿ ಪಟ್ಟು ಕಲಿತ ಇಬ್ರಾಹಿಂ, ಸಮಯ ಸಂದರ್ಭ ನೋಡಿಕೊಂಡು ಮರದ ಆ ಕೊಂಬೆಯಿಂದ ಈ ಕೊಂಬೆಗೆ; ಈ ಕೊಂಬೆಯಿಂದ ಆ ಕೊಂಬೆಗೆ ಜಿಗಿಯುವ ಕೆಲಸದಲ್ಲಿ ಪ್ರಾವೀಣ್ಯತೆ ಹೊಂದಿದ ರಾಜಕಾರಣಿ. ಗುಂಡೂರಾವ್ ಸರ್ಕಾರದಲ್ಲಿ ಸಚಿವರಾಗಿದ್ದ ಸಮಯದಲ್ಲಿ ರೋಲೆಕ್ಸ್ ವಾಚ್ ಹಗರಣ ಮತ್ತು ಹಿಟ್ಟಿನ ಗಿರಣಿಗಳಿಗೆ ಲೈಸೆನ್ಸ್ ಕೊಡುವಲ್ಲಿ ಘಟಿಸಿದ ಹಗರಣ ಅವರ ಕೊರಳನ್ನು ಕುಣಿಕೆ ಹಾಕಿ ಜಗ್ಗಿತು. ತಲೆ ದಂಡವಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಅವರು ಮತ್ತೆ ಹತ್ತಿದ್ದು ಗೌಡರ ಗಾಡಿಯನ್ನು. ಗೌಡರು ಪ್ರಧಾನಿಯಾದಾಗ ಇಬ್ರಾಹಿಂ ಕೇಂದ್ರದಲ್ಲಿ ನಾಗರಿಕ ವಿಮಾನಯಾನ ಖಾತೆ ಸಚಿವರಾದರು. ಗೌಡರ ಪ್ರಧಾನಿಗಿರಿಯೊಂದಿಗೆ ಇವರ ಮಂತ್ರಿಗಿರಿಯೂ ಹೋಯಿತು. ಅಲ್ಲಿಂದ ಮತ್ತೆ ಕಾಂಗ್ರೆಸ್‌ಗೆ. ವಿಧಾನ ಸಭೆ ಚುನಾವಣೆ ಸೋತ ಇಬ್ರಾಹಿಂಗೆ ವಿಧಾನ ಪರಿಷತ್ ಸದಸ್ಯತ್ವ ಕೊಡಲಾಯಿತು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯುದ್ದಕ್ಕೂ ಅವರು ರಾಜ್ಯ ಯೋಜನಾ ಮಂಡಳಿಯ ಅಧ್ಯಕ್ಷರಾಗಿದ್ದರು. ಸಚಿವರಾಗಲಿಲ್ಲ ಆದರೆ ಸಂಪುಟ ದರ್ಜೆಯ ಸಕಲ ಭೋಗಭಾಗ್ಯವನ್ನೂ ಅವರು ಆನಂದಿಸಿದರು.

7) ಎಸ್.ಆರ್. ಪಾಟೀಲರ ಅಧಿಕಾರಾವಧಿ ಬಳಿಕ ತಮ್ಮನ್ನು ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕನನ್ನಾಗಿಸಿ ಸಂಪುಟ ದರ್ಜೆ ಸ್ಥಾನಮಾನವನ್ನು ಪಕ್ಷ ಕರುಣಿಸುತ್ತದೆ ಎಂಬ ಭ್ರಮೆ ಇಬ್ರಾಹಿಮರದಾಗಿತ್ತು. ಇಂದಿರಾ ಗಾಂಧಿ, ರಾಜೀವ ಗಾಂಧಿ ಕಾಲದಿಂದ ಇವತ್ತಿನವರೆಗೂ ಹೈಕಮಾಂಡ್‌ಗೆ ಹತ್ತಿರವಾಗಿರುವ ಬಿ.ಕೆ. ಹರಿಪ್ರಸಾದ್ ಅಲ್ಲಿ ಬಂದು ಕುಳಿತಾಗ ಇಬ್ರಾಹಿಂ ಭ್ರಮೆಯ ಪೊರೆ ಹರಿಯಿತು. ತಮ್ಮನ್ನು ಪಕ್ಷ ಗೌರವದಿಂದ ನಡೆಸಿಕೊಂಡಿಲ್ಲ ಎಂದು ಗುಟುರು ಹಾಕುತ್ತಿರುವ ಇಬ್ರಾಹಿಂ, ತಾನು ರಾಜೀನಾಮೆ ಕೊಟ್ಟರೆ ಕಾಂಗ್ರೆಸ್ಸು ಚಿಂದಿಚಿಂದಿ ಆಗುತ್ತದೆ ಎಂದು ಧಮಕಿ ಹಾಕುತ್ತಿದ್ದಾರೆ. ಫೆಬ್ರುವರಿ 14ರಂದು ಪಕ್ಷ ತೊರೆಯುವುದಾಗಿ ಹೇಳಿದ್ದ ಅವರಿಗೆ ಅವರೇ ಹೇಳಿಕೊಂಡಿರುವ ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ, ಜೆಡಿಎಸ್‌ಗಳಿಂದ ಅಂಥ ಧಾಂಧೂಂ ಆಹ್ವಾನ ಬಂದಿಲ್ಲ. ಹಾಗೆ ನೋಡಿದರೆ ಕಾಂಗ್ರೆಸ್‌ನಲ್ಲಿ ಸಿ.ಕೆ. ಜಾಫರ್ ಷರೀಫರ ನಂತರದಲ್ಲಿ ಮುಸ್ಲಿಮರ ಮಾಸ್ ಲೀಡರ್ ಆಗಿದ್ದವರು ರೋಷನ್ ಬೇಗ್. ಅವರು ಈಗ ಪಕ್ಷದಲ್ಲಿ ಇಲ್ಲ. ಇಬ್ರಾಹಿಂ ಪಕ್ಷ ತೊರೆದರೆ ಅಂಥ ಲಾಸ್ ಆಗದೆಂಬ ಕಾಂಗ್ರೆಸ್ ಲೆಕ್ಕಾಚಾರ ಸರಿಯಾದುದೇ ಆಗಿದೆ. ಯಾವ ಪಕ್ಷಕ್ಕೂ ಅಸೆಟ್ (ಆಸ್ತಿ) ಆಗುವ ಅರ್ಹತೆ ಇಬ್ರಾಹಿಂ ಅವರಿಗೆ ಇಲ್ಲ. ಅವರ ಸಭೆಗೆ ಅವರು ಹೇಳುವ ಜೋಕ್ ಕೇಳಲು ಜನ ಬರುತ್ತಾರೆ. ಹಾಗೆ ಬರುವವರಲ್ಲಿ ಒಂದಂಶದಷ್ಟೂ ಕಾಂಗ್ರೆಸ್‌ಗೆ ಮತ ಹಾಕುವವರಲ್ಲ. ಇದನ್ನು ಅರ್ಥ ಮಾಡಿಕೊಂಡಿರುವ ಪಕ್ಷ, ಇಬ್ರಾಹಿಂ ಹೋದರೆ ಹೋಗಲಿ ಎಂಬ ತೀರ್ಮಾನಕ್ಕೆ ಬಂದಂತಿದೆ. ಇದು ಅರ್ಥವಾಗಿಯೋ ಏನೋ "ಹಳೆ ಗಂಡನ ಪಾದವೇ ಗತಿ" ಎಂಬ ನಿಲುವಿಗೆ ಇಬ್ರಾಹಿಂ ಬಂದಿದ್ದಾರೆ!

# ಮುರುಘಾ ಶರಣರ ಸಮಕ್ಷ
# ಪತ್ರಿಕೆ ವಾರ್ಷಿಕೋತ್ಸವದ






ಒಂದು ಸಮಾರಂಭ ಮಾಡಬೇಕಾದರೆ ಹಲವಾರು ತೊಂದರೆಗಳು ಮತ್ತು ಸವಾಲುಗಳು ಎದುರಾಗುತ್ತವೆ ಎನ್ನುವುದು ನಿಜವಾದ ಮಾತು, ಕೆಂಧೂಳಿ ಪತ್ರಿಕೆಯ ವಾರ್ಷಿಕ ಸಮಾರಂಭ ಮಾಡಲು ಹಲವಾರು ಬಾರಿ ದಿನಾಂಕಗಳು ನಿರ್ಧಾರವಾಗಿದ್ದವು ಆದರೆ ಹಲವು ಸಂಕಷ್ಟಗಳು ಆ ದಿನಾಂಕಕ್ಕೆ ಅಡ್ಡಿಯಾಗಿದ್ದವು ,ಹೌದು ಮೊದಲು ನಾವು 2021 ನವೆಂಬರ್ 8 ರಂದು ಅಂದರೆ ಪತ್ರಿಕೆ ಆರಂಭವಾಗಿ ಒಂದು ವರ್ಷದ ದಿನಂದಂದೇ ಬೆಂಗಳೂರಿನಲ್ಲಿಯೇ ಮಾಡಬೇಕು ಎಂದು ನಿರ್ಧರಿಸಿದ್ದೆವು ಜೊತೆಗೆ ದೀಪಾವಳಿ ಸಂಚಿಕೆಯನ್ನು ಬಿಡುಗಡೆ ಮಾಡುವ ಯೋಚನೆ ಮಾಡಿದ್ದೆವು ಆದರೆ ಆ ದಿನಾಂಕದಂದು ಮಾಡಲು ಸಾಧ್ಯವಾಗಲಿಲ್ಲ ಆದಾದ ನಂತರ ಡಿಸೆಂಬರ್ 24 ರಂದು ಮಾಡಲು ಯೋಚಿಸಿದ್ದೆವು ಆದರೆ ಅದು ಆಗಲಿಲ್ಲ ಕೊನೆಗೆ ಚಿತ್ರದುರ್ಗದಲ್ಲಿ ಜನವರಿ 15 ರಂದು ಸಂಕ್ರಾಂತಿ ದಿನದಂದೇ ಮಾಡಲು ನಮ್ಮ ಬಳಗ ನಿರ್ಧರಿಸಿತ್ತು ಆದರೆ ಕೊರೊನಾ ಎಂಬ ಮಾಹಾಮಾರಿಯ ಹಿನ್ನೆಲೆಯಲ್ಲಿ ವಾರಾಂತ್ಯದ ಕರ್ಫ್ಯೂ ಅದಕ್ಕೆ ಅಡ್ಡಿಯಾಯಿತು ಕೊನೆಗೆ ಏನಾದರೂ ಆಗಲಿ ಫೆಬ್ರವರಿ 9 ರಂದು ಮಾಡಿಯೇ ತೀರಬೇಕು ಎಂದು ನಿರ್ಧರಿಸಿದ್ದೆವು ಆ ದಿನಾಂಕಕ್ಕೆ ಚಿತ್ರದುರ್ಗದ ಮುರುಘಾ ಮಠದ ಶರಣರು ಮನಃಪೂರ್ವಕವಾಗಿ ಒಪ್ಪಿಗೆ ನೀಡಿದ್ದರು ಅದೇ ರೀತಿ ಚೆಳ್ಳಕೆರೆ ಶಾಸಕ ಟಿ.ರಘುಮೂರ್ತಿ ಅವರು ಕೂಡ ಒಪ್ಪಿಗೆ ನೀಡಿದ್ದರು ಇನ್ನೂ ಇದೇ ವೇಳೆ ಪತ್ರಿಕೆಯ ಅಂಕಣ ಬರಹದ ಮನಮಿಡಿತ ಕೃತಿ ರೂಪದಲ್ಲಿ ತರಲಾಗಿದ್ದು ಅದನ್ನು ಲೋಕಾರ್ಪಣೆ ಮಾಡಲು ಕೂಡ ಮುರುಘ ಮಠದ ಶರಣರು ಒಪ್ಪಿದ್ದರು. ಈ ಕೃತಿ ಕುರಿತು ಮಾತನಾಡಲು ಹಿರಿಯ ಪತ್ರಕರ್ತರಾದ ಅನಂತ್ ಚಿನಿವಾರ ಅವರು ಒಪ್ಪಿಗೆ ನೀಡಿದ್ದರು. ಈ ಸಮಾರಂಭದಕ್ಕೆ ಚಿತ್ರದುರ್ಗದ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಕೂಡ ಉಪಸ್ಥಿತರಿರಲು ಒಪ್ಪಿಗೆ ನೀಡಿದ್ದರು ಆದರೆ ಕಾರಣಾಂತರಗಳಿಂದ ಈ ಇಬ್ಬರು ಅಧಿಕಾರಿಗಳು ಬರಲಾಗಲಿಲ್ಲ ಜೊತೆಗೆ ಶಾಸಕರು ಕೂಡ ಬೇರೆ ಕಾರ್ಯದ ನಿಮಿತ್ತ ಗೈರಾಗಿದ್ದರು .

ಉಳಿದಂತೆ ಮುರುಘ ಶರಣರು, ಅನಂತ್ ಚಿನಿವಾರ, ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಸ್ವಾಮಿ, ಆರ್‌ಟಿಓ ಅವರು ಸಮರಂಭದಲ್ಲಿ ಉಪಸ್ಥಿತರಿದ್ದರು. ಅಂದುಕೊಂಡಂತೆ ಸಮಾರಂಭ ಕ್ರೀಡಾಭವನದಲ್ಲಿ ಅಚ್ಚುಕಟ್ಟಾಗಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುರುಘಾಶರಣರು ವ್ಯಕ್ತಿ, ಅಭಿವ್ಯಕ್ತಿ, ಸ್ವಾತಂತ್ರ್ಯವನ್ನು ಪ್ರತಿಯೊಬ್ಬರು ರೂಢಿಸಿಕೊಂಡಾಗ ಅತ್ಯುತ್ತಮವಾದ ಸಾಹಿತ್ಯ ಮತ್ತು ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಿದೆ , ಸಾಮಾಜಿಕವಾಗಿ ನಿಯಮಾವಳಿಗಳನ್ನು ರೂಪಿಸಿ ಸಮಾಜದ ಸ್ವಾಸ್ತ್ಯಕ್ಕಾಗಿ ನಿರಂತರವಾಗಿ ಕಾರ್ಯಸೂಚಿಯನ್ನು ರೂಪಿಸಲಾಗಿದ್ದು ಆ ನಿಟ್ಟಿನಲ್ಲಿ ಸಮಾಜದ ಬೆಳವಣಿಗೆಗೆ ಕಾರ್ಯ ಪ್ರವೃತ್ತರಾಗಿದ್ದೇವೆ, ಸ್ವಾತಂತ್ರ್ಯವನ್ನು ಸೂಕ್ಷ್ಮವಾಗಿ ಬಳಸುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕಾದ ಜಾವಾಬ್ದಾರಿ ಮಾಧ್ಯಮ ಕ್ಷೇತ್ರದವರ ಮೇಲಿದೆ ಎಂದರು.

ಇನ್ನೂ ಪತ್ರಿಕೆಯನ್ನು ಇಂತ ಸಂದರ್ಭದಲ್ಲಿ ತರುವುದು ಸುಲಭದ ಮಾತಲ್ಲ ಪ್ರತಿ ಸಂಚಿಕೆಯೂ ಕೂಡ ಒಂದು ರೀತಿ ಪ್ರಸವದ ವೇದನೆಯಂತೆ ಅದು ಪತ್ರಿಕೆ ಹೊರತರುವವರು ಅನುಭವಿಸುವ ವೇದನೆ ಎಂದು ನುಡಿದರು.

ಇನ್ನೂ ಮನಮಿಡಿತ ಕೃತಿಯ ಬಗ್ಗೆ ಮಾತನಾಡುತ್ತಾ ಹಿರಿಯ ಪತ್ರಕರ್ತರಾದ ಅನಂತ್ ಚಿನಿವಾರ ಅವರು ಮನಮಿಡಿತ ಎಲ್ಲಾ ವಿಷಯಗಳನ್ನೊಳಗೊಂಡ ಒಂದು ವೈವಿದ್ಯಮಯ ಕೃತಿಯಾಗಿದೆ, ಸ್ವಾಮಿಜಿಗಳು ಇಂದು ಯಾವ ದೋರಣೆಗಳನ್ನು ಅನುಸರಿಸುತ್ತಿದ್ದಾರೆ ಎನ್ನುವುದನ್ನು ಕೂಡ ಸ್ವಾಮೀಜಿಗಳ ಕುರಿತು ಅತ್ಯಂತ ನಿಷ್ಠೂರವಾಗಿ ಬರೆಯಲಾಗಿದೆ ಎಂದರು.

ಉಳಿದಂತೆ ಹಿಜಾಬ್, ಕೇಸರಿ ಮತ್ತು ನೀಲಿ ಶಾಲುಗಳ ಮಧ್ಯೆಯ ಸಂಘರ್ಷದ ಸಂದರ್ಭದಲ್ಲಿ ಮಾಧ್ಯಮಗಳು ಪ್ರಬುದ್ಧತೆಯಿಂದ ನಡೆದುಕೊಳ್ಳಬೇಕಾದ ಅಗತ್ಯವಿದೆ ಎಂದು ಹಿರಿಯ ಪತ್ರಕರ್ತ ಅನಂತ್ ಚಿನಿವಾರ ಅಭಿಪ್ರಾಯ ಪಟ್ಟರು.

ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಬೇಕಾದರೆ ರಾಜಕೀಯ, ಅಧಿಕಾರಿ,







ವ್ಯವಸ್ಥೆಯ ನಾಯಕತ್ವ ಬಲಿಷ್ಠವಾಗಿರಬೇಕು. ಇಲ್ಲವಾದರೆ ಎಲ್ಲವೂ ಕೂಡ ಜಾಳು ಜಾಳಾಗಿ ಕಂಡುಬರುತ್ತದೆ.

ಸಂಘರ್ಷದ ಸಂದರ್ಭವಾಗಿರುವ ಹಿಜಾಬ್, ಕೇಸರಿ, ನೀಲಿಶಾಲುಗಳ ಹೋರಾಟವನ್ನು ನಿಯಂತ್ರಿಸುವಂತಹ ಶಕ್ತಿ ನಾಡಿನ ಧಾರ್ಮಿಕ ಕೇಂದ್ರಗಳ ಧರ್ಮಗುರುಗಳಿಗೆ ಇದೆ. ಆದರೆ ಇಂತಹ ಪರಿಸ್ಥಿತಿಯನ್ನು ಕಂಡು ಯಾರೊಬ್ಬ ಧಾರ್ಮಿಕ ಗುರುಗಳು ಕೂಡ ಮಾತನಾಡದೆ ಇರುವುದು ಮತ್ತು ಸಾಮಾಜಿಕ ಸಂಘರ್ಷವನ್ನು ತಪ್ಪಿಸಲು ಪ್ರಯತ್ನಿಸದೇ ಇರುವುದು ಶೋಚನೀಯ ಎಂದರು.

ಸಂಘರ್ಷಗಳನ್ನು ಏರ್ಪಾಟು ಮಾಡಿ ತಮ್ಮ ನಾಯಕತ್ವವನ್ನು ಗಟ್ಟಿಗೊಳಿಸಿಕೊಳ್ಳುವ ಮೂಲಕ ಸಮಾಜದ ಧಿಕ್ಕು ತಪ್ಪಿಸುವ ರಾಜಕಾರಣಗಳಿಗೆ ಮಠ ಮತ್ತು ಧಾರ್ಮಿಕ ಪೀಠಗಳು ಬಹಿಷ್ಕಾರ ಹಾಕಿ ನಿಯಂತ್ರಣಕ್ಕೆ ತರಬೇಕಾದ ಜವಾಬ್ದಾರಿ ಮಠಾಧೀಪತಿಗಳ ಮೇಲಿದೆ ಎಂದು ಹೇಳಿದರು. ವಿದ್ಯಾರ್ಥಿಗಳ ಸಂಘರ್ಷವನ್ನು ನಿಯಂತ್ರಿಸಿ ಶಿಕ್ಷಣ ಆದ್ಯತೆ ನೀಡುವಂತೆ ಮಾಡುವ ಉಸಾಬರಿ ರಾಜ್ಯದ ಆಡಳಿತರೂಡ ನಾಯಕರುಗಳ ಮೇಲಿದ್ದು, ಅದನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕೆಂದು ಅನಂತ್ ಚಿನಿವಾರ

ಸಲಹೆ
ಎಸ್.
ನೀತಿ,
ಸಮಾಜ
ಹೇಳಿದ
ವಿವಿ
ಚಳ್ಳಕೆರೆ
ಪರಮೇ
ಅಲೆಕ್ಸಾ
ಸಂದಭ
ಆಶಯ
ಕಾರ್ಯ
ಪತ್ರಕರ್ತ
ಕಾರಣಕ
ಸಿದ್ದತೆಗ

...ಮದಲ್ಲಿ
...ಕ್ಷಣ..







...ನೀಡಿದರು. ಹಂಪಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ವೈ. ...ಸೋಮಶೇಖರ್ ಮಾತನಾಡಿ ಕಾನೂನಿನ ಚೌಕಟ್ಟಿನಲ್ಲಿ ಸರ್ಕಾರ ...ನಿಯಮಗಳನ್ನು ರೂಪಿಸುತ್ತದೆ. ಅವುಗಳನ್ನು ಪಾಲಿಸುವ ಮೂಲಕ ...ದ ನೆಮ್ಮದಿಗಾಗಿ ಪ್ರತಿಯೊಬ್ಬರು ಕರ್ತವ್ಯ ನಿರ್ವಹಿಸಬೇಕು ಎಂದು ...ರು.

...ಧ ಕ್ಷೇತ್ರ ಗಣ್ಯರಾದ ಟಿ.ಕೆ. ಬಸವರಾಜ್, ಕ.ಮ.ರವಿಶಂಕರ್, ...ರ್ರಿಸ್ವಾಮಿ, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಓ. ...ಶ್ವರಪ್ಪ, ಹಂಪಿ ವಿ.ವಿ. ಪ್ರಾಧ್ಯಾಪಕ ಸೋಮಶೇಖರ್, ಡಾ. ...ಂಡರ್, ಹೆಚ್. ಲಕ್ಷ ?ಮಣ್ ಮುಂತಾದವರನ್ನು ಇದೇ ...ರ್ಯದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ... ನುಡಿಗಳನ್ನು ನರೇನಹಳ್ಳಿ ಅರುಣ್ ಕುಮಾರ್ ಮಾತನಾಡಿದರು. ...ಕ್ರಮ ನಿರೂಪಿಸಿ ಹನೀಫ್ ಎಮ್. ಕೋಟೆ ವಂಧಿಸಿದರು. ...ರಾದ ಅರುಣ್ ಕುಮಾರ್ ಮತ್ತು ಎಚ್.ಲಕ್ಷ್ಮಣ್ ಅವರು ...ರ್ತರಾಗಿದ್ದು ಆರಂಭದಿಂದಲೂ ಕೂಡ ಸಮಾರಂಭದ ಎಲ್ಲಾ ...ಳನ್ನು ಮಡಿಕೊಂಡು ಅಚ್ಚುಕಟ್ಟಾಗಿ ನಡೆಸಿದರು

# ರಾಜಕೀಯ ಹಠಕ್ಕಾಗಿ ಮಠ ಕಟ್ಟಿ...

**ರಾಜಕೀಯ ಪ್ರೇರಿತ ಮೂರನೇ ಪೀಠ:** ಬಾಗಲಕೋಟೆ ಯಲ್ಲಿ ಹುಟ್ಟಿರುವ ಈ ಮಠ ಬಿಜೆಪಿ ನಾಯಕ ಮತ್ತು ಸಚಿವ ಮುರುಗೇಶ ನಿರಾಣಿ ಉತ್ಸಾಹ ದಿಂದ ಚಿಗುರುತ್ತಿದೆ. ಅವರನ್ನೇ ಮುಂದಿನ ಮುಖ್ಯಮಂತ್ರಿ ಎಂದೂ ಬಣ್ಣಿಸಲಾಗಿದೆ. ಅವರು 1 ಕೋಟಿ ದಾನ ಮಾಡಿ ಮಠಾಧೀಶರ ಮೂಲಕ ತಮ್ಮ ಆಸೆ ಈಡೇರಿಸಿಕೊಳ್ಳಲು ಹೊರಟಿರುವುದನ್ನು ಖಂಡಿಸಲೇಬೇಕು. ಪಂಚಮಸಾಲಿಗಳಲ್ಲಿ ಬೇರೆ ಇನ್ನಾವ ನಾಯಕರು ಇಲ್ಲವೇ ಎಂಬ ಪ್ರಶ್ನೆಗೆ ಅಲ್ಲಿ ನೆರೆದಿದ್ದ ಮಠಾಧೀಶರೇ ಉತ್ತರಿಸಬೇಕು



● ಡಾ.ಮೈಸಿ ಪಾಟೀಲ್
ಹಿರಿಯ ಪತ್ರಕರ್ತರು

ಕಳೆದ ಭಾನುವಾರ ಬಾಗಲಕೋಟೆಯಲ್ಲಿ ಪಂಚಮಸಾಲಿಗಳ ಹೊಸ ಮಠವೊಂದು ಅಧಿಕೃತವಾಗಿ ಪ್ರಾರಂಭವಾಯಿತು. ಇದು ಪಂಚಮಸಾಲಿ ಸಮಾಜದ ಮೂರನೇ ಮಠ. ಈಗಾಗಲೇ ಕೂಡಲಸಂಗಮದಲ್ಲಿ ಒಂದನೇ, ಹರಿಹರದಲ್ಲಿ ಎರಡನೇ ಪಂಚಮಸಾಲಿ ಮಠವಿದ್ದು ಈಗ ಆರಂಭವಾಗಿರುವ ಬಾಗಲಕೋಟೆಯದ್ದು ಈ ಸಾಲಿನಲ್ಲಿ ಮೂರನೆಯದ್ದಾಗಿದ್ದು ಇನ್ನೆಷ್ಟು ಇಂತಹ ಮಠಗಳು ಆರಂಭವಾಗುತ್ತವೋ ಕಾದು ನೋಡಬೇಕು. ಏಕೆಂದರೆ ತಾಲ್ಲೂಕಿಗೊಂದು ಪಂಚಮಸಾಲಿ ಮಠ ಕಟ್ಟುವ ಉಮೇದನ್ನು ಸಂಘಟಕರು ಬಹಿರಂಗವಾಗಿಯೇ ಘೋಷಿಸಿಕೊಂಡಿದ್ದಾರೆ. ಸ್ವತಂತ್ರ ಭಾರತದಲ್ಲಿ ಬಲಿಷ್ಠರಾದವರು ಮಠಗಳನ್ನೂ, ಮಂದಿರಗಳನ್ನೂ ಎಷ್ಟು ಬೇಕಾದರೂ, ಹೇಗೆ ಬೇಕಾದರೂ ತಮ್ಮಿಚ್ಛೆ ಬಂದಂತೆ ಕಟ್ಟಿ ಕೊಳ್ಳಲು ಸಂವಿಧಾನವೇ ಅವಕಾಶ ನೀಡುತ್ತದೆ. ಆದರೆ ಅವರೂ ಒಪ್ಪಿಕೊಳ್ಳುವ ಬಸವ ಪಥದಲ್ಲಿ ಸಾಗಲು ಇದರಿಂದ ಸಾಧ್ಯವೇ ಎಂಬುದನ್ನು ಪರಿಶೀಲಿಸೋಣ.

## ಬಸವಣ್ಣನವರ ಆಶಯಗಳಿಗೆ ವಿರೋಧ:

"ಉಳ್ಳವರು ಶಿವಾಲಯವ ಮಾಡುವರು,

ನಾನೇನ ಮಾಡಲಿ ಬಡವನಯ್ಯ..." ಎಂಬ ಬಸವಣ್ಣನವರ ಸುಪ್ರಸಿದ್ಧ ಹಾಗೂ ಸರಳ ವಚನವನ್ನು ನಾವು ಯಾರೂ ಅರ್ಥ ಮಾಡಿಕೊಳ್ಳಲು ಹೋಗುವುದೇ ಇಲ್ಲ. ಇಲ್ಲಿ ಅವರು ಕೇವಲ ದೇವಾಲಯ ಕಟ್ಟುವುದನ್ನು ಮಾತ್ರ ವಿರೋಧಿಸಿಲ್ಲ, ಬದಲಿಗೆ ಮಠಮಂದಿರಗಳೂ ಬೇಡವೆಂದೇ ಹೇಳಿದ್ದಾರೆ. ಅದರ ಜೊತೆಗೆ ಬಡತನವನ್ನೂ ಸೇರಿಸಿದ್ದಾರೆ. ಬಡವನಿಗೆ ಅವನದ್ದೇ ಆದ ಇತಿಮಿತಿಗಳಿವೆ. ಗುಡಿ ಕಟ್ಟುವುದಾಗಲಿ, ಮಠ ಕಟ್ಟುವುದಾಗಲಿ ಅವನಿಗೆ ಅಸಾಧ್ಯ. ಪಂಚಮಸಾಲಿ ಸಮಾಜದ ಜನ ಬಡವರು, ಅವರಿಗೆ ಸರ್ಕಾರದ ಮೀಸಲಾತಿ ಬೇಕೇಬೇಕು ಎಂದು ಭಾರೀ ಹೋರಾಟ ಮಾಡುತ್ತಿರುವುದು ಸಮಂಜಸವಾಗಿ ಕಂಡರೂ

ಇದರಲ್ಲಿನ ಒಂದು ವಿರೋಧಾಭಾಸ ಮಿಂಚುತ್ತದೆ. ಈ ಮಠ ಕಟ್ಟುವ ಬದಲು ನೂರಾರು ಬಡ ಸ್ವಜಾತಿ ಪಂಚಮಸಾಲಿ ಜನರನ್ನು ಮೇಲೆತ್ತಬಹುದಿತ್ತು. ಅದಕ್ಕೇ ಬಸವಣ್ಣನವರು ಕಾಲುಗಳನ್ನೇ ಕಂಬವಾಗಿಸಿ, ದೇಹವನ್ನೇ ದೇವಾಲಯವನ್ನಾಗಿ ಮಾರ್ಪಡಿಸಿದರು. ಇದರಲ್ಲಿ ನಮ್ಮ ದೇಹವನ್ನು ದೇವಾಲಯದಂತೆ ಸ್ವಚ್ಛವಾಗಿ, ಶುಭ್ರವಾಗಿ ಇಟ್ಟುಕೊಳ್ಳಬೇಕೆಂಬ ಸೂಚನೆಯಿದೆ. ಶಿರವೇ ಹೊನ್ನ ಕಳಸ ಎಂಬುದು ತಟ್ಟನೆ ಫಳಫಳ ಹೊಳೆವ ಚಿನ್ನದ ಗೋಪುರದ ತುದಿಯನ್ನು ನೆನಪಿಸುತ್ತದೆ. ಅಂದರೆ ನಾವು ಅದರಂತೆ ಕಾಂತಿಯುತರಾಗಬೇಕಾದರೆ ಎಲ್ಲ ನೀಚತನ ಬಿಟ್ಟು ಎತ್ತರಕ್ಕೆ ಬೆಳೆದು ನಿಲ್ಲಬೇಕೆಂಬ ಆದೇಶವಿದೆ. ಈಗ ಮೋದಿ ಊದುತ್ತಿರುವ ಸ್ವಚ್ಛತೆಯ ಕಹಳೆಯನ್ನು ಬಸವಣ್ಣ 900 ವರ್ಷಗಳ ಹಿಂದೆಯೇ ಊದಿದ್ದರು ಎಂಬ ವಿಶೇಷವನ್ನು ನಾವು ಗಮನಿಸಬೇಕು. ಅಲ್ಲದೆ ಅವರು ವಚನದ ಕೊನೆಯಲ್ಲಿ 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂದಿರುವುದು ಚಲನಶೀಲತೆಯನ್ನು ಪ್ರತಿಪಾದಿಸುತ್ತದೆ ವಿನಹ ಮಠ ಸ್ಥಾಪನೆಯನ್ನಲ್ಲ. ಬಸವಣ್ಣನವರ ಕಾಲದಲ್ಲೆಲ್ಲೂ ಮಠ, ಗುಡಿ ಕಟ್ಟಿದ ಉದಾಹರಣೆಗಳಿಲ್ಲ. ವಚನಕಾರರೆಲ್ಲ ಇಂಥ ಒಂದು ಬಡವರ ಪರವಾದ ಚಳವಳಿಯ ಭಾಗವಾಗಿದ್ದರು.

## ಲಿಂಗಾಯತ ವೀರಶೈವ ಮಠಗಳ ಪ್ರಸ್ತುತತೆ:

ಮೊದಲಿಗೆ ಲಿಂಗಾಯತ ವೀರಶೈವ ಮಠಗಳು ಈಗಿನ ಕಾಲಕ್ಕೆ ಪ್ರಸ್ತುತವಾಗಿವೆಯೇ ಇಲ್ಲವೇ ಎಂಬುದನ್ನು ಒಂದಿಷ್ಟು ಗಮನಿಸೋಣ. ಲಿಂಗಾಯತ ವೀರಶೈವ ಒಂದೇ ಧರ್ಮವೋ ಅಥವಾಅವೆರಡೂ ಬೇರೆಬೇರೆಯೋ

ಎಂಬುದು ಸ್ಪಷ್ಟವಾಗಬೇಕು. ಇದನ್ನು ಯಾರು ನಿರ್ಧರಿಸಬೇಕು ಎಂಬುದೇ ಸಮಸ್ಯೆಯಾಗಿದೆ. ಈ ಎರಡು ಹೆಸರುಗಳಲ್ಲಿ ಒಂದನ್ನು ಕ್ರಮಬದ್ಧಗೊಳಿಸಬೇಕು. ಈ ಎರಡೂ ಮಠಗಳು ಬೇರೆಬೇರೆಯಾಗಿ ವರ್ತಿಸುವ

ಬದಲು ಒಂದೇ ಧಾರ್ಮಿಕ ಸಂಪ್ರದಾಯದ ಅಡಿ ಬರಬೇಕು. ಮಠಗಳಲ್ಲಿ ಈ ಬದಲಾವಣೆಯಾದರೆ ಸಮಾಜದಲ್ಲಿನ ಅಂತರ ತಾನೇ ತಾನಾಗಿ ಹೋಗುತ್ತದೆ. ವೀರಶೈವ ಪಂಚಪೀಠಗಳು ಸಿಂಹಾಸನದಿಂದ ಕೆಳಗಿಳಿಯ ಬೇಕು. ವಾಸ್ತವವನ್ನು ಅರಿತುಕೊಳ್ಳಬೇಕು. ಹಾಗೆ ನೋಡಿದರೆ ಇವೇ ಈಗ ನಿಜವಾಗಿ ಧರ್ಮ ಪ್ರಚಾರ ಮಾಡುತ್ತಿವೆ. ಲಿಂಗಾಯತ ವಿರಕ್ತ ಮಠಗಳು ಜಾತೀಯ ಭೇದ ಭಾವ ತೊಡೆದುಹಾಕಬೇಕು. ಜಾತಿ ಉಪಜಾತಿ ಆಧಾರದ ಮೇಲೆ ನಿಂತು ಕೊಳ್ಳುವ ಬದಲಾಗಿ ಎಲ್ಲಾ 150 ಉಪಜಾತಿಗಳನ್ನು ಆತುಕೊಳ್ಳಬೇಕು. ಈಗ ಆರಂಭವಾಗಿರುವ ಪಂಚಮಸಾಲಿ ಮಠದಂತೆ ಆಗಬಾರದು. ಎಲ್ಲಾ ಲಿಂಗಾಯತ ಉಪಜಾತಿಗಳಲ್ಲೂ ಬಡವರಿದ್ದೇ ಇದ್ದಾರೆ. ಬಡತನಕ್ಕೆ ಜಾತಿಯಿಲ್ಲ. ಬಡವರ ಬಗ್ಗೆ ರಾಜ್ಯದಲ್ಲಿ ಎಲ್ಲಾ 10 ಸಾವಿರದಷ್ಟಿರುವ ವಿರಕ್ತ ಮತ್ತು ಪಂಚಪೀಠಗಳವರು ಉದಾತ್ತವಾಗಿ ನಡೆದುಕೊಳ್ಳುವುದು ಅಗತ್ಯವೆನಿಸುತ್ತದೆ. ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು 'ದುಸ್ವಪ್ನ' ಕವನದಲ್ಲಿ ನಮ್ಮ ಮಠಗಳ ದುಸ್ಸಾಹಸವನ್ನು ವ್ಯಂಗ್ಯವಾಗಿ' ಕಂಡೆ ಕಂಡೆ ಏನೇನೋ ಕಂಡೆ, ಹಠಕ್ಕಾಗಿ ಮಠಕಟ್ಟಿದ ಜಗದ್ಗುರುಗಳ ಕಂಡೆ......ಕಾವಿಯೊಳಗೇ ಕೋವಿಯೆದ್ದದ್ದಕಂಡೆ....' ಎಂದು ಬಣ್ಣಿಸಿದ್ದಾರೆ.

# ಪೊಲೀಸ್ ವ್ಯವಸ್ಥೆಯ ಕೆಟ್ಟ ಸ್ಥಿತಿಗೆ ಹೊಣೆ ಯಾರು?

● ಪರಶಿವ ಧನಗೂರು

ಈಗ ರಾಜ್ಯದಲ್ಲಿ ಎಲ್ಲೆಂದರಲ್ಲಿ ಎಲ್ಲಾಕಡೆ ಪೊಲೀಸರನ್ನು ಟಾರ್ಗೆಟ್ ಮಾಡಿ ಕೆಲವರು ಹೀಯಾಳಿಸಿ, ಕಾಲೆಳೆದು, ಬಯ್ಯುತ್ತಿದ್ದಾರೆ. ಪೊಲೀಸರೆಂದರೇ ಸಮಾಜದ ವಿಲನ್ ಗಳು ಎದನ್ನುವ ರೀತಿ, ಖಾಕಿ ತೊಟ್ಟ ಪೊಲೀಸರೆಲ್ಲಾ ರಾಕ್ಷಸ ಪ್ರವೃತ್ತಿಯವರು, ಕಡುಭ್ರಷ್ಟರು, ಲಂಚಕೋರರು ಎನ್ನುವಂತೆ ಒನ್ ಸೈಡ್ ಅಭಿಪ್ರಾಯ ಮಂಡಿಸುತ್ತಾ ರಾಜ್ಯದಲ್ಲಿ ಕರ್ನಾಟಕದ ಪೊಲೀಸ್ ವ್ಯವಸ್ಥೆಯ ಬಗ್ಗೆ ಅಪನಂಬಿಕೆ ಸಂದೇಹ ಮೂಡುವಂತೆ ಮಾಡಲಾಗುತ್ತಿದೆ! ಯಾರೋ ಕೆಲವರು ಲಂಚತೆಗೆದುಕೊಂಡು, ಪೊಲೀಸ್ ಇಲಾಖೆಗೆ ಅಗೌರವ ತಂದು, ಕರ್ತವ್ಯಲೋಪವೆಸಗಿ ಭ್ರಷ್ಟಾಚಾರ ಮಾಡಿ ಆಸ್ತಿ ಮಾಡಿಕೊಂಡಿರುವ ಕಾರಣದಿಂದ ಇಡೀ ಪೊಲೀಸ್ ಇಲಾಖೆಯನ್ನೇ ನಾವು ದ್ವೇಷಿಸುವ ಅವಶ್ಯಕತೆ ಏನಿದೆ? ಹಗಲು ರಾತ್ರಿ ಎನ್ನದೆ ನಿದ್ರೆ ಗೆಟ್ಟು 24ಥ7 ರೀತಿಯಲ್ಲಿ ಸಾವಿನ ಹಂಗು ತೊರೆದು ಸಮಾಜವನ್ನು ಕಾಯುತ್ತಿರುವ ಹೈ ರಿಸ್ಕ್ ವೃತ್ತಿಯ ಸರ್ಕಾರಿ ಸೈನಿಕರು ನಮ್ಮ ಪೊಲೀಸರು! ಇತ್ತೀಚೆಗೆ ಈ ಸಮಾಜದ ಸ್ವಾಸ್ಥ್ಯ ಹಾಳಾಗಿದೆ. ವಿವಿಧ ಕಾರಣಗಳಿಂದಾಗಿ, ಅಜ್ಞಾನದಿಂದಾಗಿ, ಆರ್ಥಿಕ ಮುಗ್ಗಟ್ಟಿನಿಂದಾಗಿ ಹಾದಿತಪ್ಪಿದ ಜನರು ಅಡ್ಡದಾರಿ ಹಿಡಿದು ಅಪರಾಧ ಕ್ರತ್ಯವೆಸಗಲು ಯಾರು ಭಯಪಡುತ್ತಿಲ್ಲ! ಹಿಂಸೆ-ಅಹಿಂಸೆ, ಸರಿತಪ್ಪು, ಒಳ್ಳೆಯದ್ದು ಕೆಟ್ಟದ್ದು, ಸುಳ್ಳು ಸತ್ಯಗಳ ಪರಿವೆಯೇ ಇಲ್ಲದೆ ಮನುಷ್ಯರು ಅಮಾನವೀಯವಾಗಿ ನಡೆದುಕೊಳ್ಳುತ್ತಾ ತಮ್ಮ ಸುತ್ತಲಿರುವವರನ್ನೆ, ಸಹಜೀವಿಗಳನ್ನೇ ಮೋಸಗೊಳಿಸಿ, ಹಿಂಸಿಸಿ ದೋಚಿ ಬದುಕುತ್ತಿರುವ ಈ ಕಾಲಘಟ್ಟದಲ್ಲಿ ಪೊಲೀಸ್ ಇಲಾಖೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಹಗಲು ರಾತ್ರಿ ಎನ್ನದೆ ಕಳ್ಳಕಾಕರನ್ನು ದರೋಡೆ ಕೋರರನ್ನು, ವಂಚಕರನ್ನು ಬೇಟೆಯಾಡಿ ಜನರು ನೆಮ್ಮದಿಯಿಂದ ಬದುಕಲು ನಿದ್ದೆಗೆಟ್ಟು ತಲೆಕೆಡಿಸಿಕೊಂಡು ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡುತ್ತಾ ತಮ್ಮ ಜೀವನವನ್ನು ಪಣಕ್ಕಿಟ್ಟಿದೆ. ಖಾಕಿ ಬಟ್ಟೆ ತೊಟ್ಟು ಜನರನ್ನು ಸುಮ್ಮನೆ ಹಣಕ್ಕಾಗಿ ಪೀಡಿಸುವ ಭ್ರಷ್ಟ ಪೊಲೀಸರಿಗೆ ಬುದ್ದಿಕಲಿಸಲು ಸಂವಿಧಾನದಡಿಯಲ್ಲಿ ಕಾನೂನಿನ ಅಡಿಯಲ್ಲಿ ಹಲವಾರು ಉತ್ತಮ ಮಾರ್ಗಗಳಿವೆ. ಲಂಚಬಾಕ ಪೊಲೀಸರಿಗೆ ಸಸ್ಪೆಂಡ್, ವೇತನ ಕಡಿತ, ಟ್ರಾನ್ಸ್ ಫರ್ ,ನ್ಯಾಯಾಂಗ ಬಂಧನ, ಶಾಶ್ವತ ಜೈಲುವಾಸ, ಮುಂತಾದ ಕಠಿಣ ಕಾನೂನು ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರದ ಅಂಗಸಂಸ್ಥೆಗಳು, ನ್ಯಾಯಾಲಯ ಹಿಂದೆ ಮುಂದೆ ನೋಡಿಲ್ಲ. ಆದರೂ ಜನರು ಯಾರೋ ಒಬ್ಬ ಪೊಲೀಸ್ ಮಾಡುವ ತಪ್ಪಿಗೆ ಇಡೀ ಪೊಲೀಸ್ ಇಲಾಖೆಯನ್ನೇ ಹೊಣೆಮಾಡಿ ನಿಂದಿಸಿ ಅವಮಾನಿಸುವುದು, ಉನ್ನತ ಮಟ್ಟದ ಅಧಿಕಾರಿಗಳ ಹುದ್ದೆಗೂ ಗೌರವ ಕೊಡದೆ ಸಾಮಾಜಿಕ ವ್ಯವಸ್ಥೆಯನ್ನೇ ಹಾಳುಮಾಡುವಂತೆ ಅಸಂವಿಧಾನಿಕ ಆಡುಭಾಷೆಯಲ್ಲಿ ಬೈಯುವುದು ಕರ್ನಾಟಕದ ಜನತೆಗೆ ಶೋಭೆಯಲ್ಲ. ಈಗ ಅಂತಹ ಘಟನೆಗಳು ಕೆಲವು ಕಡೆ ಪುನರಾವರ್ತನೆ ಆಗಿವೆ. ಇದರಿಂದ ಜನರು ಇಡೀ ಪೊಲೀಸ್ ವ್ಯವಸ್ಥೆಯ ಬಗ್ಗೆ ನಂಬಿಕೆ ಕಳೆದುಕೊಳ್ಳುವಂತೆ ಅಸಹ್ಯ ಪಡುವಂತೆ ವಾತಾವರಣ ನಿರ್ಮಾಣವಾಗಿದೆ. ಇದು ಹೀಗಾಗಬಾರದಿತ್ತು. ಇದು ಭವಿಷ್ಯದಲ್ಲಿ ಉತ್ತಮ ಸಮಾಜ ನಿರ್ಮಾಣಕ್ಕೆ ಮಾರಕ. ಪೊಲೀಸರು ಎಲ್ಲಾ ಸರ್ಕಾರಿ ನೌಕರಂತಲ್ಲ ಎಲ್ಲರಿಗೂ ಪ್ರತಿವಾರದ ಭಾನುವಾರ ಸೆಕೆಂಡ್ ಶನಿವಾರ ರಜೆಯಿದ್ದರೇ ಪೊಲೀಸರಿಗೆ ಇರುವುದಿಲ್ಲ! ಹಬ್ಬಗಳಲ್ಲಿಯೂ ಪೊಲೀಸರು ನಮಗಾಗಿ ಹೆಚುವರಿ ಡ್ಯೂಟಿ ಮಾಡುತಾರೆ!







ನಿಗದಿತವಾದ ದುಡಿತದ ಸಮಯವಿಲ್ಲ. ಪೊಲೀಸರ ಕೆಲಸ ಯಾವಾಗ ಬೇಕಾದರೂ ತುರ್ತಾಗಿ ನಿಗದಿಯಾಗಬಹುದು. ಇದ್ದಕ್ಕಿದ್ದಂತೆ ಸಮಾಜದಲ್ಲಿ ಉಂಟಾಗುವ ಗಲಭೆ, ಕೊಲೆ ದರೋಡೆ, ಹೋರಾಟ, ಪಾದಯಾತ್ರೆ, ರಾಜಕೀಯ ಸಮಾವೇಶ, ದಿಡೀರ್ ದೆಹಲಿಯಿಂದ ಪ್ರಧಾನಮಂತ್ರಿಗಳ ಬೇಟಿ! ವಿದೇಶಿಗರೊಬ್ಬರ ವಿಸಿಟ್, ಪೊದೆಯೊಳಗೆ ಸಿಕ್ಕ ಯಾವುದೋ ಅನಾಥ ಹೆಣ ಹೊರುವ ಕೆಲಸ! ಮಳೆಗಾಳಿಗೆ ಮುರಿದು ರಸ್ತೆಗಡ್ಡಲಾಗಿ ಮಲಗಿದ ಮರ! ಯಾವುದಾದರೂ ಕಾರಣಕ್ಕಾದರೂ ಪೊಲೀಸರ ದಿಡೀರ್ ಡ್ಯೂಟಿ ಪ್ರಾರಂಭವಾಗುತ್ತವೆ! ಸದಾ ಸಮಯದ ಅಭಾವದಿಂದ ಮನೆಯವರ ಜೊತೆಗೆ ಬೆರೆಯಲು ಸಾಧ್ಯವಾಗದೆ, ಹಿರಿಯ ಅಧಿಕಾರಿಗಳ ಕಿರುಕುಳದಿಂದ, ಸಾರ್ವಜನಿಕರ ಬೈಗುಳದಿಂದ, ಹೆಂಡತಿ ಮಕ್ಕಳೊಂದಿಗೆ ಸಮಯಕಳೆಯಲಾಗದ ಬೇಸರದಿಂದ, ಕೆಲವು ಪೊಲೀಸರು ಮಾನಸಿಕವಾಗಿ ಅಸ್ವಸ್ಥ ಸ್ಥಿತಿಯಲ್ಲಿ ಖಿನ್ನತೆಗೆ ತುತ್ತಾಗಿ ಆಸ್ಪತ್ರೆ ಸೇರುತ್ತಿದ್ದಾರೆ! ತಮಗೆ ಎಷ್ಟೆಲ್ಲ ಮಾನಸಿಕ ದೈಹಿಕ ಆರೋಗ್ಯದ ಸಮಸ್ಯೆ ಗಳಿದ್ದರೂ ನಮ್ಮ ಪೊಲೀಸರು ಎದೆಗುಂದದೆ ಕಾರ್ಯಾಚರಣೆ ನಡೆಸಿ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸುವವರನ್ನು ಎಡೆಮುರಿ ಕಟ್ಟಿ ತಂದು ಜೈಲಿಗಟ್ಟುತ್ತಾರೆ! ಸಮಾಜದ ಸ್ವಾಸ್ಥ್ಯ ಹಾಳುಮಾಡುವ ರೌಡಿಗಳು, ಕೊಲೆಗಡುಕರು, ದರೋಡೆ ಕೋರರನ್ನು ವಂಚಕರನ್ನು ಬೇಟೆಯಾಡಿ ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಾರೆ. ಕಳ್ಳಕಾರಕರನ್ನು, ರೌಡಿಗಳನ್ನು ಕೆಲವು ಪುಡಾರಿ ರಾಜಕಾರಣಿಗಳು ತಮ್ಮ ಪ್ರಭಾವ ಬಳಸಿ ಪೊಲೀಸ್ ಸ್ಟೇಶನ್ ನಿಂದ ಬಿಡಿಸಲು ನಮ್ಮ ಪೊಲೀಸರನ್ನು ಹೆದರಿಸಿ ಬ್ಲಾಕ್ ಮೇಲ್ ಮಾಡುತ್ತಾರೆ. ಇದರಿಂದ ಖಡಕ್ ಪೊಲೀಸಿಂಗ್ ಮಾಡಲು ತೊಂದರೆಯಾಗುತ್ತಿದೆ. ಪೊಲೀಸರ ನೇಮಕಾತಿ, ವಿವಿಧ ಠಾಣೆಗಳಿಗೆ ವರ್ಗಾವಣೆಯಲ್ಲಿ ರಾಜಕೀಯ ಪಕ್ಷಗಳ ಹಸ್ತಕ್ಷೇಪ , ವರ್ಗಾವಣೆ ದಂಧೆಯಿಂದ ಕರ್ತವ್ಯ ನಿಷ್ಠೆಯಿಂದ ದುಡಿಯ ಬಯಸುವ ಪೊಲೀಸರು ಬೇಸತ್ತಿದ್ದಾರೆ. ಒಂದು ಠಾಣೆಯಿಂದ ಮತ್ತೊಂದು ಪೊಲೀಸ್ ಠಾಣೆಗೆ ವರ್ಗಾ ಮಾಡಿಸಿಕೊಳ್ಳಲು ಲಕ್ಷ ಲಕ್ಷ ಹಣವನ್ನು ರಾಜಕೀಯ ನಾಯಕರಿಗೆ ಕೊಡಬೇಕಿರುವುದು ದುರಂತವೇ ಸರಿ. ಹಲವು ಪೊಲೀಸ್ ಉನ್ನತ ಹುದ್ದೆಗಳನ್ನು ಕೋಟಿಗಳ ಲೆಕ್ಕದಲ್ಲಿ ಹರಾಜಿಗಿಟ್ಟವರು ಯಾರು? ಈಗಲೇ ಕೆಲವು ರಾಜಕಾರಣಿಗಳ ಛೇಲಾಗಳಿಗೆ, ಸಮಾಜಘಾತುಕ ಶಕ್ತಿಗಳಿಗೆ ಪೊಲೀಸರೆಂದರೇ ಭಯವೇ ಇಲ್ಲದಂತಾಗಿದೆ! ಇದಕ್ಕೆಲ್ಲ ಮೂಲ ಕಾರಣ ಪೊಲೀಸರು ರಾಜಕಾರಣಿಗಳಿಂದ ವರ್ಗಾವಣೆಯ ಬ್ಲಾಕ್ ಮೇಲ್ ತಂತ್ರದ ಬೆದರಿಕೆಗೆ ಒಳಗಾಗಿರುವುದು. ಪೊಲೀಸ್ ಇಲಾಖೆಯಲ್ಲಿ ರಾಜಕೀಯ ಪಕ್ಷಗಳ ಹಸ್ತಕ್ಷೇಪ ನಿಲ್ಲದೆ ಹೋದರೆ, ಮುಂದೊಂದು ದಿನ ಇಡೀ ದೇಶಕ್ಕೆ ಬೆನ್ನೆಲುಬಾಗಿ ನಿಂತಿರುವ ಪೊಲೀಸರು ಕೈಕಟ್ಟಿ ಕುಳಿತರೆ ಸಮಾಜದ ಸ್ವಾಸ್ಥ್ಯ ಹಾಳುಮಾಡಲು ಕಾದಿರುವವರಿಗೆ ಹಬ್ಬವಾಗುತ್ತದೆ. ಹಿಜಾಬ್ ಗಲಾಟೆಗೂ ಪೊಲೀಸರೇ ಬೇಕು. ಜನರಿಗೆ ಮಾಸ್ಕ್ ಹಾಕಿಸೋಕು ಖಾಕಿಯೇ ಬರಬೇಕು. ಕೊರೋನಾ ವೈರಸ್ ವಿರುದ್ಧದ ಹೋರಾಟದಿಂದ ಕಳ್ಳಕಾಕರ ಕೈಗೆ ಕೋಳ ತೊಡಿಸಲು ಪೊಲೀಸರು ಬೇಕೇ ಬೇಕು! ಹೀಗಿರುವಾಗ ಕೇವಲ ಒಬ್ಬ ಭ್ರಷ್ಟ ಪೊಲೀಸ್ ಸರಿಯಿಲ್ಲ ಎಂದುಕೊಂಡು ಇಡೀ ಪೊಲೀಸ್ ವ್ಯವಸ್ಥೆಯನ್ನೇ ಬೇಡ ಎನ್ನಲಾಗದು. ದೇಶದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿಯೂ ತಾಂಡವವಾಡುತ್ತಿರುವ ರಾಷ್ಟ್ರೀಯ ಸಮಸ್ಯೆ-ಪಿಡುಗಾದ ಲಂಚದ ವಿಷಯವನ್ನಿಟ್ಟುಕೊಂಡು ಎಲ್ಲಾ ಪೊಲೀಸರನ್ನು ಸಾರಾಸಗಟಾಗಿ ನಿರಾಕರಿಸುವ ಅವಶ್ಯಕತೆ ಇಲ್ಲ. ನಾವೆಲ್ಲರು ಬೆಚ್ಚಗೆ ಮನೆಗಳಲ್ಲಿ ಬೆಡ್ ಶೀಟ್ ಹೊದ್ದುಕೊಂಡು ಕಳ್ಳಕಾಕರ, ದರೋಡೆ ಕೋರರ ಭಯವಿಲ್ಲದೇ ಮನೆಯಲ್ಲಿ ನೆಮ್ಮದಿಯಾಗಿ ಮಲಗಲು, ನಿಶ್ಚಿಂತೆಯಿಂದ ಮಧ್ಯರಾತ್ರಿಯಲ್ಲೂ ಓಡಾಡಲು, ನಮ್ಮ ಕೆಲಸಗಳಲ್ಲಿ ತೊಡಗಲು ಪ್ರಮುಖ ಕಾರಣ ನಮ್ಮ ಕರ್ನಾಟಕದ ಹೆಮ್ಮೆಯ ಪೊಲೀಸರು. ಸರ್ಕಾರದ ಮಂತ್ರಿಗಳು, ಮೇಲಧಿಕಾರಿಗಳ ಆದೇಶ ಪಾಲಿಸುವುದರಲ್ಲೇ ಹೈರಾಣಾಗಿ ಹೋಗುತ್ತಿರುವ ಕೆಳಹಂತದ ಪೊಲೀಸರು, ಕರ್ತವ್ಯದ ಕರೆಗೆ ಓಗೊಟ್ಟು ತುರ್ತು ಸಂದರ್ಭಗಳಲ್ಲಿ ಮನೆಮಠ ಬಿಟ್ಟು ಮಳೆಗಾಳಿ ಎನ್ನದೇ, ಹಗಲು ರಾತ್ರಿ ಬೀದಿಯಲ್ಲಿ ನಿಂತು ಬದುಕು ಸವೆಸುತಿದ್ದಾರೆ. ಕೋಮುಗಲಭೆ, ರಾಜಕೀಯ ಪಕ್ಷಗಳ ಮೇಲಾಟ, ಚುನಾವಣೆ, ಜಾತ್ರೆ, ಹಬ್ಬ ಆಚರಣೆ, ಮಹೋತ್ಸವ ಮಹಾ ಸಮಾವೇಶ, ಸೆಲೆಬ್ರಿಟಿಗಳ ಸಾವು, ಸಿನಿಮಾ ನಟರ ಮದುವೆ ಮುಂಜಿ, ಹೋರಾಟ ಪಾದಯಾತ್ರೆ, ಕೊರೋನಾ ಸಾಂಕ್ರಾಮಿಕ ಸಂಕಷ್ಟದ ಕಾಲದಲ್ಲಿ ತಮ್ಮ ಪ್ರಾಣದ ಹಂಗು ತೊರೆದು ರಜೆಯಿಲ್ಲದೇ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ, ಮುಂದೆ ನಿಂತು ಕೆಲಸ ಮಾಡಿ ಪ್ರಾಣಕಳೆದುಕೊಂಡವರು ಇದೇ ಪೊಲೀಸರು! ಯಾವುದೇ ಅಟ್ಯಾಕು, ಬಾಂಬ್ ಬ್ಲಾಸ್ಟ್, ಟೆರರಿಸಂಗೂ ಹೆದರದೇ ಮುಂದೆ ನಿಂತು ಬಡಿದಾಡಿ ವ್ಯವಸ್ಥೆಯನ್ನು ಸರಿಪಡಿಸಲು, ಶಾಂತಿ ಕಾಪಾಡಲು ಟೊಂಕಕಟ್ಟಿ ನಿಲ್ಲುವವರೂ ನಮ್ಮ ಪೊಲೀಸರೇ. ನಮ್ಮ ಪೊಲೀಸರು ನಿಮ್ಮಂತೆಯೆ ಮನುಷ್ಯರೆ. ಎಷ್ಟೋ ಪೊಲೀಸರು ಕರ್ತವ್ಯ ನಿರ್ವಹಿಸುವಾಗ ಸಬ್ ಇನ್ಸ್ಪೆಕ್ಟರ್ ಮಲ್ಲಿಕಾರ್ಜುನ ಬಂಡೆ ಯಂತೆ ಕಳ್ಳಕಾಕರ ಮೋಸದೇಟಿಗೆ ಪ್ರಾಣ ಕಳೆದುಕೊಂಡಿದ್ದಾರೆ. ಭೀಕರವಾಗಿ ಹತ್ಯೆಯಾಗಿದ್ದಾರೆ. ಯಾವ ಪೊಲೀಸ್ ಠಾಣೆಯಲ್ಲಿಯೂ ಯಾವೊಬ್ಬ ಪೊಲೀಸರಿಗೂ ಬುಲೆಟ್ ಪ್ರೂಫ್ ಜಾಕೆಟ್ ಕೊಟ್ಟಿಲ್ಲ! ಆದರೂ ಸಮಾಜಘಾತುಕ ಶಕ್ತಿಗಳ ವಿರುದ್ಧ ಹೋರಾಡಲು ನಮ್ಮ ಪೊಲೀಸರು ಎದೆಗುಂದದೆ ಯಾವತ್ತೂ ಮುಂದೆ ನಿಂತಿದ್ದಾರೆ! ಮುಂದೆ ನುಗ್ಗುತ್ತಾರೆ! ಹಿರಿಯ ಅಧಿಕಾರಿಗಳ ಕಿರುಕುಳದಿಂದ ಸೀನಿಯರ್ ಪೊಲೀಸ್ ಆಫೀಸರ್ ಗಣಪತಿಯವರು ಆತ್ಮಹತ್ಯೆಗೆ ಶರಣಾದರೂ ಕೂಡ ಸಾವಿರಾರು ಹೊಸ ಯುವಕರು ಪೊಲೀಸ್ ಇಲಾಖೆಗೆ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ! ಇದು ನಮ್ಮ ದೇಶದ ಹೆಮ್ಮೆಯ ಪೊಲೀಸ್ ವ್ಯವಸ್ಥೆಯ ಮೇಲೆ ಜನರು ಇಟ್ಟಿರುವ ಪ್ರೀತಿ. ಯಾರೋ ಕೆಲವು ಹಣದಾಸೆಯ ಲಂಚಕೋರರ ತಪ್ಪಿನಿಂದ ಪೊಲೀಸರನ್ನು ಬೈಯ್ಯುವುದು , ಅವಮಾನಿಸಿ ಸೋಷಿಯಲ್ ಮೀಡಿಯಾ ಗಳಲ್ಲಿ ಸ್ಟೇಟಸ್ ಹಾಕುವುದು ಇತ್ತೀಚಿನ ಟ್ರೆಂಡ್ ಆಗಿದೆ! ನಕಲಿ ಮಾನವ ಹಕ್ಕುಗಳ ಸಂಘಟನೆಗಳಿಂದ, ನಕಲಿ ಸೋಷಿಯಲ್ ಮೀಡಿಯಾ ಪತ್ರಕರ್ತರ ಹಾವಳಿಯಿಂದ ಬೇಸತ್ತಿರುವ ನಿಷ್ಠಾವಂತ, ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವಾಗ ಮುಜುಗರಕ್ಕೆ ಒಳಗಾಗಿ ಉತ್ಸಾಹ ಕಳೆದುಕೊಳ್ಳುವಂತ ವಾತಾವರಣ ನಿರ್ಮಾಣವಾಗಿದೆ. ಬೆಂಗಳೂರಿನ ಪೊಲೀಸ್ ಕಮಿಷನರ್ ಕಮಲ್ ಪಂತ್ ರವರು ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ಹಗಲಿರುಳು ತರಲು ಶ್ರಮಿಸುತ್ತಿದ್ದಾರೆ. ರಾಜ್ಯ ಪೊಲೀಸ್ ಮಹಾನಿರ್ದೇಶಕ ರಾದ ಪ್ರವೀಣ್ ಸೂದ್ ರವರು ರಾಜ್ಯಾದ್ಯಂತ ಅಪರಾಧ ಪ್ರಕರಣಗಳು, ಅಕ್ರಮ ಚಟುವಟಿಕೆಗಳು ನಡೆಯದಂತೆ ತಡೆಯಲು ಕರ್ನಾಟಕದ ಪೊಲೀಸರನ್ನು ಹುರಿದುಂಬಿಸಿ ಕಾರ್ಯಾಚರಣೆಗಿಳಿಸಿದ್ದಾರೆ. ಮೂದಲ ಬಾರಿಗೆ ಗ್ರಹ ಮಂತ್ರಿಯಾಗಿರುವ ಅರಗ ಜ್ಞಾನೇಂದ್ರರವರು "ಪೊಲೀಸರು ಒಳ್ಳೆಯ ಕೆಲಸ ಮಾಡದಿದ್ದರೇ ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂದರ್ಭ ಎದುರಾಗುತ್ತದೆ!" ಎಂದು ಪ್ರೀತಿಯಿಂದ ಗದರಿ ಎಚ್ಚರಿಸಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಮೊನ್ನೆ ತಾನೆ ಬೆಂಗಳೂರಿನ ಟ್ರಾಫಿಕ್ ಪೊಲೀಸರ ಮೇಲೆ ಹಲವಾರು ಆಪಾದನೆಗಳು ಬಂದಿದ್ದವು. ಕರ್ನಾಟಕದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿಯವರೇ ಮದ್ಯೆ ಪ್ರವೇಶಿಸುವಂತಾಗಿತ್ತು! ಟ್ರಾಫಿಕ್ ಪೊಲೀಸರು ಬೈಕ್-ಕಾರುಗಳನ್ನು ಹಿಡಿದ ತಕ್ಷಣ ನಮ್ಮ ಜನರು ಪೊಲೀಸರನ್ನು ವಿಲನ್ ಗಳಂತೆ ನೋಡುವಂತಾಗಿದೆ! ಟ್ರಾಫಿಕ್ ಪೊಲೀಸರು ದಂಡ ವಸೂಲಿ ಮಾಡುವ ದುಂಡ್ಡು ಕೇವಲ ಪೊಲೀಸರ ಜೇಬಿಗೆ ಹೋಗಲ್ಲ! ಸರ್ಕಾರ ಟ್ರಾಫಿಕ್ ಪೊಲೀಸರಿಗೆ ಡೈಲಿ ಟಾರ್ಗೆಟ್ ನೀಡುವುದನ್ನು ಮೊದಲು ಬಿಡಬೇಕು. ಜೇನು ಕೀಳಲು ಕೈಹಾಕಿದವನು ಕೈನೆಕ್ಕದೆ ಇರುತ್ತಾನೆಯೇ? ಬೀದಿಯಲ್ಲಿ ನಿಂತ ಬಿಳಿ ಬಟ್ಟೆಯ ಪೊಲೀಸರು ಕರಪ್ಟ್ ಆಗಲು ಡೈಲಿ ಟಾರ್ಗೆಟ್ ಹೆಸರಲ್ಲಿ ಜನರ ಕಣ್ಣಲ್ಲಿ ವಿಲನ್ ಗಳಾಗಲು ಕಾರಣರಾರು? ನಮ್ಮ ಕರ್ನಾಟಕದ ಜನರಿಗೆ ಟ್ರಾಫಿಕ್ ರೂಲ್ಸ್ ಗಳ ಬಗ್ಗೆ ಇನ್ನೂ ಸರಿಯಾದ ಅವೇರ್ನೆಸ್ ಇಲ್ಲವಾಗಿರುವುದರಿಂದ ದಂಡ ಕೇಳಲು ಹೋದ ಟ್ರಾಫಿಕ್ ಪೊಲೀಸರು ಮತ್ತು ಜನರ ನಡುವೆ ಬೀದಿ ರಂಪಗಳಾಗುತ್ತವೆ! ಟ್ರಾಫಿಕ್ ರೂಲ್ಸ್ ಪಾಲಿಸದವರು ಡ್ಯೂಟಿ ಮಾಡುವ ಪೊಲೀಸರನ್ನು ಹೆದರಿಸಲು ರಾಜಕೀಯ ಪಕ್ಷಗಳ ನಾಯಕರಿಗೆ ಫೋನ್ ಮಾಡಿ ಒತ್ತಡ ಹೇರುತ್ತಿದ್ದಾರೆ! ಟ್ರಾಫಿಕ್ ಪೊಲೀಸರ ಎಷ್ಟೊ ಸಮಸ್ಯೆಗಳು ಬೀದಿಯಲ್ಲೇ ಹಾಗೆಯೇ ಬಿದ್ದಿವೆ. ಯಾವಾಗಲೋ ಕೊಟ್ಟ ಯೂನಿಫಾರ್ಮ್ ಹಳೆಯದಾಗಿವೆ! ಮೂರು ತಿಂಗಳಿಗೊಮ್ಮೆ ಹೊಸ ಯೂನಿಫಾರ್ಮ್ ಕೊಡುವ ವ್ಯವಸ್ಥೆಯಾಗುತ್ತಿಲ್ಲ. ಮಳೆಗಾಲದಲ್ಲಿ ರೈನ್ ಕೋಟ್ ಇಲ್ಲದೆ ಕೆಲಸ ನಿರ್ವಹಿಸಲು ಕಷ್ಟವಾಗುತ್ತಿದೆ. ಇಡೀ ರಾಜ್ಯದ ಜನತೆಗೆ ಫುಲ್ ಹೆಲ್ಮೆಟ್ ಕಡ್ಡಾಯ ಮಾಡಿದವರು ತಮ್ಮ ಟ್ರಾಫಿಕ್ ಪೊಲೀಸರಿಗೇ ಸರ್ಕಾರಿ ಹಣದಲ್ಲಿ ಫುಲ್ ಹೆಲ್ಮೆಟ್ ಕೊಡಲಾಗಲಿಲ್ಲ! ರಿಪ್ಲೆಕ್ಟಿವ್ ಜಾಕೆಟ್ ಕೊಡದೆ ಕತ್ತಲಲ್ಲಿ ರಸ್ತೆ ಮದ್ಯೆ ಟ್ರಾಫಿಕ್ ಪೊಲೀಸರನು ನಿಲ್ಲಿಸಿ ಪ್ರಾಣಕ್ಕೆ ಸಂಚಕಾರ ತರುತ್ತಿದ್ದಾರೆ! ಸಾಕ್ಸ್ ಶೂನಂತಹ ಮೂಲಭೂತ ಸೌಕರ್ಯಗಳನ್ನು ಕೊಟ್ಟು ಎಷ್ಟು ದಿನಗಳಾಯಿತೋ? ಡ್ಯೂಟಿ ಮಾಡುವ ಜಾಗದಲ್ಲಿ ವಿಶ್ರಾಂತಿಗೆ ಜಾಗವಿಲ್ಲ! ಬ್ಯಾಗು ಬಟ್ಟೆಬರೆ ವಾಕಿಟಾಕಿಗಳು ರಸ್ತೆಪಕ್ಕದಲ್ಲಿ ಬಿದ್ದಿರುತ್ತವೆ! ಇಂತಹ ಹಲವಾರು ಕಷ್ಟಗಳನ್ನು ಪತ್ರಿಕೆಯಬಳಿ ಟ್ರಾಫಿಕ್ ಪೊಲೀಸರು ಬಿಚ್ಚಿಡುತ್ತಾ ನಿತ್ಯ ಸರ್ಕಾರದ ಬೊಕ್ಕಸಕ್ಕೆ ದಂಡದ ತೆರಿಗೆ ಮೂಲಕ ಆದಾಯ ತರಲು ಬಿಸಿಲಿನಲ್ಲಿ ಒಣಗುತ್ತಿದ್ದಾರೆ. ಹೋಟೆಲ್ ನಲ್ಲಿ ತಾವು ಆರ್ಡರ್ ಕೊಟ್ಟ ದೋಸೆ ಬರುವುದು ಲೇಟಾದಾಗ ಸಹನೆಯ





ಕಟ್ಟೆಹೊಡೆದು ಬುಸುಗುಡುವ ಇದೆ ಜನ, ನಾನಾ ಕಾರಣಕ್ಕೆ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆದಾಗ ಬುಸುಗುಡುತ್ತಾ ಸಹನೆಯಿಂದ ನೆನೆಸಿಕೊಳ್ಳುವುದು ಇದೇ ಟ್ರಾಫಿಕ್ ಪೊಲೀಸರು ರಸ್ತೆಯಲ್ಲಿರಲೀ ಎಂದು! ಟ್ರಾಫಿಕ್ ಪೊಲೀಸರು ನಗರದ ನರನಾಡಿಗಳಂತ ರಸ್ತೆಯಲ್ಲಿ ನಿಂತು ಬಂಡಿಗಳು ಸರಾಗವಾಗಿ ಚಲಿಸಲು ಸಹಾಯಮಾಡುವ ಕೊಂಡಿಗಳು!

### ಒಂದುವರೆ ತಿಂಗಳಾದರೂ ಸಂಬಳವಂಚಿತ ಪೊಲೀಸರು!!

ಮತ್ತೊಂದು ಕಡೆ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ರಾದ ಸಿ.ಎಸ್. ಷಡಕ್ಷರಿ ಎಂಬುವರು ಕೇಂದ್ರ ಸರ್ಕಾರಿ ನೌಕರಿಗೆ ಸಿಗುವ ವೇತನವನ್ನು ರಾಜ್ಯ ಸರ್ಕಾರಿ ನೌಕರರಿಗೂ ನೀಡುವುದಾಗಿ ಕರ್ನಾಟಕ ರಾಜ್ಯ ಸರ್ಕಾರ ಇದೇ ಬಜೆಟ್ ನಲ್ಲಿ ಘೋಷಿಸಲಿದೇ! ಎಂದು ಹೇಳಿಕೆ ನೀಡುತ್ತಿರುವಾಗಲೇ ಸರ್ಕಾರಿ ನೌಕರರಲ್ಲೇ ಕಡೆಗಣಿಸಿದ ಇಲಾಖೆ ಎಂದು ನಾಮಾಂಕಿತ ಹೊತ್ತಿರುವ ಕರ್ನಾಟಕದ ಕೆ.ಎಸ್.ಆರ್.ಪಿ.ಯ ಪೊಲೀಸರಿಗೆ ಒಂದುವರೆ ತಿಂಗಳಾಗುತ್ತಾ ಬಂದರೂ ಇನ್ನೂ ತಿಂಗಳ ಸಂಬಳವನ್ನು ನೀಡದೆ ಕಡೆಗಣಿಸಿರುವುದು ಪತ್ರಿಕೆಗೆ

# ಮೈಲಾರವೂ, ಪರಂಪರೆ ಮತ್ತು ಅಲ್ಲಿನ ಕಾರ್ಣೀಕವೂ



## ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರ್ನಾಟಕದ ಪ್ರಸಿದ್ಧ ಜನಪದ ದೈವವಿರುವ ನೆಲೆಗಳಲ್ಲಿ ಮೈಲಾರ ಪ್ರಮುಖವಾದದ್ದು. ಇದು ಮೈಲಾರ ದೇವರು ಆದಿಮ ದೈವವೂ ಆಗಿದೆ. ಪಶುಪಾಲಕರ ಅದಿದೈವವಾದ ಇದು ವಿಜಯನಗರ ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಮೈಲಾರದಲ್ಲಿದೆ. ಇದನ್ನು ಹಿರೇಮೈಲಾರವೆಂತಲೂ ಕರೆಯುತ್ತಿದ್ದು, ಇದೇ ಮೈಲಾರದೇವರ ಮೂಲನೆಲೆಯೆಂದೂ ಹೇಳುತ್ತಾರೆ. ಮೈಲಾರವೆಂಬುದು ಮೈಲಾರಿ, ಮೈಲಾಳಿ ಮಲ್ಲಯ್ಯ, ಮಲ್ಲೇಶ್ವರ, ಮಲುದೇವ, ಮಲ್ಲಾರ, ಮಲ್ಲಾರಿ, ಮಲ್ಲಿಕಾರ್ಜುನ ಮೊದಲಾದ ಹೆಸರುಗಳಿಂದ ನಾಡಿನಾದ್ಯಂತ ಆರಾಧನೆಗೊಳ್ಳುತ್ತದೆ. ಇದು ಕರ್ನಾಟಕದಲ್ಲಿ ಮೈಲಾರವೆಂಬ ಹೆಸರಿನ ಅನೇಕ ಕ್ಷೇತ್ರಗಳನ್ನು ರಾಜ್ಯದಾದ್ಯಂತ ಕಾಣುತ್ತೇವೆ. ಅಲ್ಲದೆ ನೆರೆಯ ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲೂ ಮಲ್ಲಯ್ಯ, ಖಂಡೋಬಾ ಹೆಸರುಗಳಿಂದ ಪ್ರಸಿದ್ಧವಾಗಿದೆ. ಮೈಲಾರ ದೇವರು ಮೂಲತಃ ಪಶುಪಾಲಕ ದೈವ. ಇದರ ವಾಹನ ಕುದುರೆ. ಇದನ್ನು ಮಲ್ಲಾರಿ ಶಂಕರ, ಮಹಿಲಾರ ಶಂಕರದೇವರು, ಮೈಳಾರ ಲಿಂಗೇಶ್ವರ, ಮೈಲಾರ ಪರಮೇಶ್ವರ, ಮೈಲಾರಾಖ್ಯ ಗಿರೀಶ, ಮಾರ್ತಾಂಡ ಭೈರವನೆಂದೂ ಕರೆಯುತ್ತಾರೆ. ಇವನು ಶಿಷ್ಟಪರಂಪರೆಯಲ್ಲಿ ಮಲ್ಲಿಕಾರ್ಜುನನಾಗಿ ಕರೆಸಿಕೊಂಡಿದ್ದಾನೆ. ಇವನು ಮೂಲತಃ ಭೈರವನೇ ಆಗಿದ್ದಾನೆ. ಇಲ್ಲಿನ ಮೈಲಾರ ದೇವಾಲಯ ಕರ್ನಾಟಕದ ಪ್ರಸಿದ್ಧ ದೇವಾಲಯವೂ ಆಗಿದೆ. ಕಾಲಾನುಕ್ರಮವಾಗಿ ಜೀರ್ಣೋದ್ಧಾರಗೊಂಡ ಈ ದೇವಾಲಯವು ಗರ್ಭಗೃಹ, ಅಂತರಾಲ, ತೆರೆದ ಮಂಟಪ, ಉಪದೇಗುಲಗಳು ಮತ್ತು ಮಹಾದ್ವಾರಗಳನ್ನು ಹೊಂದಿದೆ. ಮುಖ್ಯ ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಮೈಲಾರಲಿಂಗನ ಮಣ್ಣಿನ ಮೂರ್ತಿಯಿದೆ. ಮೈಲಾರ ಲಿಂಗಪ್ಪನು ನಾಲ್ಕು ಕೈಗಳನ್ನು ಹೊಂದಿದ್ದು, ಅವುಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಭಿಕ್ಷಾಪಾತ್ರೆಗಳನ್ನು ಹಿಡಿದಿರುವನು. ಮುಖದಲ್ಲಿ ದೊಡ್ಡದಾದ ಮೀಸೆ, ಇಳಿಬಿದ್ದ ಗಡ್ಡ ಹಾಗೂ ತಲೆಯಲ್ಲಿ ಸುತ್ತಿದ ಜಡೆಯನ್ನು ಹೊಂದಿರುವನು. ಮೂರ್ತಿಯ ಕೆಳಗೆ ಎರಡು ರುಂಡಗಳಿದ್ದು, ಅವುಗಳನ್ನು ಮಲ್ಲಾಸುರ ಮತ್ತು ಮಣಿಕಾಸುರರೆಂದು ಕರೆಯುತ್ತಾರೆ. ಈ ದೇವಾಲಯದ ಸಭಾಮಂಟಪದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯ ಸೂಕ್ಷ್ಮ ಹಾಗೂ ಹೊಳಪಿನಲ್ಲಿರುವ ಕಂಬಗಳಿವೆ. ಇದರಿಂದ ದೇವಾಲಯವು 11–12ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಮೂರ್ತಿಯ ಮುಂದೆ ಸ್ವಯಂಭೂ ಶಿವಲಿಂಗವಿದೆ. ವಿಜಯನಗರ ಕಾಲದ ಕ್ರಿ.ಶ.1412 ಮತ್ತು 1446ರ ಶಾಸನಗಳಲ್ಲಿ ಮಯ್ಲಾರ ದೇವರ ಭಂಡಾರದ ಅಧಿಕಾರಿಯಾಗಿದ್ದ



ಗಂಗರಸು ದೇವಾಲಯದ ರಂಗಮಂಟಪ, ಚಿತ್ರತೋರಣದ ಮಂಟಪ, ಹೆಗ್ಗಡೆ ದೇವರ ಶಿಲಾಮಂಟಪ ಮತ್ತು ಮಾಳಲದೇವಿ ಸುಕನಾಸಿ ಮತ್ತು ನವರಂಗ ಮಂಟಪಗಳನ್ನು ನಿರ್ಮಿಸಿದ್ದನೆಂದು ತಿಳಿಸುತ್ತವೆ. ಹಾಗೆಯೇ ದೇವಾಲಯದ ಉತ್ಸವ ಮೂರ್ತಿಯನ್ನು 1518ರಲ್ಲಿ ಹೊನ್ನಿಸೆಟ್ಟಿಯ ಮಗ ನಕರಸಯ್ಯ ಮತ್ತು ಅವನ ಹೆಂಡತಿ ಬಸಮ್ಮ ಮಾಡಿಸಿದರೆಂದೂ ಶಾಸನದಿಂದ ತಿಳಿಯುವುದು.

ಚಿಕ್ಕಂದಿನಲ್ಲಿ ನಮ್ಮೂರಿನ ಮರಾಠರು ವರ್ಷಕ್ಕೊಮ್ಮೆ ಮೈಲಾರ ಜಾತ್ರೆಗೆ ಹೋಗುವ ಸಡಗರ, ಅಲ್ಲಿನ ಕಾರಣಿಕವನ್ನು ಜನರಿಗೆ ಹೇಳುವ ಮತ್ತು ಭಂಡಾರವನ್ನು ಮನೆಮನೆಗೆ ನೀಡುವ ಸಂಪ್ರದಾಯವನ್ನು ನೋಡಿ–ಕೇಳಿದ್ದೆನು. ಮೂರ್ನಾಲ್ಕು ದಿನಗಳ ಕಾಲ ಜಾತ್ರೆಯ ಸಂಭ್ರಮ, ಅಲ್ಲಿ ಹರಿಯುವ ತುಂಗಭದ್ರಾ ನದಿಯ ಬಗೆಗೂ ಕೇಳಿದ್ದೆನು. ಆದರೆ ಸ್ವತಃ ಮೈಲಾರವನ್ನು ನೋಡಿ ಅಲ್ಲಿನ ಜನಜಾತ್ರೆಯನ್ನು ಕಣ್ತುಂಬಿಕೊಳ್ಳಲು ಸಾಧ್ಯವಾದದ್ದು 1994ರಲ್ಲಿ. ಪ್ರತಿ ವರ್ಷ ಭಾರತ ಹುಣ್ಣಿಮೆಯಂದು ನಡೆಯುವ ಮೈಲಾರ ಜಾತ್ರೆಯಲ್ಲಿ ನಡೆಯುವ ವೈವಿಧ್ಯಮಯ ಆಚರಣೆಗಳು ಒಂದೇ, ಎರಡೇ. ಗೊರವಯ್ಯರ ಸಂಪ್ರದಾಯ ಮತ್ತು ಅಲ್ಲಿನ ಆಚರಣೆಗಳೋ ವಿಶಿಷ್ಟ ಪ್ರಕಾರದವು. ಕಂಚಾವೀರರ ಸರಳಿ ಹರಿಯುವ ಮತ್ತು ಬಗಣಿ ಗೂಟ ಪವಾಡ, ಶಸ್ತ್ರ ಪವಾಡ, ಆರತಿ ಪವಾಡ, ಕುದುರೆ ಕುಣಿತ, ಗೊರವರ ದೋಣಿ ಸೇವೆ, ಚಾಮರ ಸೇವೆ, ಉರುಳು ಸೇವೆ, ದೀವಟಿಗೆ ಸೇವೆ, ಭಂಡಾರ ಪೂಜೆಗಳು ವಿಶಿಷ್ಟವಾಗಿವೆ. ಹಾಗೆಯೇ ಗೊರವರ ಏಳುಕೋಟಿ ಏಳುಕೋಟಿ, ಏಳುಕೋಟಿ ಉಘೇ, ಚಾಂಗಮಲೋ ಚಾಂಗಮಲೋ ಎಂಬ ಸದ್ದು. ಇವೆಲ್ಲಕ್ಕಿಂತ ಮೈಲಾರಲಿಂಗನ ಜಾತ್ರೆಯ ಮಹತ್ವದ ಆಚರಣೆಗಳಲ್ಲಿ ಕಾರಣೀಕೋತ್ಸವವು ಬಹುಮುಖ್ಯವಾದದ್ದು. ಅದನ್ನು ನುಡಿಯುವ ಗೊರವಯ್ಯ ವ್ರತಾಚರಣೆಯನ್ನು ಕಟ್ಟುನಿಟ್ಟಾಗಿ ಆಚರಿಸಿ ಮೌನ ಸವಾರಿಯಲ್ಲಿ ಡಂಕನ ಮರಡಿಗೆ ಪಯಣ ಬೆಳೆಸುತ್ತಾನೆ. ಕಾರಣಿಕವೆಂಬುದು ಮುಂಬರುವ ವರ್ಷದ ವಿದ್ಯಮಾನಗಳ ಕುರಿತ ಭವಿಷ್ಯವಾಣಿ. ಕೃಷಿಯನ್ನು ನಂಬಿದ ಜನರಿಗೆ ಮಳೆ, ಬೆಳೆಗಳ ಕುರಿತು ಮೈಲಾರ ಲಿಂಗಪ್ಪನೇ ಗೊರವಯ್ಯನ ಬಾಯಿಯಿಂದ ಹೇಳಿಸುವ ಭವಿಷ್ಯವಾಗಿದೆ. ಈ ಹೇಳಿಕೆಗಾಗಿಯೇ ಲಕ್ಷಾಂತರ ಜನರು ಕಾದಿರುತ್ತಾರೆ.

ಕಾರಣಿಕ ನುಡಿಯುವವನು ಗೊರವಯ್ಯ, ಈತನನ್ನು ಕಾರಣಿಕದ ಗೊರವಯ್ಯನೆಂದೇ ಕರೆಯುತ್ತಾರೆ. ಗೊರವಪ್ಪ ಬಿಲ್ಲೇರುವುದೆಂದರೆ ಅದು ದಿಗ್ವಿಜಯದ ಸಂಕೇತವೂ ಹೌದು. ಗೊರವಯ್ಯನೋ ಕಬ್ಬಿಣದ ಬಿಲ್ಲನ್ನು ಏರಿ ಸದ್ದಲೇ ಎಂದಾಕ್ಷಣ ಇಡೀ ಜನಸ್ತೋಮವೇ ಸ್ತಬ್ದವಾಗುತ್ತದೆ. ಗೊರವಯ್ಯನ ಬಾಯಿಯಿಂದ ಬರುವ ಒಂದೇ ಒಂದು ಹೇಳಿಕೆಗಾಗಿ ಇಡೀ ದಿನ ಕಾದುನಿಂತಿರುತ್ತದೆ ಜನಸಮೂಹ. ಮತ್ತೆ ಕಾರ್ಣೀಕದ ನುಡಿಯಾದ ತಕ್ಷಣ ಇಡೀ ಜನಸಮೂಹ ಚಲಾಪಿಲ್ಲಿಯಾಗುತ್ತದೆ. ಇದೊಂದು ವಿಶಿಷ್ಟ ಅನುಭವ. ಆಕಾಶಕ್ಕೆ ಗುಂಡು ತೂಗಿತಲೇ ಪರಾಕ್ ಎಂಬ ನುಡಿ ಅಂದಿನ ಕಾರ್ಣೀಕೋತ್ಸವದ್ದಾಗಿತ್ತು. 2021ರಲ್ಲಿ ಮುತ್ತಿನ ರಾಶಿ ಮೂರು ಪಾಲು ಆತಲೇ ಪರಾಕ್ ಎಂಬುದಾಗಿತ್ತು. ಈ ಬಗೆಯ ಕಾರಣಿಕದ ಹೇಳಿಕೆಯನ್ನು ಜನರು ತಮಗೆ ತೋಚಿದಂತೆ ಅರ್ಥೈಸಿಕೊಳ್ಳುವ ಪರಿಪಾಟವೂ ಇದೆ. ಮೈಲಾರ ಪರಂಪರೆಯ ಪ್ರಾಚೀನತೆ ಶಾಸನ ಮತ್ತು ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ಕ್ರಿ.ಶ.11–12ನೆಯ ಶತಮಾನಕ್ಕೂ ಹಿಂದೆ ಹೋಗುತ್ತದೆ. ಇಲ್ಲಿನ ಮಣ್ಣಿನ ಮೂರ್ತಿಯ ಉಲ್ಲೇಖ 15–16ನೆಯ ಶತಮಾನದ ಸಾಹಿತ್ಯಗಳಲ್ಲಿದೆ. ಮೈಲಾರ ಎಂಬ ಪದವು 1017ರ ಹೊತ್ತಿಗೆ ಬಳಕೆಯಾಗಿದೆ. ಶಾಸನಗಳಲ್ಲಿ ಮೈಲಾರವನ್ನು ಉಂಗುರಾಲ, ಗುಂಗುರಾಚಂದ, ಗುಂಗುರಾಲವೆಂದು ಕರೆಯಲಾಗಿದೆ. ಇದಕ್ಕೆ ತುಂಗಭದ್ರಾ ನದಿಯು ಭೌಗೋಳಿಕವಾಗಿ ಉಂಗುರಕಾರದಲ್ಲಿ ಸುತ್ತುವರಿದು ಸಾಗುತ್ತಿರುವುದೂ ಕಾರಣವಾಗಿದೆ. ಒಟ್ಟಿನಲ್ಲಿ ಮೈಲಾರವು ಹಿರೇ ಮೈಲಾರವಾಗಿದ್ದು, ಇದು ಮೈಲಾರ ಲಿಂಗನ ಪರಂಪರೆಯ ಮೂಲ ನೆಲೆಯೆಂಬುದನ್ನು ವಿದ್ವಾಂಸರು ಒಪ್ಪುತ್ತಾರೆ. ಈ ಸಂಪ್ರದಾಯವು ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದು ಮುಂದುವರಿದು ಪ್ರಾಚೀನ ಪರಂಪರೆಯ ಪ್ರಮುಖ ದೈವವಾಗಿ ನಾಡಿನಾದ್ಯಂತ ವಿಭಿನ್ನವಾಗಿ ಆರಾಧನೆಗೆ ಒಳಪಟ್ಟಿರುವುದು ಗಮನಾರ್ಹ ಸಂಗತಿ.

---

ಮಾಹಿತಿ ಲಭಿಸಿದೆ!

ಹಾಸನದಲ್ಲಿರುವ 11ನೇ ಪಡೆ ಬೆಟಾಲಿಯನ್ ನ ಕೆ.ಎಸ್.ಆರ್.ಪಿ.ಯ ಸುಮಾರು 650 ಜನ ಬಡ ಪೊಲೀಸರಿಗೆ ಫೆಬ್ರವರಿ 15 ಆಗುತ್ತಾ ಬಂದರೂ ಇನ್ನೂ ಜನವರಿ ತಿಂಗಳ ಮಾಸಿಕ ವೇತವವನ್ನು ನೀಡಿಲ್ಲ! ರಾಜ್ಯದಲ್ಲಿ ಸುಮಾರು 18000 ರಕ್ಕೂ ಹೆಚ್ಚಿನ ಪೊಲೀಸರು ಕೆ.ಎಸ್. ಆರ್.ಪಿ.ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ನಾಲ್ಕು ಬೆಟಾಲಿಯನ್ ಗಳು ರಾಜ್ಯದ ಹಲವು ಜಿಲ್ಲೆಗಳಲ್ಲಿಯೂ ತಲಾ ಒಂದೊಂದು ಕೆ.ಎಸ್. ಆರ್.ಪಿ. ಪೊಲೀಸ್ ಪಡೆಗಳು ಇವೆ. ಈ ಎಲ್ಲಾ ಬೆಟಾಲಿಯನ್ ಗಳಿಗೂ ಜನವರಿ ತಿಂಗಳ ಮಾಸಿಕ ಸಂಬಳ ಸಿಕ್ಕಿದೆ. ಆದರೆ ಹಾಸನದ 11ನೆ ಬೆಟಾಲಿಯನ್ ಕೆ.ಎಸ್.ಆರ್.ಪಿ. ಪೊಲೀಸರಿಗೆ ಮಾತ್ರ ತಮ್ಮ ಹೆಂಡತಿ ಮಕ್ಕಳ ಜೀವನ ಸಾಗಿಸಲು ಬಡ್ಡಿ ದುಡ್ಡಿಗೆ ಸಾಲ ಮಾಡಬೇಕಾದ ದುಸ್ಥಿತಿ ಉಂಟಾಗಿದೆ! ಸಾಮಾನ್ಯವಾಗಿ ಕೆ.ಎಸ್. ಆರ್.ಪಿ. ಪೊಲೀಸರಾಗಿ ಕೆಲಸ ಮಾಡುವ ಎಲ್ಲರೂ ಬಡಕುಟುಂಬದಿಂದ ಬಂದವರೆ. ಸಿವಿಲ್ ಪೊಲೀಸ್ ಠಾಣೆಗಳಲ್ಲಿ, ಟ್ರಾಫಿಕ್ ಪೊಲೀಸ್ ಇಲಾಖೆಯಲ್ಲಿ ಇರುವಂತೆ ಇವರ ಬದುಕು ನಡೆಯುವುದಿಲ್ಲ. ಇವರು ತಿಂಗಳ ಸಂಬಳವನ್ನು ನೆಚ್ಚಿಕೊಂಡ ನತದ್ರಷ್ಠರು! ರಜೆಯಿಲ್ಲದೆ, ಹಬ್ಬಗಳಿಗೂ ಮನೆಗೆ ಹೋಗಲಾರದೇ ಒದ್ದಾಡುವ ಇವರು ಯಾರು ಸತ್ತರೂ, ಮದುವೆ–ಮುಂಜಿಗೂ ರಜೆ ಕೇಳಲು ಹಿರಿಯ ಪೊಲೀಸ್ ಅಧಿಕಾರಿಗಳ ಬಳಿ ಅಂಗಲಾಚಬೇಕು. ಮನೆಯವರ ಜೊತೆ ಲೈಫ್ ಕಳೆಯಲಾರದೆ ತಮ್ಮ ಜೀವನವನ್ನು ಸರ್ಕಾರದ ಸೇವೆಗಾಗಿಯೇ ಮುಡುಪಾಗಿಟ್ಟಿರುವ ಈ ಕೆ.ಎಸ್.ಆರ್.ಪಿ. ಪೊಲೀಸರನ್ನು ಗಲಬೆಗಳಾದಾಗ, ಸಮಾವೇಶ ಗಳಾದಾಗ, ಪ್ರಧಾನಿಗಳು ರಾಜ್ಯಕ್ಕೆ ಭೇಟಿನೀಡಿದಾಗ, ಹೋರಾಟಗಳನ್ನು ನಿಯಂತ್ರಣಕ್ಕೆ



ತರಲು, ಇನ್ನೂ ಮುಂತಾದ ತುರ್ತು ಸಂದರ್ಭಗಳಲ್ಲಿ ಬಳಸಿಕೊಳ್ಳುವುದರೊಂದಿಗೆ ದಿನ ನಿತ್ಯದ ಇಲಾಖೆಯ ಕಾವಲಿನಲ್ಲಿಯು ಕೆಲಸಕ್ಕೆ ನೇಮಿಸುತ್ತಾರಂತೆ. ರಾತ್ರಿ ಹಗಲೆನ್ನದೆ ನಿದ್ದೆಗೆಟ್ಟು ಕೆಲಸ ಮಾಡುತ್ತಾ ಇರುವ ಈ ನಮ್ಮ ಹಾಸನದ ಕೆ.ಎಸ್. ಆರ್.ಪಿ 11ನೇ ಬೆಟಾಲಿಯನ್ ಪೊಲೀಸರಿಗೆ ಪ್ರತಿ ವರ್ಷ ಸರ್ಕಾರದಿಂದ ನೀಡುವ ವರ್ಷದ ಕೊನೆಯಲ್ಲಿ ಕೊಡುವ ಬೋನಸ್ ಕೊಟ್ಟಿಲ್ಲ. ಅದನ್ನು ಕೊಡದಿದ್ದರೂ ಪರವಾಗಿಲ್ಲ ಈಗ ಜನವರಿ 1ರಿಂದ 30ರವರೆಗಿನ ಮಾಸಿಕ ವೇತವವನ್ನು ನೀಡಿಲ್ಲವೆಂದರೇ ಏನು ಹೇಳುವುದು ನಮ್ಮ ಘನ ಸರ್ಕಾರದ ಗ್ರಹ ಇಲಾಖೆಗೆ. ಅದೂ ಫೆಬ್ರವರಿ ತಿಂಗಳೂ ಕೊನೆಯಾಗುತ್ತಿದೆ. ಪಾಪ ಹಿರಿಯ ಪೊಲೀಸ್ ಅಧಿಕಾರಿಗಳ ಬಳಿ ಸಾಲ ಪಡೆದುಕೊಂಡು ತಮ್ಮ ಹೆಂಡತಿ ಮಕ್ಕಳ ಊಟಕ್ಕೆ ಹಣ ಕಳುಹಿಸುತ್ತಿರುವ ಕೆ.ಎಸ್.ಆರ್.ಪಿ.ಪೊಲೀಸ್ ಸಿಬ್ಬಂದಿವರ್ಗ ಸಂಬಂಧಪಟ್ಟ (ಜಿ.ಹೆಚ್.ಓ) ವರನ್ನು ಕೇಳಿದರೇ, "ಗ್ರಾಂಟ್ ಇಲ್ಲ!" ಎಂಬ ಉತ್ತರ ಬರುತ್ತಿದೆಯಂತೆ! ನಮ್ಮ ಕರ್ನಾಟಕದ ಗ್ರಹ ಮಂತ್ರಿಯಾಗಿರುವ ಮಾನ್ಯ ಅರಗ ಜ್ಞಾನೇಂದ್ರರವರು ಸ್ವಲ್ಪ ಇತ್ತ ಗಮನಹರಿಸಬೇಕಿದೆ. ತಾವು ಕೆ.ಎಸ್. ಆರ್.ಪಿ.ಯ ಎಡಿಜಿಪಿ ಯಾಗಿ ನೇಮಕವಾದ ಕ್ಷಣದಿಂದಲೂ ಅವರ ಬೆಂಬಲವಾಗಿ ನಿಂತಿರುವ ಕೆ.ಎಸ್.ಆರ್.ಪಿ.ಯ ದಕ್ಷ ಅಧಿಕಾರಿ ಎನಿಸಿಕೊಂಡಿರುವ ಮಾನ್ಯ ಅಲೋಕ್ ಕುಮಾರ್ ರವರು ಈ ವೇತನದ ವಿಳಂಬಕ್ಕೆ ಕಾರಣ ಹುಡುಕಿ ಆದಷ್ಟು ಬೇಗನೆ ಕ್ರಮಕೈಗೊಳ್ಳವರೆಂಬ ನಂಬಿಕೆ ಪತ್ರಿಕೆಗಿದೆ. ಹೆಚ್ಚುವರಿ ಆದಾಯವಿಲ್ಲದ, ಯಾವುದೇ ಗಿಂಬಳವೂ ಇಲ್ಲದ ಕೇವಲ ತಿಂಗಳ ಸಂಬಳವನ್ನೇ ನಂಬಿರುವ ಬಡ ಕೆ.ಎಸ್ ಆರ್.ಪಿ ಪೊಲೀಸರ ಕುಟುಂಬದ ಗತಿಯೇನು? ಈ ರೀತಿ ಸರ್ಕಾರವೊಂದು ತನ್ನ ಸರ್ಕಾರಿ ನೌಕರರಿಗೆ ತಿಂಗಳಿಗೆ ಸರಿಯಾಗಿ ವೇತನ ಸಿಗದಿದ್ದರೂ ಅಭಿವೃದ್ಧಿಯ ಬಗ್ಗೆ ಜಂಭ ಕೊಚ್ಚಿಕೊಂಡು ಓಡಾಡುತ್ತಿದೆ! ಕೇವಲ ಹಾಸನದಲ್ಲಿರುವ ಕೆ.ಎಸ್. ಆರ್.ಪಿ.ಯ ಪೊಲೀಸರಿಗೇ ಯಾಕೇ ಸಂಬಳ ನೀಡದೆ ಸತಾಯಿಸಲಾಗುತ್ತಿದೆ? ಬೋನಸ್ ಮತ್ತು ಜನವರಿ ಮಾಸಿಕ ವೇತವವನ್ನು ಸೇರಿಸಿ ಈಗಾಗಲೇ ಚೆಕ್ ಅನ್ನು



ಟ್ರೆಸರಿಗೆ ಕಳುಹಿಸಬೇಕಾಗಿತ್ತು. ಆದರೇ ಯಾವುದೂ ಸದ್ದೇ ಇಲ್ಲ! ಕಷ್ಟಪಟ್ಟು ದುಡಿದ ದುಡ್ಡು ಕೇಳಲು ತಲೆಗಿಷ್ಟು ಲಂಚಕೊಡಬೇಕೇನೋ? ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ ಬಲ್ಲವರಾರು? ಒಟ್ಟಿನಲ್ಲಿ ನಮ್ಮ ಪೊಲೀಸರು ಮಾತ್ರ ಸಂಬಳವಿಲ್ಲದೆ ಪಂಚಾಯಿತಿಯ ಡಿ ದರ್ಜೆಯ ನೌಕರರಿಗಿಂತ ಕಡೆಯಾಗಿ ನರಳುತ್ತಿದ್ದಾರೆ! ಇದು ಪೊಲೀಸರ ನಿಜವಾದ ದುಸ್ಥಿತಿ. "ಕರ್ನಾಟಕ ರಾಜ್ಯ ಪೊಲೀಸ್ ನಮ್ಮ ಹೆಮ್ಮೆ!" ಎಂದು ನಾವು ಎದೆಯುಬ್ಬಿಸಿ ಹೇಳುತ್ತೇವೆ ನಮ್ಮ ಎಷ್ಟೋ ಪೊಲೀಸರು ತಮ್ಮ ಜೀವದ ಹಂಗು ತೊರೆದು ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡಿ ಮುಖ್ಯಮಂತ್ರಿ ಪದಕ, ರಾಷ್ಟ್ರಪತಿ ಪದಕ ಪಡೆದುಕೊಂಡಿದ್ದಾರೆ. ಹಲವರಿಗೆ ಶೌರ್ಯ ಪ್ರಶಸ್ತಿ ಪದಕಗಳೂ ಸಮಾಜಘಾತುಕ ಶಕ್ತಿಗಳ ಹುಟ್ಟಡಗಿಸಿದ್ದಕ್ಕಾಗಿಯೇ ಸಂದಿವೆ. ಎಲ್ಲರಿಗೂ ಗೊತ್ತಿರದ ಇನ್ನೊಂದು ಪ್ರಮುಖ ವಿಚಾರವೇನೆಂದರೆ ಬೇರೆ ರಾಜ್ಯದ ಪೊಲೀಸರಿಗೂ ನಮ್ಮ ರಾಜ್ಯದ ಪೊಲೀಸರಿಗೂ ವೇತನದಲ್ಲಿ ಸುಮಾರು 15 ರಿಂದ 20ಸಾವಿರದಷ್ಟು ವ್ಯತ್ಯಾಸವಿದೆ! ನಮ್ಮ ಕರ್ನಾಟಕದ ಪೊಲೀಸರಿಗೆ ಪಕ್ಕದ ರಾಜ್ಯದ ಪೊಲೀಸರಿಗಿಂತ 20 ಸಾವಿರ ರೂಪಾಯಿ ಸಂಬಳ ಕಡಿಮೆ ಬರುತ್ತಿದೆ! ವೇತನದಲ್ಲಿ ತಾರತಮ್ಯ ಹೋಗಲೇಬೇಕು ಪೊಲೀಸರಿಗೆ ಸಕಲ ಸೌಲಭ್ಯಗಳನ್ನು ಸರ್ಕಾರ ಕೊಡಲೇಬೇಕು ಎಂದು ಕರ್ನಾಟಕ ಪೊಲೀಸ್ ಮಹಾಸಂಘ ಎಂಬ ಸಂಘಟನೆ ಕಟ್ಟಿಕೊಂಡು ಹೋರಾಟ ಮಾಡುತ್ತಿರುವ ಶಶಿಧರ್ ವೇಣುಗೋಪಾಲ್ ರಂತವರು ಔರಾದ್ಕರ್ ವರದಿಯಲ್ಲಿರುವ ಅವೈಜ್ಞಾನಿಕ ವೇತನ ತಾರತಮ್ಯವನ್ನು ವಿರೋಧಿಸಿ ಧ್ವನಿ ಎತ್ತಿದ್ದಾರೆ. ಸೇವಾ ಹಿರಿತನದಲ್ಲಿ ತಾರತಮ್ಯ ಇರುವ ಔರಾದ್ಕರ್ ವರದಿಯಲ್ಲಿ ಲೋಪವಿರುವುದರಿಂದ ಪೊಲೀಸರಲ್ಲಿರುವ ಐಕ್ಯತೆ ಒಗ್ಗಟ್ಟು ಹಾಳಾಗುತ್ತಿದೆ ಎಂಬುದು ಪೊಲೀಸ್ ಮಹಾ ಸಂಘದ ಅಧ್ಯಕ್ಷರ ವಾದ. ಪೊಲೀಸರನ್ನೇ ಹೊಡೆದು ಆಳುವ ಸರ್ಕಾರಗಳ ಈ ನೀತಿಯನ್ನು ಅವರು ಖಂಡಿಸಿದ್ದಾರೆ. ಪೊಲೀಸರ ಕಷ್ಟಗಳಿಗೆ ಕಿವಿಯಾಗುವ, ಅವರ ಮೂಲಭೂತ ಹಕ್ಕು ಗಳಿಗಾಗಿ ಹೋರಾಡುವ ಪ್ರಾತಿನಿಧಿಕ ಸಂಸ್ಥೆ, ಯಾರ ಮುಂದಾಳತ್ವವು ಇಲ್ಲದ ಕಾರಣ ಪೊಲೀಸರು ಉಳಿದ ಸರ್ಕಾರಿ ನೌಕರರಿಗಿಂತ ಬಿನ್ನವಿದ್ದಾರೆ. ಪೊಲೀಸ್ ಇಲಾಖೆ ಸುಧಾರಣೆ ಆಗಲೇಬೇಕು ಎಂದಾದರೇ ಈ ಕೂಡಲೇ ಸರ್ಕಾರ 'ಪೊಲೀಸ್ ಓಂಬಡ್ಸ್ ಮನ್' ರಚನೆಮಾಡಲಿ ಎಂಬುದು ಶಶಿಧರ್ ಅವರ ಆಗ್ರಹ. ಪೊಲೀಸರ ಮೇಲೆ ಬರುತ್ತಿರುವ ಕೆಟ್ಟ ಹೆಸರು ತಡೆಯಲು ಸಮಿತಿ ರಚನೆಮಾಡಿ ಅದರಲ್ಲಿ ಪೊಲೀಸರ ಕಲ್ಯಾಣಕ್ಕಾಗಿ ಹೋರಾಡುವವರನ್ನು , ಮಾನಸಿಕ ಆರೋಗ್ಯ ಸಂಬಂಧಿ ವೈದ್ಯರನ್ನು, ನ್ಯಾಯಾಧೀಶರನ್ನು , ಮಾನವ ಹಕ್ಕುಗಳ ಆಯೋಗದ ಸದಸ್ಯ ರನ್ನು ಸೇರಿಸಿ ಪೊಲೀಸ್ ಇಲಾಖೆ ಸುಧಾರಣೆ ಮಾಡಲಿ ಎಂಬುದು ಹಲವರ ವಾದವಾಗಿದೆ. ಪೊಲೀಸರ ಬಾಡಿಗೆ ಭತ್ಯೆ ಬೆಂಗಳೂರಿನಂತಹ ನಗರಗಳಲ್ಲಿ ಯಾವ ಲೆಕ್ಕಕ್ಕೂ ಸಾಲದು. ಪೊಲೀಸರಿಗಾಗಿ ನೀಡಿರುವ ಪೊಲೀಸ್ ಕ್ವಾರ್ಟರ್ಸ್ ಗಳಂತೂ ಗೋಡೆಗಳು ಶಿಥಿಲಗೊಂಡು ಕುಸಿದು ಬೀಳುವಂತಾಗಿವೆ. ಗುಣಮಟ್ಟ ವಿಲ್ಲದ ಕಾಮಗಾರಿಗಳಿಂದ ಕಟ್ಟಿರುವ ಕ್ವಾರ್ಟರ್ಸ್ ಗಳ ನಿರ್ವಹಣೆ ಬಗ್ಗೆ ಧ್ವನಿ ಎತ್ತುವವರು ಯಾರು? ಹಿರಿಯ ಅಧಿಕಾರಿಗಳ, ರಾಜಕಾರಣಿಗಳ ಮನೆಯಲ್ಲಿ ಗುಲಾಮರಂತೆ ದುಡಿಯುತ್ತಿರುವ ಆರ್ಡರಲಿ ಪೊಲೀಸರನ್ನು ಬಾಡಿಗಾರ್ಡ್ ಗಳಲ್ಲದೆ ವೈಯಕ್ತಿಕ ಕೆಲಸಗಳಿಗೂ ಬಳಸಿಕೊಂಡು ಪೊಲೀಸ್ ಇಲಾಖೆಯ ಘನತೆ ಗೌರವವನ್ನು ಹಾಳುಮಾಡಲಾಗುತ್ತಿದೆ. ಪೊಲೀಸ್ ಎಂಬ ಸೈನಿಕ ವಿವಿಧ ಕಾರಣಗಳಿಂದಾಗಿ ರಾಜಕಾರಣಿಗಳ ಮನೆಯ, ಹಿರಿಯ ಪೊಲೀಸ್ ಅಧಿಕಾರಿಗಳ ಮನೆಯ ಮುಸುರೆ ತಿಕ್ಕುವುದು ಎಷ್ಟು ಸರಿ? ಒಟ್ಟಾರೆಯಾಗಿ ಪೊಲೀಸ್ ವ್ಯವಸ್ಥೆಯ ಇಂದಿನ ಕೆಟ್ಟ ಸ್ಥಿತಿಗೆ ರಾಜಕಾರಣಿಗಳೇ ನೇರ ಹೊಣೆ ಹೊರಬೇಕಾಗಿದೆ. ಎಲ್ಲಿಯವರೆಗೂ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯದ ವಿಷಯವಾಗಿ ರಾಜಕೀಯ ಪಕ್ಷಗಳ ಹಸ್ತಕ್ಷೇಪ ನಿಲ್ಲುವುದಿಲ್ಲವೋ ಅಲ್ಲಿಯವರೆಗೂ ಈ ಕೆಟ್ಟ ವ್ಯವಸ್ಥೆಗೆ ಪರಿಹಾರ ದೊರಕುವುದಿಲ್ಲ. ಇಷ್ಟೆಲ್ಲಾ ತೊಂದರೇ, ರಾಜಕಾರಣಿಗಳ ಬ್ಲಾಕ್ ಮೇಲ್ ತಂತ್ರದ ನಡುವೆಯೂ ಜಗ್ಗದೇ, ಕುಗ್ಗದೆ ಮೂರು ಜನರು ಮಾಡುವ ಕೆಲಸವನ್ನು ಒಬ್ಬರೇ ಮಾಡುತ್ತಾ, ತಮ್ಮೆಲ್ಲ ಮಾನಸಿಕ ಒತ್ತಡದ ಜೊತೆಗೆ ಎದೆಗುಂದದೇ ಭೂಗತ ಜಗತ್ತನ್ನು ಕಟ್ಟಿಹಾಕಲು , ಸಮಾಜಘಾತುಕ ಶಕ್ತಿಗಳನ್ನು ಮಟ್ಟಹಾಕಲು ಹಗಲಿರುಳು ಶ್ರಮಿಸುತ್ತಿರುವ ಸಾವಿರಾರು ಪ್ರಾಮಾಣಿಕ ಪೊಲೀಸರ ಕಷ್ಟದ ಜೊತೆಗೆ ಧ್ವನಿಯಾಗಿ ನಮ್ಮ ಪತ್ರಿಕೆ ಎಂದಿಗೂ ನಿಂತಿರುತ್ತದೆ.

# ಪ್ರಾದೇಶಿಕ ಸಮಸ್ಯೆಗಿಂತ ರಾಜಕಾರಣವೇ ಮುಖ್ಯ



● ತುರುವನೂರು ಮಂಜುನಾಥ

**ಜೆ**ಡಿಎಸ್ ಪಕ್ಷದಲ್ಲಿ ಈಗ ದಿನಕ್ಕೊಂದು ನಿರ್ಧಾರಗಳು ಹೊರಬೀಳುತ್ತಿವೆ. ತಮ್ಮದೇ ಕುಟುಂಬದಲ್ಲಿ ಸ್ಪರ್ಧೆ ವಿಚಾರದಲ್ಲೂ ಕೂಡ ಆಂತರಿಕ ಭಿನ್ನಾಭಿಪ್ರಾಯಗಳು ಬುಗಿಲೆದ್ದಿವೆ ಹೀಗಿರುವಾಗ ಜನರ ಸಮಸ್ಯೆಗಳು ಮತ್ತು ಕುಟುಂಬ ಹೊರತಾಗಿ ಸ್ಪರ್ಧೆ ಮಾಡುವವರ ಬಗ್ಗೆ ಆಸಕ್ತಿ ಇನ್ನೆಲ್ಲಿ? ಇಂತ ಸಂದರ್ಭದಲ್ಲಿಯೇ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಕನ್ನಡಿಗರ ಮಾಹಾ ಮೈತ್ರಿಕೂಟ ರಚನೆ ಕುರಿತಂತೆ ಮಾತನಾಡಿದ್ದಾರೆ. ಅಂದರೆ ಕನ್ನಡ ಸಂಘಟನೆಗಳು, ರೈತ ಹೋರಾಟಗಾರರು, ನೀರಾವರಿ ಹೋರಾಟಗಾರರು ಹೀಗೆ ಹೋರಾಟಗಾರರ ಕಟ್ಟಿಕೊಂಡು ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಬಲಿಷ್ಠಗೊಳಿಸಬೇಕು ಎನ್ನುವ ದಾವಂತ ಹೆಚ್ಚಾಗಿದೆ.



ಹೌದು ಎಚ್.ಡಿ.ಕುಮಾರಸ್ವಾಮಿ ಈಗ ಪಕ್ಷ ಬಲವರ್ದನೆಗೆ ಹಲವಾರು ತಂತ್ರಗಳನ್ನು ರೂಪಿಸುವಲ್ಲಿ ನಿರತರಾಗಿದ್ದಾರೆ. ಅದರೆ ಪಕ್ಷ ಬಲಿಷ್ಠಗೊಳ್ಳಿದೆಯೇ ಎನ್ನುವ ಪ್ರಶ್ನೆ ಬಹುಶಃ ಅವರಿಗೂ ಮೂಲ ಪ್ರಶ್ನೆಯಾಗಿ ಕಾಡಬಹುದು. ಯಾಕೆಂದರೆ ಪಕ್ಷ ನಿಷ್ಠ ಹಲವಾರು ಮಂದಿ ಈಗ ಜೆಡಿಎಸ್ ಪಕ್ಷವನ್ನು ಬಿಟ್ಟು ಅನ್ಯಪಕ್ಷಗಳತ್ತ ಮುಖ ಮಾಡುತ್ತಿದ್ದಾರೆ ಹೀಗಿರುವಾಗ ಪಕ್ಷ ಬಲಿಷ್ಠತೆ ಹೇಗೆ ಸಾಧ್ಯ? ಎನ್ನುವ ಮೂಲ ಪ್ರಶ್ನೆಗೆ ಉತ್ತರ ಹುಡುಕಿರುವುದೇ ಕನ್ನಡ ಸಂಘಟನೆಗಳೂ, ನೀರಾರಾವರಿ ಹೋರಾಟಗಾರರು,ರೈತ ಹೋರಾಟಗಾರರ ಮನವೊಲಿಸುವ ಮೂಲಕ ಜೆಡಿಎಸ್ ಜೊತೆ ಕೈ ಜೋಡಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಆ ಮೂಲಕ ಜೆಡಿಎಸ್ ಕೊನೆ ಪಕ್ಷ ಮತ್ತೇ ಕಿಂಗ್ ಮೇಕರ್ ಆಗಬೇಕು ಎನ್ನುವುದೇ ಅವರ ಅಭಿಲಾಷೆ ಹೀಗಾಗಿಯೇ ಈ ಹೋರಾಟಗಾರರ ಜೊತೆ ಗೂಡಿ ಪಕ್ಷ ಒಂದಿಷ್ಟು ಸ್ಥಾನಗಳಿಸುವ ತಂತ್ರಗಾರಿಕೆಗೆ ಕುಮಾರಸ್ವಾಮಿ ಮೊರೆ ಹೋಗಿದ್ದಾರೆ.

ಹೌದು ಇತ್ತೀಚೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಕೂಡ ದೆಹಲಿಯಲ್ಲಿ ಜೆಡಿಎಸ್ ಪಕ್ಷವನ್ನು ಬಿಟ್ಟು ಯಾರು ಅಧಿಕಾರ ನಡೆಸಲು ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ ಅದು ನಿಜವೂ ಆಗಬಹುದು ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿದರೆ ಜೆಡಿಎಸ್ ಮತ್ತೇ ಕಿಂಗ್ ಮೇಕರ್ ಎನ್ನುವುದರಲ್ಲಿ ಅನುಮಾನವೆ ಇಲ್ಲ . ಈ ಕಿಂಗ್ ಮೇಕರ್ ಆಗಲು ಏನೇನು ಬೇಕು ಅದಕ್ಕೆಲ್ಲಾ ಕುಮಾರಸ್ವಾಮಿ ತಯಾರಿ ನಡೆಸುತ್ತಿದ್ದಾರೆ.

ಈಗಾಗಲೇ ಹಲವಾರು ಜೆಡಿಎಸ್ ನಾಯಕರು ಪಕ್ಷ ತೊರೆಯುತ್ತಿದ್ದಾರೆ ಇಂತ ಹೊತ್ತಿನಲ್ಲಿ ಪಕ್ಷ ಬಲಿಷ್ಠವಾಗುವುದು ಹೇಗೆ? ಎನ್ನುವುದು ಅವರಿಗೂ ಗೊತ್ತಿರುವ ವಿಷಯವೇ ಹಾಗಾಗಿಯೇ ಈಗ ಕನ್ನಡ ಚಳವಳಿಗಾರರು. ಮತ್ತಿತರ ಹೋರಾಟಗಾರರನ್ನು ಕಟ್ಟಿಕೊಂಡು ಪ್ರಾದೇಶಿ ವಿಷಯಗಳನ್ನಿಟ್ಟುಕೊಂಡು ಚುನಾವಣೆಗೆ ಹೋದರೆ ಕೊನೆ ಪಕ್ಷ 20–25 ಸ್ಥಾನಗಳನ್ನಾದರೂ ಗಳಿಸಬಹುದು ಎನ್ನುವುದು ಅವರ ಲೆಕ್ಕಾಚಾರ. ಈ ಲೆಕ್ಕಾಚಾರದ ಪ್ರಕಾರವಾಗಿಯೇ ಚುನಾವಣೆಗೆ ಸಜ್ಜಾಗುತ್ತಿದ್ದಾರೆ.

ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಕನ್ನಡಿಗರನ್ನು ದ್ವಿತೀಯ ದರ್ಜೆ ಪ್ರಜೆಗಳಂತೆ ನೋಡುತ್ತಿರುವುದಕ್ಕೆ ಸಡ್ಡು ಹೊಡೆಯಲು ನಿರ್ಧರಿಸಿರುವ ಅವರು, ನಾಡು, ನುಡಿ, ನೆಲ, ಜಲ ಸೇರಿದಂತೆ ಕರ್ನಾಟಕ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಕನ್ನಡಿಗರ ಪ್ರಾದೇಶಿಕ ಸರಕಾರ ತರುವ ನಿಟ್ಟಿನಲ್ಲಿ ಕುಮಾರಸ್ವಾಮಿ ಅವರು ವರ್ಷಕ್ಕೆ ಮುನ್ನವೇ ಹೊಸ ಹೆಜ್ಜೆ ಇರಿಸಿದ್ದಾರೆ.

ಇದೇ ವೇಳೆ ಈಗಾಗಲೇ ಕನ್ನಡ ಪರ ಸಂಘಟನೆಗಳ ಜೊತೆ ಸಭೆಗಳನ್ನು ಮಾಡಿದ್ದಾರೆ ಹಲವಾರು ನೀರಾವರಿ ಹೋರಾಟಗಾರರನ್ನು ಸಭೆಗೆ ಅಹ್ವಾನಿಸಿದ್ದಾರೆ ಚರ್ಚೆಗಳು ನಡೆಯುತ್ತಲೇ ಇವೆ ಈ ಎಲ್ಲಾ ಸಂಘಟನೆಗಳನ್ನು ಕಟ್ಟಿಕೊಂಡು ಕನ್ನಡಿಗರ ಮಹಾ ಮೈತ್ರಿಕೂಟ ವನ್ನು ರಚಿಸಿ ಚುನಾವಣೆಗೆ ಹೋಗುವುದು ಅವರ ಚಿಂತನೆಯಾಗಿದೆ.




### ಸಂಘಟನೆಗಳು ನಿವಾಗಿ ಸಾಥ್ ನೀಡಲಿವೆಯೇ?

ಆದರೆ ಮೂಲ ಪ್ರಶ್ನೆ ಇರುವುದು ಈ ಕನ್ನಡ ಸಂಘಟನೆಗಳನ್ನು ಕಟ್ಟಿಕೊಂಡು ಹೇಗೆ ನಿಬಾಯಿಸುತ್ತಾರೆ ಎನ್ನುವುದು ಕೂಡ ಇಲ್ಲಿ ಪ್ರಮುಖವಾಗುತ್ತದೆ ವಾಟಾಳ್ ನಾಗರಾಜ್ ಈಗಾಗಲೇ ಕನ್ನಡ ಪರ ಸಂಘಟನೆಗನ್ನು ಕಟ್ಟಿಕೊಂಡು ನಡೆಸುತ್ತಿರುವ ಹೋರಾಟ ಒಂದು ರೀತಿ ಆಟಕುಂಟು ಲೆಕ್ಕಿಕ್ಕಲ್ಲ ಎನ್ನುವ ಪರಿಸ್ಥಿತಿ ತಲುಪಿದೆ ಹೀಗಿರುವಾಗ ಈ ಹೋರಾಟಗಾರರಿಂದ ಜೆಡಿಎಸ್ ಹೇಗೆ ಬಲಿಷ್ಠವಾಗಲಿದೆ ಎನ್ನುವುದು ಕೂಡ ಇಲ್ಲಿ ಪ್ರಮುಖವಗುತ್ತದೆ.ಇನ್ನೂ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣ ಗೌಡ ಒಂದಿಷ್ಟು ಬಲಿಷ್ಠವಾದರೂ ಚುನಾವಣೆಯಲ್ಲಿ ಮತಗಳಿಸುವಷ್ಟು ರಾಷ್ಟ್ರೀಯ ಪಕ್ಷಗಳ ಮತಗಳನ್ನು ಸೆಳೆಯುವಷ್ಟು ಬಲಿಷ್ಠವಾಗಿಲ್ಲ .ಇನ್ನೂ ಉತ್ತರ ಕರ್ನಾಟಕದ ನೀರಾವರಿ ಹೋರಾಟ ಸಮಿತಿಗಳು ಹೇಗೆ ಜೆಡಿಎಸ್‌ಗೆ ಬೆಂಬಲ ನೀಡುತ್ತವೆ ಎನ್ನುವುದು ಕೂಡ ಮುಖ್ಯವಾಗುತ್ತದೆ ಅಲ್ಲದೆ ರೈತ ಸಂಘಟನೆಗಳು ಎಷ್ಟರ ಮಟ್ಟಿಗೆ ಇವರಿಗೆ ಸಾಥ್ ನೀಡುತ್ತವೆ ಎನ್ನುವುದು ಕೂಡ ಪ್ರಮುಖವಾಗುತ್ತದೆ. ಕೋಡಿಹಳ್ಳೀ ಚಂದ್ರಶೇಖರ್ ಜೆಡಿಎಸ್ ಪಕ್ಷಕ್ಕೆ ಸಾಥ್ ನೀಡಿದರೂ ಕೂಡ ಅದು ಮೈಸೂರು ಭಾಗದಲ್ಲಿ ಮಾತ್ರ ಸಾಧ್ಯವಾಗಬಹುದೇನೋ ಆದರೆ ಅದು ಉತ್ತರ ಕರ್ನಾಟಕ ಭಾಗ ಮಧ್ಯ ಕರ್ನಾಕದಲ್ಲಿ ಜೆಡಿಎಸ್ ಮತಗಳಿಕೆಗೆ ಹಿನ್ನಡೆಯಾಗಬಹುದು . ಈ ಎಲ್ಲಾ ಸಂಘಟನೆಗಳನ್ನು ಕಟ್ಟಿಕೊಂಡು ಅವರ ಉಪಟಳವನ್ನು ತಾಳಲಾರದೆ ಕೊನೆಗೆ ಕುಮಾರಸ್ವಾಮಿಯೇ ಅವರ ಸಹವಾಸವೆ ಸಾಕು ಎನ್ನುವ ಮಟ್ಟಿಗೆ ಅಗಲೂ ಬಹುದು ಯಾಕೆಂದರೆ ಅವೆಲ್ಲವನ್ನೂ ರಾಜಕೀಯ ಪಕ್ಷದಡಿಯಲ್ಲಿ ತರುವುವುದು ಅಷ್ಟು ಸುಲಭವಲ್ಲ ಒಬ್ಬೊಬ್ಬರದ್ದು ಒನ್ನೊಂದು ವಿಭಿನ್ನ ಅಭಿಪ್ರಾಯಗಳನ್ನು ತಾಳುವ ನಾಯಕರು ಅವರು ಅಂತವರ ಜೊತೆ ಹೇಗೆ ಮುನ್ನಡೆಯುತ್ತಾರೆ ಎನ್ನುವುದು ಬಹು ಮುಖ್ಯವಾಗುತ್ತದೆ.

ಪ್ರಾದೇಶಿಕ ಪಕ್ಷಗಳಿಂದ ರಾಜ್ಯದ ಅಭಿವೃದ್ಧಿಗೆ ಪ್ರಾದೇಶಿಕ ಸಮಸ್ಯೆಗಳ ನಿವಾರಣೆಗೆ ಅನುಕೂಲವಾಗುತ್ತದೆ ಎನ್ನುವುದು ನಿಜ ಆದರೆ ಈ ಸಂಘಟನೆಗಳ ಪಾತ್ರ ಮತ್ತು ಭಾಗವಹಿಸುವಿಕೆ ಇದೆಯಲ್ಲ ಅದು ಬಹಳ ಮುಖ್ಯವಗುತ್ತದೆ. ಅದೇ ಚಂದ್ರಶೇಖರ್ ಪಾಟೀಲ್(ಚಂಪಾ) ಅವರು ಇದ್ದಾಗ ಪ್ರಾದೇಶಿಕಪಕ್ಷಗಳ ಕರ್ತವ್ಯ ಮತ್ತು ಅದರ ಅನಿವಾರ್ಯತೆಯನ್ನು ಸಾಕಷ್ಟು ಬಾರಿ ಒತ್ತಿ ಹೇಳಿದ್ದರು ಪ್ರಾದೇಸಿಕ ಪಕ್ಷಗಳಿಂದ ರಾಜ್ಯದ ಸಮಸ್ಯೆಗಳು ಸಾಧ್ಯ ಎನ್ನುವುದನ್ನು ತಿಳಿಸಿದ್ದರು, ಹೀಗಾಗಿಯೇ ಅವರು ಪ್ರಾದೇಶಿಕ ಪಕ್ಷಗಳ ಜೊತೆ ಗುರುತಿಸಿಕೊಳ್ಳಲು ಸಾಕಷ್ಟು ಕೆಲಸಗಳನ್ನು ಮಾಡಿದ್ದರು ಅಲ್ಲದೆ ಬಿ.ಎಸ್.ಯಡಿಯೂರಪ್ಪ ಬಿಜೆಪಿ ಬಿಟ್ಟು ಕೆಜೆಪಿ ಪಕ್ಷವನ್ನು ಕಟ್ಟಿದಾಗ ಚಂಪಾ ಅವರು ಕೂಡ ಆ ಪಕ್ಷಕ್ಕೆ ಸೇರಿದ್ದರು ಕಾರಣ ಅದೊಂದು ಪ್ರಾದೇಶಿಕ ಪಕ್ಷ ಎನ್ನುವ ಕಾರಣಕ್ಕೆ ಆದರೆ ಆ ಪಕ್ಷವೇ ಬಿಜೆಪಿಯಲ್ಲಿ ಮರ್ಜಿಯಾದಾಗ ಕಂಗಾಲಾಗಿ ಹೊರಬಂದಿದ್ದು ಉಂಟು.

ಆದರೆ ಈಗ ಪ್ರಾದೇಶಿ ಪಕ್ಷದ ಅಗತ್ಯ ಮತ್ತು ಇಲ್ಲಿನ ಸಮಸ್ಯೆಗಳನ್ನು ಇಟ್ಟುಕೊಂಡು ಹೋರಾಟ ನಡೆಸುವವರ ಸಂಖ್ಯೆ ಸದ್ಯದಲ್ಲಿಇಲ್ಲ ಇದ್ದರೂ ಅದು ಅಷ್ಟು ಸುಲಭವ ಮಾತಲ್ಲ. ವಾಟಾಳ್ ಜೆಡಿಎಸ್ ಪಕ್ಷದ ಜೊತೆ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆಯೇ ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ.

ಪ್ರಾದೇಶಿಕ ಪಕ್ಷ ರಾಜ್ಯದ ಸಮಸ್ಯೆಗಳ ಸ್ಪಂದನೆಯ ಮೂಲ ಸೆಲೆಯಾಗುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ ಆದರೆ ಕನ್ನಡ ಸಂಘಟನೆಗಳು ಗಟ್ಟಿಯಾಗಿ ಮುನ್ನಗ್ಗಬೇಕು ವಿಷಯಗಳು ಕೂಡ ಅಷ್ಟೆ ಸಮರ್ಥನೀಯವಾಗಿರಬೇಕು. ಡಾ. ಚಿದಾನಂದ ಮೂರ್ತಿ ಅವರಂತೆ ಗಟ್ಟಿ ಹೋರಾಟಗಾರರಗಬೇಕು ಆದರೆ ಅಂತ ಗಟ್ಟಿ ದ್ವನಿ ಗೂಡಿಸುವವರ ಸಂಖ್ಯೆ ಈಗ ಸದ್ಯಕ್ಕೆಇಲ್ಲ ಎನ್ನುವುದು ಇಲ್ಲಿನ ಮೂಲ ಪ್ರಶ್ನೆ.



### ಕುಟುಂಬದ ಸಮಸ್ಯೆಗಳೇ ಜಟಿಲ

ಇಷ್ಟೆಲ್ಲಾ ಸಂಘಟನೆಗಳ ಜೊತೆ ಹೋಗಲು ಸಿದ್ದತೆ ನಡೆಸುತ್ತಿರುವ ಜೆಡಿಎಸ್ ಪಕ್ಷದ ಮುಖಂಡರು ತಮ್ಮ ಕುಟುಂಬದಲ್ಲಿಯೇ ಹಲವು ಸಮಸ್ಯೆಗಳು ಈಗ ಎದುರಾಗಿವೆ. ತಮ್ಮ ಕುಟುಂಬದಲ್ಲಿ ಭವಾನಿ ರೇವಣ್ಣ ಅವರು ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಎಲ್ಲಾ ರೀತಿಯ ತಯಾರಿಯೂ ನಡೆಯುತ್ತಿವೆ ಹಾಸನ ಅಥವಾ ಹೊಳೆನರಸಿಪುರ ಕ್ಷೇತ್ರದಲ್ಲಿ ಸ್ಪರ್ಧಿಸಲುಈಗಾಗಲೆ ರೇವಣ್ಣ ಕುದ್ದಾಗಿ ಮುಂದೆ ನಿಂತಿದ್ದಾರೆ . ಹಾಗೆಯೇ ಶತಾಯ ಗತಾಯ ಈ ಬಾರಿ ನಿಖಿಲ್ ಕುಮಾರಸಾಮಿಯನ್ನು ರಾಮನಗರ ಕ್ಷೇತ್ರಕ್ಕೆ ಸ್ಪರ್ಧಿಸುವ ತಯಾರಿಯೂ ನಡೆಯುತ್ತಿವೆ ಆದರೆ ಕುಮಾರಸ್ವಮಿ ತಮ್ಮ ಪತ್ನಿ ಈ ಬಾತಿ ಸ್ಪರ್ಧಿಸುವುದಿಲ್ಲ ಎಂದಿದ್ದಾರೆ ಆದರೆ ಕೊನೆ ಕ್ಷಣದವರೆಗೂ ಅದು ನಿಜವಗುವುದಿಲ್ಲ ಕೊನೆಯಲ್ಲಿ ಅವರು ಯಾವುದಾದರೂ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುವ ಲಕ್ಷಣಗಳು ಗೊಚರಿಸುತ್ತಿವೆ.

ಹೀಗೆ ತಮ್ಮ ಕುಟುಂಬದ ಕುಡಿಗಳಿಗೆ ಗಟ್ಟಿಯಾದ ಕ್ಷೇತ್ರಗಳನ್ನು ಹುಡುಕುತ್ತಿರುವ ವರು ಭವಾನಿ ಸ್ಪರ್ಧೆಗೆ ಒಳಗೊಳಗೆ ವಿರೋಧ ಇದೆ ಆದರೆ ರೇವಣ್ಣ ಈಗಾಗಲೇ ಕಣಕ್ಕಿಳಿದಿದ್ದಾರೆ ಏನೇ ಆಗಲಿ ಭವಾನಿಯನ್ನು ಕಣಕ್ಕಿಳೀಸಲೇಬೇಕು ಎಂದು ಇದಕ್ಕೆ ಕುಮಾರಸ್ವಾಮಿ ವಿರೋಧವೂ ಇದೆ. ಆದರೆ ರೇವಣ್ಣ ಯಾರ ಮಾತು ಕೇಳುವ ಆಸಾಮಿ ಅಲ್ಲ ಏನೇ ಜಗಳವಾದರೂ ಕೊನೆಗೆ ಭವಾನಿಯನ್ನು ಕಣಕ್ಕಿಳಸಲೇ ಇದ್ದಾರೆ ಈ ವಿಷಯದಲ್ಲಿ ಗೌಡರ ಕುಟುಂದಲ್ಲಿ ಮುಸುಕಿನ ಗುದ್ದಾನ ನಡೆಯುತ್ತಲೇ ಇದೆ ಹೀಗಿರುವಾಗ ಇನ್ನೂ ಹೊರಗಿನಿಂದ ಬಂದ ಅಭ್ಯರ್ಥಿಗಳಿಗೆ ಎಲ್ಲಿಯ ಸ್ಥನ ನೀಡಲು ಸಾದ್ಯ ಎನ್ನುವುದೇ ಪ್ರಶ್ನೆ.



ಈ ಎಲ್ಲಾ ಸಮಸ್ಯೆಗಳ ಮಧ್ಯೆ ಕುಮಾರಸ್ವಾಮಿ ತಮ್ಮ ಕ್ಷೇತ್ರದ ಆಯ್ಕೆ ಬಗ್ಗೆ ಯೋಚಿಸುತ್ತಿದ್ದಾರೆ ಯಾಕೆಂದರೆ ರಾಮನಗರ ಕ್ಷೇತ್ರವನ್ನು ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿಗೆ ಬಿಟ್ಟುಕೊಡಲು ನಿರ್ಧರಿಸಿದ್ದಾರೆ ಹೀಗಾಗಿಯೇ ಈಗಾಗಲೇ ನಿಖೀಲ್ ಅಕ್ಷೇತ್ರದಲ್ಲಿ ಓಡಾಟ ಆರಂಭಿಸಿದ್ದಾರೆ. ಈಗ ಕುಮಾರಸ್ವಾಮಿ ಚನ್ನಪಟ್ಟಣವೋ ಅಥವಾ ಚಾಮುಂಡಿ ಕ್ಷೇತ್ರವೋ ಎನ್ನುವ ತಾಕಲಾಟದಲ್ಲಿದ್ದಾರೆ ಇನ್ನೂ ಕೊನೆ ಘಳಿಗೆಯಲ್ಲಿ ಪತ್ನಿಗೂ ಅವಕಾಶ ನೀಡಬೇಕು ಹೀಗಾಗಿ ಈಗ ಕ್ಷೆತ್ರದ ಹುಡುಕಾಟದಲ್ಲಿ ಕುಮಾರಸ್ವಾಮಿ ಇದ್ದಾರೆ.

### ಅಭ್ಯರ್ಥಿಗಳ ಪಟ್ಟಿಗೆಒಲವು

ಹೀಗೆ ಹಲವು ಲೆಕ್ಕಾಚಾರ, ಹಲವು ತಂತ್ರದೊಂದಿಗೆ ಜೆಡಿಎಸ್ ಪಕ್ಷವನ್ನು ಸಿದ್ಧಗೊಳಿಸುತ್ತಿರುವ ಮಾಜಿ ಸಿಎಂ ಎಚ್. ಡಿ. ಕುಮಾರಸ್ವಾಮಿ ಶೀಘ್ರವೇ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಲು ತೀರ್ಮಾನಿಸಿರುವುದು ರಾಜಕೀಯ ವಲಯದಲ್ಲಿ ತೀವ್ರಕುತೂಹಲ ಕೆರಳಿಸಿದೆ ಇನ್ನು ಕೆಲವು ನಾಯಕರು ಪಕ್ಷ ತೊರೆಯುವ ನಿರ್ಧಾರಕ್ಕೆ ಬಂದಿದ್ದಾರೆ ಮತ್ತೆ ಕೆಲವರು ಮೌನಕ್ಕೆ ಶರಣಾಗಿದ್ದಾರೆ. ಹೀಗಿದ್ದರೂ ಎಚ್. ಡಿ. ಕುಮಾರಸ್ವಾಮಿ ಪಕ್ಷವನ್ನು ಸಂಘಟಿಸಿ 2023ರ ಚುನಾವಣೆಯಲ್ಲಿ ರಾಜ್ಯದಲ್ಲಿ ಆಡಳಿತ ನಡೆಸುವ ಬರುವ ಪಣತೊಟ್ಟಿದ್ದಾರೆ.

ಆದರೆ ಎಚ್‌ಡಿಕೆ ಇದುವರೆಗೆ ಹಾಸನದ ರಾಜಕೀಯದಲ್ಲಿ ಮೂಗು ತೂರಿಸಿದ್ದು ಕಡಿಮೆಯೇ. ಆ ಕ್ಷೇತ್ರದಲ್ಲಿ ಕಾಣಿಸಿಕೊಂಡಿದ್ದು ಕೂಡ ಕಡಿಮೆಯೇ. ಅಲ್ಲಿ ಆಗೊಮ್ಮೆ ಈಗೊಮ್ಮೆ ದೇವೇಗೌಡರು ರಾಜಕೀಯವಾಗಿ ಮಾತನಾಡುತ್ತಾರೆ. ಉಳಿದಂತೆ ಏನೇ ಮಾತನಾಡುವುದು, ರಾಜಕೀಯ ಮಾಡುವುದು ಇದ್ದರೆ ಮಾಜಿ ಸಚಿವ ಎಚ್. ಡಿ. ರೇವಣ್ಣ ಮಾತ್ರ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ.

### ನಾಯಕರು ಹೊರಗೆ

ಇಂತ ವಿಚಾರಗಳನ್ನಿಟ್ಟುಕೊಂಡಿರುವುದೇ ಜೆಡಿಎಸ್ ಪಕ್ಷದ ಮುಖಂಡರು ಒಬ್ಬೊಬ್ಬರಾಗಿ ಹೊರನಡೆಯುತ್ತಿರುವ ಕಾರಣ. ಪಕ್ಷದ ನಿಷ್ಠಾವಂತ ಎನಿಸಿಕೊಂಡಿದ್ದ ವೈಎಸ್‌ವಿ ದತ್ತ ಈಗಾಗಲೇಜೆಡಿಎಸ್‌ನಿಂದ ಒಂದು ಕಾಲನ್ನು ಹೊರಗಿಟ್ಟಿದ್ದಾರೆ. ರಾಮಸ್ವಾಮಿ ಈಗಾಗಲೆ ಪಕ್ಷ ಬಿಡುವುದಾಗಿ ಹೇಳಿದ್ದಾರೆ. ತುಮಕೂರಿನಲ್ಲಿ ಶ್ರೀನಿವಾಸ್ ಅಗಲೇ ಪಕ್ಷ ತೊರೆಯುವುದಾಗಿ ಹೇಳಿದ್ದಾರೆ ಹೀಗೇ ಹಲವಾರು ನಾಯಕರು ಹೊರ ನಡೆಯುತ್ತಿದ್ದರೆ ಹೀಗಿರುವಾಗ ಎಲ್ಲಿಯಾದರೂ ಪಕ್ಷ ಬಲಿಷ್ಠಗೊಳ್ಳಲು ಸಾಧ್ಯವೇ ಗೌಡರ ಲೆಕ್ಕಾಚಾರ ಏನಿಸದ್ದರು ಕಿಂಗ್ ಮೇಕರ್ ಆಗಲು ಎಷ್ಟು ಸ್ಥಾನ ಬೇಕೋ ಅಷ್ಟಕ್ಕೆ ಸೀಮಿತ. ಪ್ರಾದೇಶಿಕ ಸಮಸ್ಯೆ,ಕನ್ನಡದ ಆಸ್ಮಿತೆ ಎನ್ನುವುದೆಲ್ಲವೂ ಡಂಬಾಚಾರ ಕೇವಲ ರಾಜಕಾರಣಕ್ಕೆ ಮಾತ್ರ ಈ ವಿಷಯಗಳನ್ನು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

# ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಶೋಧನೆಗಳು..

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಸಮಗ್ರ ಚರಿತ್ರೆ, ಮೂಲ ಚರಿತ್ರೆ ಎಂದು ಕರೆಸಿಕೊಳ್ಳುವ ಸರಳ ರೇಖಾತ್ಮಕ ಬರಹಗಳು ಪ್ರಭುತ್ವಗಳ ಪರವಾದ ಒಲವನ್ನ ಅಧಿಕಾರ ಕೇಂದ್ರಿತ ದಾರಿಯನ್ನ ಇಲ್ಲವೇ ಉನ್ನತ ವರ್ಗ ಪ್ರಣೀತವಾದ ರೂಹಾಗಿರುವುದನ್ನ ಈಗಿನ ತಳವರ್ಗದ ಜನ ಚರಿತ್ರೆಗಳು ಛಿದ್ರಿಸಿ ತೋರಿಸಿಕೊಡುತ್ತಿವೆ.

ಸಾಹಿತ್ಯ ಚರಿತ್ರೆಯಲ್ಲೂ ಕೂಡ ದುಡಿವ ಜನರ ಜಗತ್ತು ಅಲಕ್ಷಿತವಾಗಿ ಅವರ ಅಭಿವ್ಯಕ್ತಿ ರಹಿತವಾದ ಅರ್ಧ ಸತ್ಯದ ಇಲ್ಲವೇ ವರ್ಗ ಸತ್ಯದ ಧೋರಣೆಗಳನ್ನೇ ನೆಲದ ಧೋರಣೆಗಳೆಂದು ಹೇಳಲಾಗಿದೆ.ಇತ್ತೀಚೆಗೆ ಇಂತಹ ಗೌಣಗೊಂಡ ಜನಪದ ಜಗತ್ತಿಗೆ ಮೌಲ್ಯದೊರೆತು ಜನ ಸಂಸ್ಕೃತಿಗಳು ಚರ್ಚೆಯ ಮುನ್ನೆಲೆಗೆ ಬರುತ್ತಿವೆ.ಇಂತಹ ಉದ್ವೇಗ ರಹಿತವಾದ ದುಡಿವ ಜನರ ಬದುಕನ್ನ ಕುರಿತ ಸಕಾರ ಮತ್ತು ನಕಾರಾತ್ಮಕ ನೆಲೆಗಳನ್ನ ಜೀವಪರ ಕಾಳಜಿಯಿಂದ ಕಟ್ಟಿ ಕೊಡುವ ಬರಹಗಳ ಕಟ್ಟೇ ಡಾ.ಮಂಜುನಾಥ ಬೇವಿನಕಟ್ಟೆ ಅವರ ಜನಜಾನಪದ.

ಈ ಕೃತಿಯಲ್ಲಿನ ಜನಪದರ ಸಂಸ್ಕೃತಿ,ಪರಂಪರೆ,ಸಮಸ್ಯೆ, ವೈಶಿಷ್ಟತೆಗಳೆಂಬ ಹಲವಾರು ಕವಲುಗಳು ಸಂಶೋಧಕರ ಆಸಕ್ತಿಯನ್ನ ,ಜನಪರ ಉತ್ಪನ್ನಗಳೆಂಬ ಸಂವೇದನೆಗಳನ್ನ,ಸಾಂಸ್ಕೃತಿಕ ಪಲ್ಲಟಗಳ ಒಳ ಚಹರೆಗಳನ್ನ ಪ್ರಧಾನವೆಂದು ನಿರೂಪಿಸುತ್ತವೆ.ಜನ ಜಾನಪದ ವೆಂಬುದು ಭಾವನಾತ್ಮಕ ಪರಿಕಲ್ಪನೆಯಲ್ಲ.ಅದಕ್ಕೆ ಭೌತಿಕ ರೂಪವಾಗಿ ಮಾನವಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನ ದುಡಿವ ಸಮುದಾಯಗಳ ಒಳಿತಿಗಾಗಿ ರೂಪಿಸಿಕೊಂಡಿರುವ ಕ್ರಮವೇ ಆಸಕ್ತಿಕರವಾಗಿದೆ. ಕೆಲವು ಅಧ್ಯಯನಗಳು ತಮ್ಮದೇ ಆದ ತುಳಿಯಲಾರದ ಹಾದಿಯಿಂದ ಊಳಿಗಮಾನ್ಯ ಜಗತ್ತಿನಲ್ಲಿ ಗೌಣಗೊಂಡ ಪಶುಪಾಲಕ,ಕೃಷಿಕ ವರ್ಗಗಳ ಅಸಹಾಯಕ ನೋಟಗಳನ್ನ ಲೇಖಕರು ದತ್ತ ಸಾಕ್ಷಿಗಳಿಂದಲೇ ಪ್ರತಿಪಾದಿಸಿದ್ದಾರೆ.

ಜನ ಜಾನಪದ ಎಂದರೇನು? ಜನಪದ ಅಧ್ಯಯನ ವಿಧಾನದ ಸೂಕ್ಷ್ಮಗಳೇನು? ಸವಾಲುಗಳೇನು? ಈ ಅಧ್ಯಯನಗಳು ಹುಟ್ಟಿಸಬಹುದಾದ ವಾಗ್ವಾದಗಳನ್ನ ವಿದ್ವಾಂಸರು ಹೇಗೆ ಸಮತ್ವದಿಂದ ಕಾದು ನೋಡಬೇಕು? ಆಕರ್ಷಕವೂ ಅಪಾಯಕಾರಿಯೂ ಆದ ಕೆಲ ಸಮೂಹ ಆಚರಣೆಗಳನ್ನ ಅಧಿಕಾರದ ವರ್ಗಾಸಕ್ತಿಗಾಗಿ ರಾಜಕಾರಣಗಳಿಗಾಗಿ ಬಲಿಕೊಡದೆ ಜನ ಸಮೂಹಗಳ ವಿಶಿಷ್ಟ ಶಕ್ತಿಗಾಗಿಯೇ ಹೇಗೆ ದುಡಿಸಿಕೊಳ್ಳಬೇಕಾಗಿದೆ ಎಂಬ ಪರಿಣಾಮಕಾರಿ ನಿಲುವುಗಳಿಂದ ಡಾ.ಬೇವಿನಕಟ್ಟಿಯವರು ಕಡೆದು ಕೊಟ್ಟಿದ್ದಾರ.




ಇಲ್ಲಿನ ಜಾನಪದ ಅಧ್ಯಯನಗಳು ಜನ ಸಮೂಹ,ಜನಪದ ಕಲೆ, ಕ್ರೀಡೆಗಳು, ಕೈಗಾರಿಕಾ ಜಾನಪದ, ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆ ಮತ್ತು ಮೌಖಿಕತೆ ಎಂಬ ವಿಶಿಷ್ಟ ನೆಲೆಗಳಿಂದ ಅಚ್ಚರಿ ಹುಟ್ಟಿಸುತ್ತವೆ. ಜಾಳು ಹೇಳಿಕೆಗಳಿಲ್ಲದ ಜಡ ಸಂಶೋಧನಾ ರೀತಿಗಳಿಲ್ಲದ ತಾಜಾ ಭಾಷಾ ರೂಪಗಳಿಂದ,ಕ್ಷೇತ್ರ ಕಾರ್ಯಗಳ ಪ್ರೌಢ ಅನುಭವಗಳಿಂದ ಇವರು ತಮ್ಮ ಅಧ್ಯಯನವನ್ನ ಜನಸ್ನೇಹಿ ಹಾಗೂ ಜನ ಕಾಳಜಿಯ ಅಧ್ಯಯನಗಳಾಗಿಸಿದ್ದಾರೆ.

ಈ ಜನ ಸಮೂಹ ಅದ್ಯಯನಗಳನ್ನ ಎರಡು ರೀತಿಯಲ್ಲಿ ವಿಭಾಗಿಸಿಕೊಳ್ಳಬಹುದು. 1) ಜನಪರ 2) ಪೂರಕ ಪರಿಕರಗಳ ಅಧ್ಯಯನಗಳು. ಈ ಮಾದರಿಗಳು ಜನಪದ ಅಧ್ಯಯನಕಾರರಿಗೆ ಸಂಶೋಧಕರಿಗೆ ನೆರವಾಗಬಲ್ಲವು.

" ಜನಪದ ಅಧ್ಯಯನ:ಅವಶ್ಯಕತೆ " ಎಂಬ ಅಧ್ಯಯನದ ಚರ್ಚೆಯು " ಜನಪದ ಉತ್ಪಾದನಾ ವಿಧಾನವು ಬದಲಾದಂತೆ ಜನಪದ ಸ್ವರೂಪವೂ ಬದಲಾಗುತ್ತದೆ " ಎಂಬ ಅರ್ಥಪೂರ್ಣ ಗ್ರಹಿಕೆಯಿಂದಲೇ ಆರ್ಥಿಕ,ಸಾಮಾಜಿಕ,ಸಾಂಸ್ಕೃತಿಕ ಹಾಗೂ ರಾಜಕೀಯ ಅಂಶಗಳನ್ನ ಎಚ್ಚರದಿಂದ ಪರಿಶೀಲಿಸಿದೆ. " ಕಾಲ ಬದಲಾದಂತೆ ಜನ ಸಂಸ್ಕೃತಿಗಳು ವಿಸ್ಮೃತಿಗೆ ಒಳಗಾಗುತ್ತ ಬರುತ್ತವೆ ಆಸಕ್ತ ಶೋಧಕರು ಈ ಮೂಲ ಬಾಗಿಲುಗಳನ್ನ ತೆರೆದು ಅದರೊಳಗಿಂದ ಜನ ಸಮೂಹಕ್ಕೆ ಬೇಕಾದ ಜ್ಞಾನ ಸಂಪತ್ತನ್ನ ಸೃಜನಾತ್ಮಕ ನೆಲೆಗಳನ್ನ, ಜನ ಲೋಕಕ್ಕೆ ನೀಡಬೇಕಿದೆ." ಎಂಬ ಇಲ್ಲಿನ ನಿಲುವೂ ಆಸಕ್ತಿಕರವಾಗಿದೆ.

ವ್ಯಕ್ತಿ ಪ್ರಧಾನವಾದ ಆಧುನಿಕತೆ ಹೇಗೆ ಜಡಗೊಂಡು ಸೃಜನಶೀಲ ಬಹುಮುಖತೆಗಳನ್ನ ಕೊಲ್ಲುತ್ತಿದೆ.ಜೀವ ಸೆಲೆಗಳನ್ನ ಮುಚ್ಚಿ ಯಾಂತ್ರೀಕರಣಗೊಳಿಸುತ್ತಿದೆ.ಎಂಬ ಅರಿವನ್ನ ಮೂಡಿಸುತ್ತಲೇ ಸಮೂಹ ಪ್ರಧಾನವಾದ ಜನ ಸಂಸ್ಕೃತಿಗಳ ಅಧ್ಯಯನವು ಪರಿಣಾಮಕಾರಿಯಾಗಬೇಕಾಗಿದೆ ಎನ್ನುತ್ತಾ ... " ಹಳೆಯ ಜಗತ್ತಿನ ಮರು ರೂಪದಂತೆ ವಿಸ್ಮೃತಿಗೆ ಸಂದ ಪಲ್ಲಟಗಳನ್ನ ಗುರುತಿಸುವ ಜವಾಬ್ದಾರಿ ಜನಜಾನಪದ ಅಧ್ಯಯನಕಾರರ ಮೇಲಿದೆ" ಎಂಬ ಸುಳಿವು ಸಾಂಪ್ರದಾಯಿಕ ಅಧ್ಯಯನಕಾರರ ನೋಟದೊಳಗಿನ ಮುಕ್ಕನ್ನೂ ಗುರುತಿಸುವಂತಿದೆ.

"ಜಾಗತೀಕರಣ ಮತ್ತು ದೇಶೀಯತೆ " ಎಂಬ ಅಧ್ಯಯನವು ವಿಕೇಂದ್ರೀಕರಣದ ಹಿನ್ನೆಲೆಯ ಮಹತ್ವದ ಶೋಧನೆಯ ಲಕ್ಷಣಗಳನ್ನ ಹೊತ್ತುಕೊಂಡಿದೆ.ಇಲ್ಲಿ " ಜಾಗತೀಕರಣದ ಬಹು ಮುಖ್ಯ ಪರಿಣಾಮವೆಂದರೆ ಬಹುಮುಖಿ ನೋಟಗಳ ಕಣ್ಮರೆ" ಎನ್ನುವ ಹೇಳಿಕೆಗೆ ಎದುರಾಗಿ ಮೈಲಾರ ಲಿಂಗ ಮತ್ತು ಯಲ್ಲಮ್ಮನ ಭಂಡಾರದ ಚಿತ್ರಣ ಉಲ್ಲೇಖಿಸುತ್ತಾರೆ. ಲಿಂಗ ತಾರತಮ್ಯದ ನಗರ ದೈವಗಳ ಎದರು ಜನಪದ ದೈವಗಳು ಸಮತ್ವವನ್ನ ಸಾಧಿಸಿರುವುದು ಸಾಮಾಜಿಕ ಶ್ರೇಣೀಕರಣದೊಳಗೂ ಜನ ಸಮೂಹಗಳು ಸಾಧಿಸಿದ ಸಹಿಷ್ಣು ಮನೋಧರ್ಮವನ್ನ ತೋರುವಂತಿದೆ. ಈ ಬಗೆಯ ಶೋಧನೆಯ ಸ್ವರೂಪ ಏಕಮುಖಿಯಾದುದಲ್ಲ. ಸಂಕೀರ್ಣರೂಪಿಯಾದದ್ದು.ಇದಕ್ಕೆ ಉದಾಹರಣೆಗಳಂತೆ ಮೈಲಾರ ಲಿಂಗನ ಜಾಗವನ್ನ ಆಧೀನ ಗೊಳಿಸಿಕೊಳ್ಳುವ ಸೋಮಲಿಂಗನ ವಿವರಣೆ.ಹಾಗೇ ಮೈಲಾರ ಲಿಂಗನ ಮೌನ ಮೆರವಣಿಗೆಯ ಡೆಂಕನ ಮರಡಿಯ ಆಚರಣೆಯೊಳಗೆ ಮೈಲಾರನು ಮರಡಿಗೆ ಬಂದು ಯುದ್ಧ ಮಾಡಿ ರಾಕ್ಷಸರನ್ನ ಗೆಲ್ಲಲಾರದೇ ಬೆಳಗಿನ ಜಾವ ಮಲಗಿದಾಗ ಬಂದು ತನ್ನ ಸೈನ್ಯದೊಂದಿಗೆ ಸದ್ದಿಲ್ಲದೆ ಹೋಗಿ ಸಂಹಾರ ಮಾಡಿದ ಕುರುಹು, ಬದಲಾದ ಜನಪದ ದೈವಗಳ ವಾಹನಗಳು ಬೇರೊಂದು ಸಮೂಹದ ಮೇಲಿನ ಆಕ್ರಮಣವನ್ನ,ಆಧೀನಗೊಳಿಸುವ ಕ್ರಮವನ್ನ ಬಿಂಬಿಸುವಂತಿದೆ.

ಮಾತಂಗಿಯನ್ನ ಕೊಂದು ರೇಣುಕೆಯ ಮುಂಡಕ್ಕೆ ಅಂಟಿಸುವ ಪರುಶುರಾಮ ಮಾತೃ ಪ್ರಧಾನ ವ್ಯವಸ್ಥೆಯನ್ನ ಪಿತೃ ಪ್ರಧಾನವಾಗಿ ಆಧೀನಗೊಳಿಸಿದ ಪ್ರತೀಕವಾಗಿದೆ.ಭೂಮಾಲಿಕ ಹಾಗೂ ಧಾರ್ಮಿಕ ಪ್ರಭುತ್ವಗಳು ತಳಸಮುದಾಗಳನ್ನ ಸಂಸ್ಕೃತಿಯ ಹೆಸರಲ್ಲಿ ಸರಕಿನಂತೆಯೇ ಬಳಸಿಕೊಂಡಿರುವ ರೀತಿಗಳನ್ನೂ ಅಚ್ಚರಿ ಹುಟ್ಟಿಸುವಂತೆ ವಿವರಿಸುತ್ತಾರೆ.ಪವಿತ್ರ ಎನ್ನುವ ಕರಿಬಾನಿಯ ನೀರು ಮನೆಯ ಒಳಗೆ ಬಾರದೇ ಮನೆಯ ಸುತ್ತ ಮುತ್ತ ಚಲ್ಲುವುದರ ಮುಖಾಂತರ ಜಾತಿಯ ಒಳಗಿರುವ ಆಂತರ್ಯದ ಕೀಳು ಮನೋಭಾವನೆಯನ್ನ ತೋರುತ್ತಾರೆ. ಕರಿಬಾನಿ ಮತ್ತು ಚಪ್ಪಲಿ ಸೇವೆಗಳು ಯಾಕೆ ಕೇವಲ ಮನೆ ಅಥವಾ ಗುಡಿ ಹೊರಗಿನ ಆಚರಣೆಗಳಾಗಿ ಉಳಿದಿವೆ? ಎಂಬ ಪ್ರಶ್ನೆಯೇ ವೈಚಾರಿಕ ನಿಲುವಿನದಾಗಿದೆ ಈ ಮೂಲಕ ಲೇಖಕರು ಜನ ಸಂಸ್ಕೃತಿಯ ಅಧ್ಯಯನಗಳೆಲ್ಲವನ್ನೂ ಭಾವುಕ ತೀರ್ಮಾನಗಳಿಂದ ಸಂಭ್ರಮಿಸಬಾರದು ಎಂಬ ಅಗತ್ಯ ಎಚ್ಚರಿಕೆ ನೀಡಿದ್ದಾರೆ.

ಊಳಿಗ ಮಾನ್ಯ ವ್ಯವಸ್ಥೆಯು ಸರಕುಗಳ ಉತ್ಪಾದನೆಯ ಕ್ರಮವನ್ನ ಬದಲಿಸುತ್ತಾ ಹೊರಟ ಕ್ರಮವನ್ನ ಪರಿಶೀಲಿಸುತ್ತಲೇ ಈ ಬದಲಾವಣೆಗಳು ಜನ ಸಮೂಹಗಳ ಬದುಕುಗಳನ್ನ ಅಸಹಾಯಕ ಪರಿಸ್ಥಿತಿಗೆ ನೂಕಲ್ಪಡುತ್ತಿವೆ ಎಂಬುದನ್ನ ಮಾರುಕಟ್ಟೆಗಳ ನಿದರ್ಶನಗಳಿಂದಲೇ ಪ್ರತಿಪಾದಿಸಿದ್ದಾರೆ.ಮನಸ್ಸನ್ನ ಮಾರ್ಕೆಟ್ ಮಾಡಿದ ಆಧುನಿಕತೆಯು ಭೋಗ ಸಂಸ್ಕೃತಿಯನ್ನ ಮೌಲ್ಯವಾಗಿಸಿದೆ.ಹಣಕ್ಕೆ ತಕ್ಕಂತೆ ಆಶಯಗಳನ್ನ ತಿರುಚುವ ಈ ಆಧುನಿಕ ಆರ್ಥಿಕ ಜಗತ್ತು ಜನಪದ ಕ್ರೀಡೆಗಳನ್ನ ಅಲಕ್ಷವಾಗಿ ಕಂಡಿದೆ.ಇದಕ್ಕೆ ಕಾರಣ ಆಧುನಿಕ ಆಟಗಳು ಅವಿಭಕ್ತ ಕುಟುಂಬದಿಂದ ಬಂದವು.ಜೀವನ ಕೌಶಲ್ಯದಿಂದ ದೂರವಾದವು. ಯಂತ್ರ ಜ್ಞಾನದಿಂದ ಹುಟ್ಟಿದ ಆಧುನಿಕ ಕ್ರೀಡೆಯನ್ನ ಹೇಗೆ ಪ್ರಿಸ್ಟೇಜ್ ಮಾಡಲ್ ಗಳನ್ನಾಗಿಸಿದೆ ಎನ್ನುತ್ತಲೇ ಆಧುನಿಕತೆಯು ಜನಪದ ಆಟಗಳನ್ನ ಐಟಮ್ ಎಕ್ಸಪೋರ್ಟ ಗಳನ್ನಾಗಿಸುವ ತಂತ್ರಗಳು ಕ್ರೀಡೆಗಳನ್ನ ಹೇಗೆ ಕುಟುಂಬಗಳಿಂದ ಬಿಡಿಸಿ ಅನಾಥರನ್ನಾಗಿಸಿವೆ, ಜನರ ಅಭಿರುಚಿಯನ್ನೂ ಭ್ರಷ್ಟಗೊಳಿಸಿವೆ ಎಂದು ವಿವರಿಸುತ್ತಾ ಆಟವನ್ನ ಹಣದ ದಂಧೆಯಾಗಿಸುವ ಕೈಗಾರಿಕೀಕರಣವು ಗುಣಾತ್ಮಕ ಆನಂದವನ್ನ ಮರೆಯಾಗಿಸುತ್ತಿವೆ ಎಂಬ ತೀರ್ಮಾನವು ಆತಂಕಕಾರಿಯಾದ ಈ ಪರಿಸ್ಥಿತಿಯನ್ನ ಅರ್ಥಮಾಡಿಕೊಂಡು ಕ್ರೀಡೆಯನ್ನ ಪ್ರಜಾಮೂಲವಾಗಿಸಬೇಕಿದೆ ಎಂಬ ಆಶಯವನ್ನ ಹೊತ್ತಿದೆ.

" ರೊಟ್ಟಿ ಸಂಕಥನ " ಎಂಬ ಲೇಖನವಂತೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೇರುಗಳತ್ತ ಮುಖಮಾಡಿದೆ.ಪ್ರದೇಶಿಕ ಅನನ್ಯತೆಗಳನ್ನ ಆಹಾರ ಕ್ರಮವೊಂದು ಹೇಗೆ ಪ್ರತಿಬಿಂಬಿಸಬಲ್ಲದು ಎಂಬುದಕ್ಕೆ ಸಾಕ್ಷಿ ನೀಡುವಂತಿದೆ.

ದಲಿತ ಜಾನಪದವು ಮಾತೃ ಮೂಲದಿಂದ ಪಿತೃ ಮೂಲದತ್ತ ವಾಲಿದ ರೀತಿಯನ್ನ 'ಎಡ', 'ಬಲ' ವೆಂಬ ಎರಡು ವರ್ಗಗಳಿಂದ ನೋಡುವ ಕ್ರಮವನ್ನ ಪುರಸ್ಕರಿಸುವ ಲೇಖನವು ಆ ಕ್ರಮದ ಹಿಂದಿನ ತೊಡಕನ್ನ, ತಕರಾರನ್ನ , ಯಾಕೋ ಉತ್ಪದನಾ ಕ್ರಮದಿಂದ ಬಿಡಿಸಿ ನೋಡಿಲ್ಲ.ಭೂಮಿ ಹೀನರಾದ ಕೂಲಿಯಾಳುಗಳಾದ 'ಎಡ' ವರ್ಗಗಳೊಂದಿಗೆ ಹೇಗೆ ಕಮ್ಮಾರರನ್ನ,ಬಡಗಿಗಳನ್ನ,ಅಕ್ಕಸಾಲಿಗರನ್ನ ನೋಡಲು ಸಾಧ್ಯ? ಲೇಖಕರೇ ತಿಳಿಸುವಂತೆ ಜನಪದ ತೀರ್ಮಾನಗಳನ್ನ ಕುರುಡಾಗಿ ಒಪ್ಪಿಕೊಳ್ಳದೇ ವಾಗ್ವಾದಗಳಿಂದಲೇ ಗಟ್ಟಿಗೊಳಿಸಿಕೊಳ್ಳಬೇಕು ಎಂಬ ಮಾತನ್ನ ಈ ನೆಲೆಯಲ್ಲಿ ಸೂಚಿಸಬಹುದು.

ಮಾನವಿಕ ನೆಲೆಯ ವಾಲ್ಮೀಕಿ ಸಮುದಾಯದ ಮಹಿಳೆ ಬುಡಕಟ್ಟು ಚರಿತ್ರೆಯ ಸಾಂಸ್ಕೃತಿಕ ಮಹತ್ವವನ್ನ, ಪಲ್ಲಟಗೊಂಡ ಆಧುನಿಕ ಬದುಕಿನ ಮಾದರಿಯನ್ನ ಇಟ್ಟುಕೊಂಡು ಅಲಕ್ಷಿತ ಮಹಿಳಾ ನೆಲೆಯ ತಾತ್ವಿಕ ಹಾಗೂ ಸಾಂಸ್ಕೃತಿಕ ಚರ್ಚೆಗಳನ್ನ ವಿಸ್ತರಿಸಿಕೊಂಡಿದೆ.ಇಲ್ಲಿನ ಚರ್ಚೆಯನ್ನ ತಳವರ್ಗಗಳ ಸಮಸ್ಯೆ ಮತ್ತು ಪರಿಹಾರಗಳನ್ನ ಆರ್ಥಿಕ ಹಂಚಿಕೆಯ ಸ್ವರೂಪಗಳ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.ಲೇಖಕರು ನೀಡುವ ಸೋದರ ಮಾವಂದಿರ,ಹನುಮನ ಸಾಂಸ್ಕೃತಿಕ ಸಂಗತಿಗಳು,ಪಾಳೆಗಾರ ಮಹಿಳೆಯರು ರಾಜ್ಯ ಆಳುವ ಚಾರಿತ್ರಿಕ ಸಂಗತಿಗಳು ಗಮನಾರ್ಹ ವಿಶಿಷ್ಟತೆಗಳ ದಾಖಲೆಗಳಂತಿವೆ. ಕೃಷಿ,ನೀರಾವರಿ,ಜನಪದ ಕಲೆಗಳನ್ನ ಕುರಿತ ನಾಲ್ಕು ಲೇಖನಗಳು ಮಾಹಿತಿ ಪ್ರಧಾನವಾದ ಅಂಶಗಳಿಂದ ಕೂಡಿವೆ.

ಜನ ಜಾನಪದವನ್ನ ಪ್ರೀತಿಸುವ,ಜನ ಜಾನಪದವನ್ನ ಅರಿಯುವ ಗ್ರಹಿಕೆಯ ಸ್ವರೂಪ ಹಾಗೂ ಸಂವೇದನೆಗಳು ಹೇಗೆ ಶೋಧನೆಗಳ ಚರ್ಚೆಗಳಾಗಿ ರೂಪಿಸಿಕೊಳ್ಳಬೇಕು? ಪೂರಕವೂ ನಕಾರಾತ್ಮಕವೂ ಆದ ಆಕರಗಳನ್ನ ಭಾಷೆ,ಜಾತಿ,ರಾಜಕಾರಣ,ಮತ್ತಿತರ ಸಾಂಸ್ಕೃತಿಕ ನೆಲೆಗಳಲ್ಲಿ ಹುಡುಕಬೇಕು ? ವಿಸ್ಮೃತಿಗೆ ಸಂದ ಈ ಜನ ಚರಿತ್ರೆಗಳ ದರ್ಶನವು ನಮ್ಮ ಹೇಗೆ ಬದುಕುಗಳಿಗೆ ಜೈವಿಕ ನೆಲೆಗಳನ್ನ ತೆರೆಯಬಲ್ಲದು ? ಪ್ರಾಥಮಿಕ ಆಕರಸಾಮಾಗ್ರಿಗಳನ್ನ ಭಿನ್ನ ಧೋರಣೆಗಳಿಂದ, ಭಾಷಿಕ ಕ್ರಮದಿಂದ ಭೌದ್ಧಿಕ ಶಿಸ್ತಾಗಿಸಬಹುದು ಎಂಬ ನಿಲುವಿಗೆ ಈ ಕೃತಿಯೊಂದು ಸಾಕ್ಷಿಯಂತಿದೆ.

## ಇನ್ನೇಸು ದಿನಾ ಇರತಿ?
(ತತ್ವಪದ)



ನೀ ಎಷ್ಟರಾ ಮೆರೀತಿ
ಇನ್ನೇಸು ದಿನಾ ಇರತಿ
ಪ್ರೀತಿಯೆಂಬೊ ಒರತಿ ಕಾಲಾಡಿಸಿ
ಕಲರ್ ಮಾಡತಿ
ನೀ ಎಷ್ಟರಾ ಮೆರೀತಿ?

ಬರುವಾಗ ತಂದದ್ದೇನೈತಿ
ಹೋಗಾಗ ಒಯ್ಯುವುದೇನೈತಿ?
ಆಡುತಾಡುತ ಮರಕೋತಿ
ಮಾಣಿಕ್ಯ ನೀನು ಕಲಕೊಂತಿ!
ನೀ ಎಷ್ಟರಾ ಮೆರೀತಿ..
ಕಂಡದ್ದರ ಮ್ಯಾಲ ಕಣ್ಣಿಡತಿ
ಇದ್ದದ್ದು ಬಳಕೊಂಡು ಬಾ ಅಂತಿ
ಬಿಡಬ್ಯಾಡ ತೊಗೊ ಒಂದು ಕೈ ಅಂತಿ
ಎಲ್ಲಾ ಒಯ್ದು ಎಲ್ಲಿಡತಿ?
ನೀ ಎಷ್ಟರಾ ಮೆರೀತಿ..

ದೇವರು ದೈವ ಇಲ್ಲಂತಿ
ನಾನೇ ದೇವರು ಅನಕೊಂತಿ
ಸುಳ್ಳಿಗೆ ಪೂರಾ ಮನಸೋತಿ
ಹರಿ ಹರ ಬ್ರಹ್ಮರ ಕಳಕೊಂತಿ
ನೀ ಎಷ್ಟರಾ ಮೆರೀತಿ..

ನಂಬು ನಂಬಲೆ ನೀ ಕೋತಿ,
ನಂಬಿಗಿಯೊಳಗ ನಿಧಿ ಐತಿ
ಕೊಣ್ಣೂರ ಚಿನುಮಾಯಿ ಕಂದ
ಬಾಪು
ಕರದರ ಯಾಕ ಒಲ್ಲಂತಿ?
ನೀ ಎಷ್ಟರಾ ಮೆರೀತಿ
ಇನ್ನೇಸು ದಿನಾ ಇರತಿ?



ರಚನೆ: ಬಿ.ಆರ್.ಪೊಲೀಸ್ ಪಾಟೀಲ್
ವಿಶ್ರಾಂತ ಪ್ರಾಚಾರ್ಯ

# ಮಹಿಳಾ ಸಬಲೀಕರಣ ಮತ್ತು ಹಿಜಾಬ್

**● ಮಾನಸ, ಬೆಂಗಳೂರು**

ತನ್ನ ವೈವಿಧ್ಯತೆ ಮತ್ತು ಜಾತ್ಯತೀತತೆಗಾಗಿ ಆಚರಿಸಲಾಗುವ ದೇಶದಲ್ಲಿ, ವೈಯಕ್ತಿಕ ಗುರುತನ್ನು ಜಾರಿಗೊಳಿಸುವುದು ಅಸಂಬದ್ಧ ಕಲ್ಪನೆಯಾಗಿದೆ. ವೈವಿಧ್ಯಮಯ ಪದದ ಅತ್ಯಂತ ವ್ಯಾಖ್ಯಾನವು "ವಿಭಿನ್ನ" ಅಥವಾ "ವೈವಿಧ್ಯತೆಯನ್ನು ತೋರಿಸುವುದು", ಅಂದರೆ ವೈವಿಧ್ಯಮಯವಾದ ಸಂಸ್ಕೃತಿಯು ಅದರ ಸದಸ್ಯರ ನಡುವಿನ ವ್ಯತ್ಯಾಸವನ್ನು ಆಚರಿಸುತ್ತದೆ. ಆದ್ದರಿಂದ, ವೈಯಕ್ತಿಕ ಸಂಸ್ಕೃತಿಯನ್ನು ಜಾರಿಗೊಳಿಸುವುದು ಅಥವಾ ಯಾವುದೇ ನಿರ್ದಿಷ್ಟ ಗುಂಪಿನ ವಿಶಿಷ್ಟ ಅಂಶಗಳನ್ನು ರಾಜಕೀಯ ಲಾಭಕ್ಕಾಗಿ ಬಳಸುವುದು ಅಂತಹ ಸಮಾಜದ ವೈವಿಧ್ಯತೆಯ ಫ್ಯಾಬ್ರಿಕ್ ಮೇಲೆ ದಾಳಿ ಎಂದು ಹೇಳುವುದು ಸೂಕ್ತವಾಗಿದೆ.

ಭಾರತದ ವೈವಿಧ್ಯಮಯ ಮತ್ತು ಜಾತ್ಯತೀತ ಸಂಸ್ಕೃತಿಯು ಕರ್ನಾಟಕದ ಇತ್ತೀಚಿನ ವಿವಾದದಿಂದ ಇದ್ದಕ್ಕಿದ್ದಂತೆ ಸವಾಲಾಗಿದೆ, ಇದರಲ್ಲಿ ಕೆಲವು ಮುಸ್ಲಿಂ ಹುಡುಗಿಯರು ಉಡುಪಿ ಜಿಲ್ಲೆಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ತರಗತಿಗಳಿಗೆ ಹಾಜರಾಗುವಾಗ ಹಿಜಾಬ್ ತೆಗೆದುಹಾಕಲು ನಿರಾಕರಿಸಿದ ಕಾರಣಕ್ಕೆ ಹಾಜರಾಗುವುದನ್ನು ನಿಷೇಧಿಸುವ ನಿರ್ಧಾರವನ್ನು ಪ್ರತಿಭಟಿಸಿದ್ದಾರೆ. ಈ ನಿರಾಕರಣೆಗೆ ಜನಪ್ರಿಯ ಸಮರ್ಥನೆ, ಧಾರ್ಮಿಕ ಗುರುತುಗಳಿಂದ ಶೈಕ್ಷಣಿಕ/ಕೆಲಸದ ಸ್ಥಳವನ್ನು ಪ್ರತ್ಯೇಕಿಸುವ ಹಳೆಯ ಚರ್ಚೆಯ ಸುತ್ತ ಸುತ್ತುತ್ತದೆ. ಸತೀಶ್ ಎಂ ಬೆಜ್ಜಿಹಳ್ಳಿ ಮತ್ತು ಮುಜಾಫರ್ ಅಸ್ಸಾದಿ ಎಂಬ ಇಬ್ಬರು ವ್ಯಕ್ತಿಗಳ ಅಭಿಪ್ರಾಯಗಳಿಂದ ಇದನ್ನು ಎರಡು ವಿಭಿನ್ನ ದೃಷ್ಟಿಕೋನಗಳಿಂದ ನೋಡಬಹುದು. ಬೆಂಗಳೂರು ಸಿಟಿ ಯೂನಿವರ್ಸಿಟಿ ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಮತ್ತು ವಿದ್ಯಾ ಸಂಸ್ಕಾರ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್‌ನ ಪ್ರಾಂಶುಪಾಲ ಸತೀಶ್ ಎಂ ಬೆಜ್ಜಿಹಳ್ಳಿ, "ಉಡುಪು ನಂಬಿಕೆ, ಧರ್ಮವನ್ನು ಸೂಚಿಸಬಾರದು. ಅದು ವಿದ್ಯಾರ್ಥಿಗಳ ನಡುವೆ ಅಡೆತಡೆಗಳನ್ನು ಸೃಷ್ಟಿಸುತ್ತದೆ" ಎಂದು ವಾದಿಸಿದ್ದಾರೆ. ಮತ್ತೊಂದೆಡೆ, ಹಿಜಾಬ್ ಅನ್ನು ಧಾರ್ಮಿಕ ಸಂಕೇತವೆಂದು ಪರಿಗಣಿಸಬಹುದಾದರೆ ವಿದ್ಯಾರ್ಥಿಗಳು ಕುಂಕುಮ (ಬಿಂದಿ, ವರ್ಮಿಲಿಯನ್) ಬಳೆಗಳೊಂದಿಗೆ ತರಗತಿಗಳಿಗೆ ಬರಲು ಸಾಧ್ಯವಿಲ್ಲ ಎಂದು ಮಾನಸಗಂಗೋತ್ರಿ ಮೈಸೂರು ವಿಶ್ವವಿದ್ಯಾಲಯದ ಡೀನ್ ಪ್ರೊಫೆಸರ್ ಮುಜಾಫರ್ ಅಸ್ಸಾದಿ ಅಭಿಪ್ರಾಯಪಟ್ಟಿದ್ದಾರೆ.

ಏನು ಮಾಡಬೇಕು ಅಥವಾ ಮಾಡಬಾರದು ಎಂಬುದರ ಕುರಿತು ಯಾವುದೇ ತೀರ್ಮಾನಕ್ಕೆ ಬರುವ ಮೊದಲು, ನಿಖರವಾಗಿ "ಹಿಜಾಬ್" ಎಂದರೇನು ಮತ್ತು ಅದು ಏಕೆ ಚರ್ಚೆಯ ವಿಷಯವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಹಿಜಾಬ್‌ನ ಪರಿಕಲ್ಪನೆಯು ವಿಶಾಲವಾಗಿ ಹೇಳುವುದಾದರೆ, ನಮ್ರತೆ ಮತ್ತು ಪರಿಶುದ್ಧತೆಗೆ ಸಂಬಂಧಿಸಿದೆ ಮತ್ತು ಇಸ್ಲಾಂ ಧರ್ಮವನ್ನು ಅಭ್ಯಾಸ ಮಾಡುವ ಪುರುಷರು ಮತ್ತು ಮಹಿಳೆಯರಿಗೆ ಸಂಬಂಧಿಸಿದೆ. ಇದು 26ಋ ತಜಢಿಜ, 7 ನೇ ಅಧ್ಯಾಯದ (೦ಙ ೦'ಡಿಚಿಜಿ) ಪದ್ಯದಿಂದ ಸ್ಪಷ್ಟವಾಗಿದೆ, ಅದು ಹೇಳುತ್ತದೆ (ಸ್ಥೂಲವಾಗಿ ಭಾಷಾಂತರಿಸಲಾಗಿದೆ) "ಓ ಆದಮ್ ಮಕ್ಕಳೇ! ನಿಜವಾಗಿಯೂ, ನಾವು ನಿಮಗೆ ಅವಮಾನವನ್ನು ಆವರಿಸುವ ಮತ್ತು ರಕ್ಷಣೆ ಮತ್ತು ಅಲಂಕಾರವನ್ನು ಒದಗಿಸುವ ಉಡುಪನ್ನು ನಿಮಗೆ ಕಳುಹಿಸಿದ್ದೇವೆ. ಆದರೆ ಎಲ್ಲಕ್ಕಿಂತ ಉತ್ತಮವಾದದ್ದು ಧರ್ಮನಿಷ್ಠೆಯ ವಸ್ತ್ರವಾಗಿದೆ, ಅದು ಅಲ್ಲಾಹನ ಚಿಹ್ನೆಗಳಲ್ಲಿ ಒಂದಾಗಿದೆ, ಆದ್ದರಿಂದ ಅವರು ಗಮನಹರಿಸುತ್ತಾರೆ. ಈ ಪದ್ಯದಿಂದ ಎರಡು ತೀರ್ಮಾನಗಳನ್ನು ಪಡೆಯಬಹುದು: ಕುರಾನ್ "ಆದಾಮನ ಮಕ್ಕಳು" ಎಂದು ಸಂಬೋಧಿಸುತ್ತಿದೆ, ಇದು ಪುರುಷರು ಮತ್ತು ಮಹಿಳೆಯರು ಇಬ್ಬರನ್ನೂ ಒಳಗೊಂಡಿರುತ್ತದೆ, ಇದು ಪುರುಷನಿಗೆ ತನ್ನನ್ನು ಮುಚ್ಚಿಕೊಳ್ಳುವುದುಎಷ್ಟು ಅವಶ್ಯಕವಾಗಿದೆ ಮತ್ತು ಪುರುಷರಿಗೆ ಹಿಜಾಬ್ ಪರಿಕಲ್ಪನೆ ಇಲ್ಲ, ಅದನ್ನು ಮಹಿಳೆಯರ ಮೇಲೆ ಜಾರಿಗೊಳಿಸಬಾರದು. ಎರಡನೆಯದಾಗಿ, ಇದು ಅವಮಾನ, ರಕ್ಷಣೆ ಮತ್ತು ಅಲಂಕರಣವನ್ನು ಒಳಗೊಳ್ಳುವ ಬಗ್ಗೆ ಮಾತನಾಡುತ್ತದೆ ಮತ್ತು ಹಿಜಾಬ್ ಅಥವಾ ಬುರ್ಖಾ ಬಗ್ಗೆ ಅಲ್ಲ. ದೇಶದ ಕೋಮು ಸೌಹಾರ್ದತೆಯನ್ನು ಕದಡುವ ಸಾಮರ್ಥ್ಯ ಎಂದು ಮುಜಾಫರ್ ಅಸ್ಸಾದಿ ಎತ್ತಿದ ಎರಡನೇ ಅಂಶ– ಇತರರ ಧಾರ್ಮಿಕ ನಂಬಿಕೆಗಳನ್ನು ಗೌರವಿಸಲು ಮತ್ತು ನೆರೆಹೊರೆಯವರನ್ನು ಗೌರವಿಸಲು ಧರ್ಮವು ಕಡ್ಡಾಯಗೊಳಿಸಿರುವುದರಿಂದ ಮುಸ್ಲಿಮರು ತಪ್ಪಿಸಬೇಕಾದ ಅಂಶವಾಗಿದೆ. ಭಾರತ ಬಹುಸಂಖ್ಯಾತ ಹಿಂದೂ ದೇಶ. ಆದಾಗ್ಯೂ, ಅದು ಜಾತ್ಯತೀತವಾಗಿ ಉಳಿಯಲು ಮತ್ತು ಒಬ್ಬರ ಧರ್ಮವನ್ನು ಆಚರಿಸುವ ಹಕ್ಕನ್ನು ಮೂಲಭೂತ ಹಕ್ಕು ಎಂದು ಘೋಷಿಸಲು ನಿರ್ಧರಿಸಿತು. ಭಾರತದಲ್ಲಿ ಮುಸ್ಲಿಮರು ಸಲಾಹ್ ಮಾಡುವ ಹಕ್ಕು, ಉಪವಾಸವನ್ನು ಆಚರಿಸುವುದು ಅಥವಾ ಹಜ್‌ಗೆ ಹೋಗುವುದು ಸೇರಿದಂತೆ ತಮ್ಮ ಧರ್ಮವನ್ನು ಆಚರಿಸುವುದನ್ನು ವಿರಳವಾಗಿ ನಿರ್ಬಂಧಿಸಲಾಗಿದೆ. ಒಂದು ಸಂಸ್ಥೆಯ ಸಾಮರಸ್ಯವನ್ನು ಕದಡುವ ಸಾಮರ್ಥ್ಯವನ್ನು ಹೊಂದಿರುವ ಹಿಜಾಬ್‌ನಂತಹ ಸಮಸ್ಯೆಗಳನ್ನು ದ್ವೇಷಿಸುವ ಅಂಶಗಳನ್ನು ದೂರವಿಡಲು ತಪ್ಪಿಸಬಹುದು.

ಬಹಳ ಆಸಕ್ತಿದಾಯಕ ಲೇಖನದಲ್ಲಿ, ಡಾ. ಅಸ್ಮಾ ಲ್ಯಾಮ್ರಾಬೆಟ್ "ಹಿಜಾಬ್" ಮತ್ತು "ಖಿಮಾರ್" ಪದಗಳ ನಡುವಿನ ಶಬ್ದಾರ್ಥದ ಬದಲಾವಣೆಯನ್ನು ಪರಿಶೋಧಿಸಿದ್ದಾರೆ (ಕವರ್ ಅಥವಾ ಮುಸುಕನ್ನು ವಿವರಿಸಲು ಖುರಾನ್‌ನಲ್ಲಿ ಬಳಸಲಾದ ನಿಜವಾದ ಪದ). ಡಾ. ಲ್ಯಾಮ್ರಾಬೆಟ್ "ಹಿಜಾಬ್" ಎಂಬ ಪದವನ್ನು ಸಂಪ್ರದಾಯವಾದಿಗಳು (ಮುಸ್ಲಿಂ ಮಹಿಳೆಯರು ಮನೆಯಲ್ಲಿಯೇ ಇರಬೇಕೆಂದು ಬಯಸುವವರು) ಮಿತಿಗೊಳಿಸಲು ಮತ್ತು ಮಹಿಳೆಯರನ್ನು ಸಮಾಜದ ಸಾಮಾಜಿಕ–ರಾಜಕೀಯ ಕ್ಷೇತ್ರದಿಂದ ಹೊರಗಿಡಲು ತಂತ್ರಗಾರಿಕೆಯಿಂದ ಬಳಸಿದ್ದಾರೆ. ಹಿಜಾಬ್ ಮಹಿಳೆಯರನ್ನು "ಖಾಸಗಿ ಜಾಗಕ್ಕೆ" ಹಿಮ್ಮೆಟ್ಟಿಸುತ್ತದೆ ಎಂದು ಅವರು ಒತ್ತಿಹೇಳುತ್ತಾರೆ, ಆದರೆ ಖಿಮಾರ್, ಖುರಾನ್ ದೃಷ್ಟಿಕೋನದ ಪ್ರಕಾರ, "ಮಹಿಳೆಯರ ಸಾಮಾಜಿಕ ಗೋಚರತೆಯ ಸಂಕೇತವಾಗಿದೆ". ಆದ್ದರಿಂದ, ಖಿಮಾರ್ ವಿಮೋಚನೆಯ ಸಂಕೇತವಾಗಿದೆ, ಮತ್ತು ಹಿಜಾಬ್ ಅನ್ನು ಒಂದು ಮಿತಿ ಎಂದು ಭಾವಿಸಬಹುದು. ಈ ತಿರುಚಿದ ಮತ್ತು ಸಂಕೀರ್ಣ ಸನ್ನಿವೇಶದಲ್ಲಿ ಹಿಜಾಬ್ ಅನ್ನು ಮುಸ್ಲಿಂ ಮಹಿಳೆಯರ ಗುರುತಿನ ಒಂದು ರೂಪವಾಗಿ ವಿಶ್ಲೇಷಿಸಬೇಕು

ವಿಶ್ವವಿದ್ಯಾನಿಲಯಗಳು ಮತ್ತು ಕಾಲೇಜುಗಳು ವೈವಿಧ್ಯಮಯ ಸಂಸ್ಕೃತಿಗಳು ಮತ್ತು ಧರ್ಮಗಳ ಕರಗುವ ಮಡಕೆಗಳಾಗಿವೆ. ಕ್ಯಾಂಪಸ್‌ನಲ್ಲಿ ಸಾಮರಸ್ಯ ಮತ್ತು ಸಾಂಸ್ಕೃತಿಕ ಒಗ್ಗಟ್ಟನ್ನು ಕಾಪಾಡಿಕೊಳ್ಳಲು, ವಿಶೇಷವಾಗಿ ವ್ಯಕ್ತಿಗತ ಗುರುತು ಒಬ್ಬರ ಧರ್ಮದ ಅವಿಭಾಜ್ಯ ಅಂಗವಾಗಿಲ್ಲದಿದ್ದರೆ, ಇತರ ಜನಸಮೂಹದಿಂದ ವ್ಯಕ್ತಿಯನ್ನು ಪ್ರತ್ಯೇಕಿಸುವ ಯಾವುದೇ ವೈಯಕ್ತಿಕ ಗುರುತನ್ನು ತಪ್ಪಿಸಬೇಕು. ತಮ್ಮ ವೈಯಕ್ತಿಕ ಗುರುತುಗಳಿಗೆ ಬದ್ಧರಾಗಿ ಅಧ್ಯಯನ ಮಾಡಲು ಬಯಸುವವರು ಧರ್ಮದ ನಿರ್ದಿಷ್ಟ ಕಾಲೇಜುಗಳನ್ನು ಆಯ್ಕೆ ಮಾಡಬಹುದು, ಅಲ್ಲಿ ನಿರ್ದಿಷ್ಟ ಗುರುತುಗಳನ್ನು ಅನುಮತಿಸಲಾಗಿದೆ. ಆದಾಗ್ಯೂ, ದತ್ತಾಂಶವು ಅಂತಹ ಸಂಸ್ಥೆಗಳ ತೀವ್ರ ಕೊರತೆಯಿದೆ ಎಂದು ಸೂಚಿಸುತ್ತದೆ, ವಿಶೇಷವಾಗಿ ಮುಸ್ಲಿಂ ಹುಡುಗಿಯರಿಗೆ. ಈ ಸನ್ನಿವೇಶವು ಮುಸ್ಲಿಂ ಪ್ರತಿನಿಧಿಗಳು ಮತ್ತು ನಾಯಕರು ತಮ್ಮ ಸಮುದಾಯದ ಅಗತ್ಯಗಳನ್ನು ಗುರುತಿಸುವಲ್ಲಿ ವಿಫಲವಾಗಿದೆ, ವಿಶೇಷವಾಗಿ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ. ಮುಸ್ಲಿಂ ಮಹಿಳೆಯರು ತಮ್ಮ ಗುರುತನ್ನು ರಾಜಿ ಮಾಡಿಕೊಳ್ಳದೆ ಲೌಕಿಕ ಶಿಕ್ಷಣವನ್ನು ಪಡೆಯುವ ಸ್ಥಳಗಳ ಕೊರತೆಯು ಸಮುದಾಯದ ಗಣ್ಯರು ಮತ್ತು ಮುಖಂಡರ ತೀವ್ರ ಅಜ್ಞಾನವನ್ನು ಸೂಚಿಸುತ್ತದೆ.

ತಮ್ಮ ಭವಿಷ್ಯವನ್ನು ಹಾಗೂ ಮುಂದಿನ ಪೀಳಿಗೆಯ ಭವಿಷ್ಯವನ್ನು ಸಶಕ್ತಗೊಳಿಸಲು, ಮುಸ್ಲಿಂ ಮಹಿಳೆಯರು ಗುಣಮಟ್ಟದ ಶಿಕ್ಷಣವನ್ನು ಪಡೆಯುವುದು ಅತ್ಯಂತ ಮಹತ್ವದ್ದಾಗಿದೆ. ಮುಸ್ಲಿಂ ಸಮಾಜವು ಇನ್ನೂ ಆರ್ಥಿಕ ಸಂಕಷ್ಟಗಳು, ಸಂಕೀರ್ಣ ಸಾಮಾಜಿಕ ರಚನೆ, ಅನಕ್ಷರತೆ ಇತ್ಯಾದಿ ಸೇರಿದಂತೆ ಅನೇಕ ನಿರ್ಬಂಧಗಳಿಂದ ಬಂಧಿತವಾಗಿದೆ. ಈ ಬಲವಾದ ಸಂದರ್ಭಗಳಲ್ಲಿ, ಹಿಜಾಬ್‌ನಂತಹ ಸಮಸ್ಯೆಗಳು ಶಿಕ್ಷಣ ಪಡೆಯಲು ಅವರ ಹಾದಿಯಲ್ಲಿ ಎಂದಿಗೂ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಶಿಕ್ಷಣವು ಸಬಲೀಕರಣವನ್ನು ತರುತ್ತದೆ ಮತ್ತು ಸಬಲೀಕರಣವು ವಿವಿಧ ವೇದಿಕೆಗಳಲ್ಲಿ ಮಹಿಳೆಯರ ಧ್ವನಿಯನ್ನು ಕೇಳುವುದನ್ನು ಖಚಿತಪಡಿಸುತ್ತದೆ.

# ಐಪಿಎಲ್ ಎನ್ನುವ ಚಿನ್ನದ ಮೊಟ್ಟೆಯ ಆಟ..!

**● ಮಲ್ಲಿಕಾರ್ಜುನ ಹಿರೇಮಠ್**

ಐಪಿಎಲ್ ಎನ್ನುವುದು ಕ್ರಿಕೆಟ್ ಮ್ಯಾಚ್ ಆದರೂ ಅದರ ಹಿಂದೆ ದೊಡ್ಡ ಮಟ್ಟದ ಜೂಜು ಕೂಡ ನಡೆಯುತ್ತದೆ ಹಾಗಾಗಿಯೇ ಈ ಪಂದ್ಯಾವಳಿಗೆ ಎಲ್ಲಿಲ್ಲದ ಬೇಡಿಕೆ. ವರ್ಷ ವರ್ಷಕ್ಕೂ ಈ ಐಪಿಎಲ್ ಪಂದ್ಯಕ್ಕೆ ಕಂಪನಿಗಳು ನಾಯಕರನ್ನು ಮತ್ತು ಆಟಗಾರರನ್ನು ಕೋಟ್ಯಂತರ ಹಣ ವೆಚ್ಚ ಮಾಡಿ ಕೊಂಡು ಕೊಳ್ಳುತ್ತಾರೆ ಹಾಗಾಗಿ ಪ್ರತಿ ಫೆಬ್ರವರಿ ಒಂದು ರೀತಿ ಆಟಗಾರರಿಗೆ ಹಣದ ಹೊಳೆಯೆ ಹರಿಯುತ್ತದೆ.

ಅದರಲ್ಲೂ ಈ ಬಾರಿಯಂತೂ ಒಂದು ರೀತಿ ಕೆಲ ನಾಯಕರಿಗೆ ಮತ್ತಷ್ಟು ಬೇಡಿಕೆ ಉಂಟಾಗಿದೆ. ಮೊನ್ನೆ ನಡೆದ ಹರಾಜಿನಲ್ಲಿ ಈ ಆಟಗಾರರು ಸೇಲ್ ಆಗಿದ್ದು ನೋಡಿದರೆ ಎಲ್ಲಿಗೆ ತಲುಪುತ್ತದೆ ಇದು ಎನಿಸದೆ ಇರಲಾರದು.




ಐಪಿಎಲ್ ಆಟಗಾರರ ಹರಾಜು ಎನ್ನುವುದೇ ಒಂದು ದೊಡ್ಡ ಜಾತ್ರೆಯ ಹಾಗೆ. ಆಟಗಾರನೊಬ್ಬನನ್ನು ತಂಡವೊಂದು ಖರೀದಿಸಿದ ವಿದ್ಯಮಾನ ಹಲವು ದಿನಗಳವರೆಗೆ ಬಿಸಿಸುದ್ದಿಯಾಗಿರುತ್ತದೆ. ಅತಿಹೆಚ್ಚು ಮೊತ್ತಕ್ಕೆ ಹರಾಜಾದ ಆಟಗಾರರು ಇಡೀ ಸರಣಿಯಲ್ಲಿ ಆಕರ್ಷಣೆಯ ಕೇಂದ್ರವಾಗಿರುತ್ತಾರೆ.ನಿರ್ದಿಷ್ಟ ಕಾಲಾವಧಿಯವರೆಗೆ ತಂಡಗಳು ಆಟಗಾರರನ್ನು ಖರೀದಿಸಿರುತ್ತವೆ. ಈ ಅವಧಿಯ ಮಧ್ಯೆ ನಡೆಯುವ ಹರಾಜಿನಲ್ಲಿ ತಂಡಗಳು ಕಡಿಮೆ ಹಣವನ್ನು ವೆಚ್ಚ ಮಾಡುತ್ತವೆ. ಆಟಗಾರರೊಂದಿಗೆ ಒಪ್ಪಂದ ಮುಗಿದ ನಂತರ ನಡೆಯುವ ಹರಾಜಿನಲ್ಲಿ ಮತ್ತೆ ಭಾರಿ ಮೊತ್ತವನ್ನು ವಿನಿಯೋಗಿಸುತ್ತವೆ. ಆದರೆ ಐಪಿಎಲ್ ಆರಂಭವಾದಾಗಿನಿಂದ ಈವರೆಗೆ ಈ ಎರಡೂ ವೆಚ್ಚಗಳಲ್ಲಿ ಭಾರಿ ಪ್ರಮಾಣದ ಏರಿಕೆಯಾಗಿದೆ. ಫ್ರಾಂಚೈಸಿಗಳಿಗೆ ಹಣಕ್ರಿಕೆಟ್ ಪಂದ್ಯಗಳನ್ನು ವಾಹಿನಿಗಳಲ್ಲಿ ನೇರ ಪ್ರಸಾರ ಮಾಡುವ ಹಕ್ಕುಗಳಿಂದ ಬಿಸಿಸಿಐ ಕೋಟ್ಯಂತರ ರೂಪಾಯಿ ಗಳಿಸುತ್ತದೆ. ಈ ಹಣವನ್ನು ಐಪಿಎಲ್ ಫ್ರಾಂಚೈಸಿಗಳಿಗೆ ಹಂಚಿಕೆ ಮಾಡುತ್ತದೆ. ಮೂಲಗಳ ಪ್ರಕಾರ, ಪ್ರಸಾರ ಹಕ್ಕುಗಳಿಂದ ಬಂದ ಶೇ 50ರಷ್ಟು ಹಣವನ್ನು ತಂಡಗಳಿಗೆ ನೀಡಲಾಗುತ್ತದೆ.ಬ್ರಾಂಡ್ ಪ್ರಾಯೋಜಕತ್ವವು ತಂಡಗಳ ಮತ್ತೊಂದು ಆದಾಯದ ಮೂಲವಾಗಿದೆ. ಎಲ್ಲ ತಂಡಕ್ಕೂ ಪ್ರಾಯೋಜಕರು ಇದ್ದಾರೆ. ತಮ್ಮ ಕಂಪನಿಯ ಹೆಸರು ಹಾಗೂ ಲಾಂಛನಗಳನ್ನು ತಂಡದ ಆಟಗಾರರ ಜರ್ಸಿ ಮೇಲೆ ಹಾಕುವ ಮೂಲಕ ಪ್ರಚಾರ ಪಡೆಯುತ್ತಾರೆ. ಈ ಬಾರಿ ಟಾಟಾ ಕಂಪನಿಯು ಐಪಿಎಲ್ ಟೈಟಲ್‌ನ ಪ್ರಾಯೋಜಕತ್ವವನ್ನು ವಹಿಸಿಕೊಂಡಿದೆ. ಐಪಿಎಲ್‌ನ ಪ್ರಾಯೋಜಕತ್ವಗಳಲ್ಲಿ, ಟೈಟಲ್ ಪ್ರಾಯೋಜಕತ್ವವೇ ಅತ್ಯಂತ ದೊಡ್ಡ ಮೊತ್ತದ್ದು. ಆದರೆ ಇದರ ಜತೆಯಲ್ಲಿ ಒಟಿಟಿ ಸ್ಟ್ರೀಮಿಂಗ್ ಪ್ರಾಯೋಜಕತ್ವ, ಅಧಿಕೃತ ಪ್ರಾಯೋಜಕತ್ವ, ಅಂಪೈರ್ ಪ್ರಾಯೋಜಕತ್ವ ಎಲ್ಲವೂ ಸೇರಿ ಪ್ರತೀ ಸರಣಿಯಲ್ಲಿ ಪ್ರಾಯೋಜಕತ್ವದ ಆದಾಯವೇ ಸಾವಿರ ಕೋಟಿ ರೂಪಾಯಿಯನ್ನು ದಾಟುತ್ತದೆ. ಹರಾಜಿನಲ್ಲಿ ನೂರಾರು ಕೋಟಿಪ್ರತಿ ಐಪಿಎಲ್ ಸರಣಿಯ ಆರಂಭಕ್ಕೂ ಮುನ್ನ ಎಲ್ಲಾ ತಂಡಗಳು ತಮಗೆ ಅಗತ್ಯವಿರುವ ಆಟಗಾರರನ್ನು ಖರೀದಿಸುತ್ತವೆ. ಆಟಗಾರರ ಖರೀದಿ ಪ್ರಕ್ರಿಯೆಯು ಹರಾಜಿನ ಮೂಲಕ ನಡೆಯುತ್ತದೆ. ಬಿಸಿಸಿಐ ಈ ಹರಾಜನ್ನು ಆಯೋಜಿಸುತ್ತವೆ. ಹರಾಜಿನಲ್ಲಿ ದೇಶಿ ಕ್ರಿಕೆಟ್ ಆಟಗಾರರು, ಭಾರತದ ಅಂತರರಾಷ್ಟ್ರೀಯ ಕ್ರಿಕೆಟ್ ಕಲಿಗಳು ಮತ್ತು ವಿಶ್ವದ ಬೇರೆ ದೇಶಗಳ ಕ್ರಿಕೆಟ್ ಆಟಗಾರರೂ ಇರುತ್ತಾರೆ. ಇದರಿಂದ ಬರುವ ಹಣದ ಪಾಲನ್ನು ಫ್ರಾಂಚೈಸಿಗಳಿಗೆ ಬಿಸಿಸಿಐ ಹಂಚಿಕೆ ಮಾಡುತ್ತದೆ.ಕ್ರಿಕೆಟ್ ಪಂದ್ಯಗಳ ಟಿಕೆಟ್ ಮಾರಾಟವೂ ಆದಾಯದ ಪ್ರಮುಖ ಮೂಲ. ಟಿಕೆಟ್ ಮಾರಾಟದಿಂದ ಬಂದ ಶೇ 10ರಷ್ಟು ಹಣ ಎರಡೂ ತಂಡಗಳ ನಡುವೆ ಹಂಚಿಕೆಯಾಗುತ್ತದೆ. ಟೀಶರ್ಟ್, ಟೋಪಿ, ಕಿಟ್, ಕೈಗಡಿಯಾರಗಳನ್ನು ಮಾರಾಟ ಮಾಡಿಯೂ ತಂಡಗಳು ಹಣ ಸಂಗ್ರಹಿಸುತ್ತವೆ.ಫೈನಲ್ ಪಂದ್ಯದಲ್ಲಿ ಗೆದ್ದ ಮತ್ತು ಎರಡನೇ ಸ್ಥಾನ ಪಡೆದ ತಂಡ, ತಂಡದ ಆಟಗಾರರಿಗೆ ಪ್ರಶಸ್ತಿಯ ಮೊತ್ತವು ಹಂಚಿಕೆಯಾಗುತ್ತದೆ. 2019ರಲ್ಲಿ ಮುಂಬೈ ತಂಡಕ್ಕೆ 20 ಕೋಟಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 12.5 ಕೋಟಿ ಪ್ರಶಸ್ತಿ ಮೊತ್ತ ಬಂದಿತ್ತು. ಆದರೆ ಫೈನಲ್ ಪ್ರವೇಶಿಸುವ ತಂಡದ ಬ್ರಾಂಡ್ ಮೌಲ್ಯ ಹೆಚ್ಚಾಗುವುದರಿಂದ ಬರುವ ಆದಾಯಕ್ಕೆ ಹೋಲಿಸಿದರೆ, ಪ್ರಶಸ್ತಿಯ ಮೊತ್ತ ಅಷ್ಟು ಮಹತ್ವದ್ದಲ್ಲ ಎನ್ನುತ್ತಾರೆ ವಿಶ್ಲೇಷಕರು. ಐಪಿಎಲ್ ಬ್ರಾಂಡ್ ಮೌಲ್ಯ

**ಬಿಸಿಸಿಐ ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಸಂಸ್ಥೆ**

ಇಂಡಿಯನ್ ಪ್ರೀಮಿಯರ್ ಲೀಗ್ ಅಂದರೆ ಐಪಿಎಲ್, ಬಿಸಿಸಿಐನ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿದೆ. ಈಗ ವಿಶ್ವ ಕ್ರಿಕೆಟ್‌ನ ಒಟ್ಟು ವಾರ್ಷಿಕ ವಹಿವಾಟಿನಲ್ಲಿ ಐಪಿಎಲ್ ಸರಣಿಯೊಂದರ ಪಾಲು ಶೇ 40ರಷ್ಟನ್ನು ಮೀರುತ್ತದೆ. ಅಂದರೆ ಐಪಿಎಲ್‌ನಲ್ಲಿ ಹರಿಯುವ ಹಣದ ಹೊಳೆಯನ್ನು ಅಂದಾಜಿಸಬಹುದು. 2008ರಲ್ಲಿ ಬಿಸಿಸಿಐ ಮೊದಲ ಬಾರಿ ಐಪಿಎಲ್ ಆರಂಭಿಸಿದಾಗ, ಐಪಿಎಲ್‌ನಿಂದ ಅದಕ್ಕೆ ದೊರೆತ ಆದಾಯ ಸುಮಾರು 900 ಕೋಟಿಯಷ್ಟು. 2022ರಲ್ಲಿ ಐಪಿಎಲ್ ಮೂಲಕ ಬಿಸಿಸಿಐ ?6,000 ಕೋಟಿಗೂ ಹೆಚ್ಚು ಆದಾಯವನ್ನು ಗಳಿಸುವ ನಿರೀಕ್ಷೆ ಇದೆ. ಈಗ ಬಿಸಿಸಿಐನ ವಾರ್ಷಿಕ ವರದಿಯಲ್ಲಿ ಐಪಿಎಲ್ ಆದಾಯದ ಪಾಲು ಶೇ 60ಕ್ಕಿಂತಲೂ ಹೆಚ್ಚು ಐಪಿಎಲ್ ಆರಂಭಕ್ಕೂ ಮುನ್ನವೇ ಬಿಸಿಸಿಐ ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಸಂಸ್ಥೆ ಎನಿಸಿತ್ತು. ಬಿಸಿಸಿಐನ ಮೌಲ್ಯ, ಆದಾಯ, ವೆಚ್ಚ ಎಲ್ಲವೂ ಅಂತರರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಗಿಂತಲೂ (ಐಸಿಸಿ) ಹೆಚ್ಚು ಇತ್ತು. ಐಪಿಎಲ್ ಆರಂಭದ ನಂತರ ಬಿಸಿಸಿಐನ ಆದಾಯ ಮತ್ತು ಸಂಪತ್ತು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇಲ್ಲಿ ಬಿಸಿಸಿಐನ ಆದಾಯದ ಲೆಕ್ಕಾಚಾರವನ್ನಷ್ಟೇ ನೀಡಲಾಗಿದೆ. ಫ್ರಾಂಚೈಸಿಗಳ ಬ್ರಾಂಡ್ ಮೌಲ್ಯ, ಜಾಹೀರಾತು ಆದಾಯ, ಟಿಕೆಟ್ ಮಾರಾಟದ ಆದಾಯವನ್ನೂ ಪರಿಗಣಿಸಿದರೆ ಒಟ್ಟು ಮೊತ್ತವು ಹತ್ತಾರು ಸಾವಿರ ಕೋಟಿಯನ್ನು ಮೀರುತ್ತದೆ. ಐಪಿಎಲ್‌ನಿಂದ ಬಿಸಿಸಿಐಗೆ ದೊರೆಯುತ್ತಿರುವ ಒಟ್ಟು ಆದಾಯದಲ್ಲಿ ಪ್ರಸಾರ ಹಕ್ಕುಗಳ ಮಾರಾಟದಿಂದ ದೊರೆಯುವ ಆದಾಯದ್ದೇ ಸಿಂಹಪಾಲು. ಐಪಿಎಲ್ ಆರಂಭವಾದಾಗ ಪ್ರಸಾರದ ಹಕ್ಕಿನ ಮಾರಾಟದಿಂದ ಬಿಸಿಸಿಐಗೆ 422 ಕೋಟಿಯಷ್ಟು ಆದಾಯ ದೊರೆತಿತ್ತು. 2018ರಲ್ಲಿ ಒಟ್ಟು ಐದು ವರ್ಷದ ಅವಧಿಗೆ ಪ್ರಸಾರದ ಹಕ್ಕನ್ನು ಮಾರಾಟ ಮಾಡಲಾಗಿತ್ತು. 2018–2023ರ ಅವಧಿಯಲ್ಲಿ ನಡೆಯುವ ಎಲ್ಲಾ ಐಪಿಎಲ್ ಸರಣಿ ಮತ್ತು ಪಂದ್ಯಗಳ ಪ್ರಸಾರದ ಹಕ್ಕಿನ ಮಾರಾಟದಿಂದ ಬಿಸಿಸಿಐ 16,347 ಕೋಟಿ ಆದಾಯ ಗಳಿಸಿದೆ. ಪ್ರತಿ ಪಂದ್ಯ ನಡೆದಾಗಲೂ ಬಿಸಿಸಿಐಗೆ 54.5 ಕೋಟಿಯಷ್ಟು ಆದಾಯ ಜಮೆ ಆಗುತ್ತಿದೆ 2024–29ರ ಅವಧಿಗೆ ಮತ್ತೆ ಪ್ರಸಾರದ ಹಕ್ಕು ಮಾರಾಟದಿಂದ ಬಿಸಿಸಿಐ 35,000 ಕೋಟಿ ಆದಾಯದ ನಿರೀಕ್ಷೆಯಲ್ಲಿದೆ. ಪ್ರಸಾರದ ಹಕ್ಕಿನ ಮಾರಾಟದ ಮೌಲ್ಯವನ್ನು ಹೆಚ್ಚಿಸುವ ಸಲುವಾಗಿ ಪಂದ್ಯಗಳ ಸಂಖ್ಯೆಯನ್ನೂ ಹೆಚ್ಚಿಸಲು ಬಿಸಿಸಿಐ ನಿರ್ಧರಿಸಿದೆ. ಇದೊಂದು ರೀತಿಯಲ್ಲಿ ಪಂದ್ಯದಿಂದ ದೊರೆಯುವ ಆದಾಯವಲ್ಲ. ಬದಲಿಗೆ ಆದಾಯಕ್ಕಾಗಿ ಪಂದ್ಯ ನಡೆಸುವ ಮಾದರಿ. 2024ರಿಂದ ಪ್ರತಿ ವರ್ಷ 14 ಪಂದ್ಯಗಳನ್ನು ಹೆಚ್ಚುವರಿಯಾಗಿ ಸೇರಿಸಿಕೊಳ್ಳುತ್ತಾ ಹೋಗಲು ಬಿಸಿಸಿಐ ಯೋಜನೆ ಸಿದ್ಧಪಡಿಸಿದೆ.ಪ್ರಾಯೋಜಕತ್ವಪ್ರತಿ ಐಪಿಎಲ್ ಸರಣಿಯ ಟೈಟಲ್ ಪ್ರಾಯೋಜಕತ್ವದಿಂದಲೂ ಬಿಸಿಸಿಐಗೆ ನೂರಾರು ಕೋಟಿ ರೂಪಾಯಿ ಆದಾಯ ಬರುತ್ತದೆ.

# ನಟ ನಿರ್ಮಾಪಕ ವಾದಿರಾಜ್

ತೆರೆಮರೆ

ಕನ್ನಡ ಚಿತ್ರ ಇತಿಹಾಸ

ಭಾಗ–65



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಚಲನಚಿತ್ರ ನಿರ್ಮಾಪಕ, ನಿರ್ದೇಶಕ, ನಟ ವಾದಿರಾಜ್ ಉಡುಪಿಯ ಬಳಿ ಫಣಿಯಾಡು ಎಂಬಲ್ಲಿ 1927ರ ಜನವರಿ 3ರಂದು ಜನಿಸಿದರು. ತಂದೆ ಶ್ರೀನಿವಾಸ ಫಣಿಯಾಡಿ, ತಾಯಿ ಭಾರತಿ, ತಂದೆ ಸ್ವಾತಂತ್ರ ಹೋರಾಟಗಾರರು ಹಾಗೂ ನಾಟಕ ರಚನೆಕಾರರು. ಬಾಲ್ಯವನ್ನು ತಮ್ಮ ಊರಿನಲ್ಲಿಯೇ ಕಳೆದ ವಾದಿರಾಜ್ ಮದರಾಸಿಗೆ ತೆರಳಿದರು. ಅಲ್ಲಿ ಕೊಂಚ ಕಾಲ ಇದ್ದು ಪುನಃ ತನ್ನೂರಿಗ ಬಂದು ತಮ್ಮ ತಂದೆ ರಚಿಸಿದ್ದ ಕೆಲವು ನಾಟಕಗಳಲ್ಲಿ ಅಭಿನಯಿಸುವ (ಮೂಲಕ ಕಲಾರಂಗಕ್ಕೆ ಕಾಲಿರಿಸಿದರು.1956ರಲ್ಲಿ ತೆರೆಗೆ ಬಂದ 'ಕೋಕಿಲವಾಣಿ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ನಟರಾಜನ್ ನಿರ್ದೇಶಿಸಿದ ಈ ಚಿತ್ರದಲ್ಲಿ ಅಶ್ವತ್ಥ, ಬಿ.ಸರೋಜಾದೇವಿ ಅಭಿನಯಿಸಿದ್ದರು. ನಂತರ ಹಿಂದಿ ಪ್ರಚಾರ ಸಂಸ್ಥೆಯೊಂದಕ್ಕೆ ಸೇರಿಕೊಂಡರು. ಶ್ರೀಕೃಷ್ಣಗಾರುಡಿ (1958), ಧರ್ಮವಿಜಯ (1959), ಸ್ವರ್ಣಗೌರಿ (1962) ಮುಂತಾದ ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಕನ್ನಡ ಚಲನಚಿತ್ರಗಳಲ್ಲಿ ಗುರುತಿಸಿಕೊಂಡರು. ವಾದಿರಾಜ್ ಅವರ ಸಹೋದರಿ ಹರಿಣಿ ಆ ವೇಳೆಗೆ ಪ್ರಖ್ಯಾತ ತಾರೆಯಾಗಿದ್ದರು. ಸ್ವಂತ ಚಿತ್ರ ನಿರ್ಮಿಸುವ ಸಂಕಲ್ಪ ಮಾಡಿ ಸಹೋದರ ಜವಹರ್ ಹಾಗೂ ಹರಿಣಿ ಜೊತೆ ತಂದೆ ಶ್ರೀನಿವಾಸ ಫಣಿಯಾಡಿ ತಾಯಿ ಭಾರತಿಯವರ ಹೆಸರುಗಳನ್ನು ಸೇರಿಸಿ ಶ್ರೀ ಭಾರತಿ ಚಿತ್ರ ಸಂಸ್ಥೆಯನ್ನು ರೂಪಿಸಿದರು. ಚಿತ್ರರಂಗದಲ್ಲಿ ಹೆಸರು ಮಾಡಿರುವ ವಿ.ಶಾಂತರಾಮ್ ಅವರ ಚಿತ್ರವೊಂದರ ಸ್ಫೂರ್ತಿಯಿಂದ ವಾದಿರಾಜ್ ತಾವೇ 'ನಂದಾದೀಪ' ಚಿತ್ರದ ಕಥೆ ಬರೆದು, ಚಿತ್ರ ನಿರ್ಮಿಸಿದರು. ವಾದಿರಾಜ್ ನಿರ್ಮಾಣದ ಮೊದಲ ಚಿತ್ರ ಇದು. ಯುವತಿಯೊಬ್ಬಳ ಪ್ರೀತಿ, ವಾತ್ಸಲ್ಯ, ಅನುರಾಗ, ತ್ಯಾಗಗಳ ಸಮ್ಮಿಲನದ 'ನಂದಾದೀಪ' ಚಿತ್ರವನ್ನು ಎಂ.ಆರ್.ವಿಠಲ್ ನಿರ್ದೇಶಿಸಿದರು. ವಿಶೇಷವೆಂದರೆ ಎಂ.ಆರ್.ವಿಠಲ್ ಅವರು ನಿರ್ದೇಶಿಸಿದ ಮೊದಲ ಚಿತ್ರವೂ ಇದಾಗಿತ್ತು. ಈ ಚಿತ್ರ ಅತ್ಯಂತ ಜನಪ್ರಿಯಗೊಂಡಿತಲ್ಲದೆ ರಾಷ್ಟ್ರಪ್ರಶಸ್ತಿ ಗಳಿಸಿತು.





'ಮಧ್ಯ ದಾರಿಯಲ್ಲಿ' ನಾಟಕವನ್ನಾಧರಿಸಿದ 'ನವಜೀವನ' (1964) ಇವರ ಮುಂದಿನ ಚಿತ್ರ ಸಂಕಲನಕಾರರಾಗಿದ್ದ ಪಿ.ಎಸ್. ರಾವ್ ಈ ಚಿತ್ರದ ಮೂಲಕ ನಿರ್ದೇಶಕರಾದರು. ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಲಭಿಸಿತು. ಇವರು ನಿರ್ಮಿಸಿದ ಕಿವುಡ ಮೂಗರ ಸಮಸ್ಯೆಯನ್ನಾಧರಿಸಿದ 'ನಾಂದಿ' (1964) ವಿದೇಶದಲ್ಲಿ ಪ್ರದರ್ಶನಗೊಂಡ ಮೊದಲ ಕನ್ನಡ ಚಿತ್ರವೆಂಬ ದಾಖಲೆಗೆ ಪಾತ್ರವಾಯಿತು. ರಾಜಕುಮಾರ್ ಮನೋಜ್ಞ ಅಭಿನಯದ ಚಿತ್ರ ಇದಾಯಿತು.

ಮೊದಲ ಮೂರು ಚಿತ್ರಗಳಿಗೆ ಬೆಂಬಲ ನೀಡಿದ್ದ ವಿಜಯಾ ಹಂಚಿಕಾ ಸಂಸ್ಥೆಯ ವಿಶ್ವಾಸದಿಂದಾಗಿ ತಮ್ಮ ಸಂಸ್ಥೆಗೆ 'ವಿಜಯ ಭಾರತಿ ಚಿತ್ರ' ಎಂದು ವಾದಿರಾಜ್ ನಾಮಕರಣ ಮಾಡಿದರು. ಈ ಸಂಸ್ಥೆಯಲ್ಲಿ ಪ್ರೇಮಕ್ಕೂ ಪರ್ಮಿಟ್ಟೆ (1967), ನಮ್ಮ ಮಕ್ಕಳು (1969), ಸೀತಾ (1970), ನಾ ಮೆಚ್ಚಿದ ಹುಡುಗ (1972), ಸೀತೆಯಲ್ಲ ಸಾವಿತ್ರಿ (1973), ನಮ್ಮಮ್ಮನ ಸೊಸೆ (1980) ಮುಂತಾದ ಚಿತ್ರಗಳನ್ನು ನಿರ್ಮಿಸಿದರು.

'ನಮ್ಮ ಮಕ್ಕಳು' ಚಿತ್ರದಿಂದ ಚಂದ್ರಶೇಖರ್ ಬಾಲನಟರಾಗಿ ತೆರೆಗೆ ಪರಿಚಯಗೊಂಡರು. 'ಪ್ರೇಮಕ್ಕೂ ಪರ್ಮಿಟ್ಟೆ' ಚಿತ್ರವನ್ನು ಆರ್.ನಾಗೇಂದ್ರರಾವ್ ನಿರ್ದೇಶಿಸಿದರೆ ವಾದಿರಾಜ್ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದರು. 'ಸೀತಾ' ಚಿತ್ರವನ್ನು ನಿರ್ದೇಶಿಸುವ ಮೂಲಕ ವಾದಿರಾಜ್ ಚಿತ್ರ ನಿರ್ದೇಶಕರಾಗಿಯೂ ಹೆಸರು ಮಾಡಿದರು. 'ನಮ್ಮಮ್ಮನ ಸೊಸೆ' ಚಿತ್ರದ ಮೂಲಕ ಕೋಕಿಲಾ ಮೋಹನ್ ಕನ್ನಡ ಚಿತ್ರದ ನಾಯಕ ನಟರಾಗಿ ಪರಿಚಿತಗೊಂಡರು. ಮಾಸ್ತಿಯವರ 'ಕಾಕನಕೋಟೆ' ಚಲನಚಿತ್ರವಾಗಿ ಸಿದ್ಧಗೊಳ್ಳಲು ವಾದಿರಾಜ್ ಅವರ ಸಹಾಯ ಸಹಕಾರವಿದೆ. 'ಸೀತೆಯಲ್ಲ ಸಾವಿತ್ರಿ' ಚಿತ್ರವನ್ನು ವಾದಿರಾಜ್ ನಿರ್ದೇಶಿಸಿದರು. 'ನಮ್ಮಮ್ಮನ ಸೊಸೆ' ಚಿತ್ರವನ್ನು ವಾದಿರಾಜ್–ಜವಹರ್ ಜಂಟಿಯಾಗಿ ನಿರ್ದೇಶಿಸಿದರು. 1979ರಲ್ಲಿ ತೆರೆಗೆ ಬಂದ 'ದಂಗೆಯೆದ್ದ ಮಕ್ಕಳು' ಮಕ್ಕಳ ಚಿತ್ರವನ್ನು ವಾದಿರಾಜ್ ನಿರ್ದೇಶಿಸಿದರು. ಈ ಚಿತ್ರಕ್ಕೆ ಭಾರತ ಸರ್ಕಾರ ರಜತ ಕಮಲ ಹಾಗೂ ನಗದು ಬಹುಮಾನದ ಪ್ರಶಸ್ತಿ ನೀಡಿತು. 1985ರಲ್ಲಿ ತೆರೆಗೆ ಬಂದ ರಾಜಕುಮಾರ್ ಅಭಿನಯದ 'ಅದೇ ಕಣ್ಣು' ಚಿತ್ರವನ್ನು ವಾದಿರಾಜ್ ಸಹೋದರರು ನಿರ್ದೇಶಿಸಿದರು.



ಸ್ವಂತ ನಿರ್ಮಾಣದ ಚಿತ್ರಗಳೇ ಅಲ್ಲದೇ ಹಲವಾರು ಚಿತ್ರಗಳಲ್ಲಿ ಅಭಿನಯಿಸಿರುವ ವಾದಿರಾಜ್ ಉತ್ತಮ ನಟರೂ ಹೌದು. ದೂರದರ್ಶನ ಚಿತ್ರ ಮಾಲಿಕೆಗಳಲ್ಲೂ ಪಾತ್ರ ಮಾಡಿರುವ ವಾದಿರಾಜ್ ಆಕಾರದಲ್ಲಿ ವಾಮನನಾದರೂ ವಿಚಾರದಲ್ಲಿ ವಿರಾಟ ಚಲನಚಿತ್ರ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಅಪರಿಮಿತ ಸೇವೆಗಾಗಿ ರಾಜ್ಯ ಸರ್ಕಾರ 1998–99ನೇ ಸಾಲಿನಲ್ಲಿ ಡಾ.ರಾಜಕುಮಾರ್ ಪ್ರಶಸ್ತಿ ನೀಡಿ ಪುರಸ್ಕರಿಸಿತು. ಇನ್ನೊಂದು ಮುಖ' ಇವರ ಮತ್ತೊಂದು ಮಕ್ಕಳ ಚಿತ್ರ. ತಮ್ಮ 77ನೆಯ ವಯಸ್ಸಿನಲ್ಲಿ ವಾದಿರಾಜ್ 2004ರ ಫೆಬ್ರವರಿ 6ರಂದು ನಿಧನರಾದರು.




## ನಿಮ್ಮ ಮಾತು

### ವಿಶೇಷಾಂಕಕ್ಕೆ ಕಳೆ ಬಂದಿದೆ

ಕೆಂಧೂಳಿ ವಾರ್ಷಿಕೋತ್ಸವದ ವಿಶೇಷ ಸಂಚಿಕೆ ತುಂಬಾ ಚನ್ನಾಗಿ ಮೂಡಿದೆ. ಚಿತ್ರದುರ್ಗ ಮುರುಘಾ ಮಠದ ಸ್ವಾಮೀಜಿಯ ಸಂದರ್ಶನ ಮಿತವಾಗಿದ್ದರೂ ಸಾಕಷ್ಟು ಚಿಕ್ಕದಾಗಿ ಚೊಕ್ಕದಾಗಿ ನಿಮ್ಮ ಪ್ರಶ್ನೆಗಳಿಗೆ ಚಿಕ್ಕದಾಗಿಯೇ ಪ್ರಾಮಾಣಿಕ ಉತ್ತರ ನೀಡಿದ್ದಾರೆ ನಿಜಕ್ಕೂ ಸುಂದರವಾಗಿದೆ.ಜೊತೆಗೆ ಚಿತ್ರದುರ್ಗದ ಹಲವಾರು ಸಾಹಿತಿಗಳು ಪತ್ರಕರ್ತರ ಮೂಳಕ ಲೇಖನಗಳನ್ನು ಬರೆಸುವ ಮೂಲಕ ವಿಶೇಷಾಂಕಕ್ಕೆ ಕಳೆ ತರಿಸದ್ದೀರಾ.

● ಕೆ.ಎಂ.ಶರಣಬಸಪ್ಪ ಬಳ್ಳಾರಿ.

### ಇನ್ನಷ್ಟು ಉತ್ತಮವಾಗಲಿ ಎನ್ನುವ ಹಾರೈಕೆ

ಕೆಂಧೂಳಿ ಪತ್ರಿಕೆ ಒಂದು ವಿಶಿಷ್ಟವಾಗಿದೆ ಇತ್ತೀಚಿನ ದಿನಗಳಲ್ಲಿ ವಾರಪತ್ರಿಕೆಗಳು ಇಲ್ಲ ಅದರಲ್ಲೂ ಟ್ಯಾಬ್ಲಾಯ್ಡ್ ಪತ್ರಿಕೆಗಳ ಕೊರತೆ ಇತ್ತು ಅಂತ ಕೊರತೆಯನ್ನು ನಿಮ್ಮ ಪತ್ರಿಕೆ ನೀಗಿಸಿದೆ ಎನಿಸುತ್ತದೆ. ಕೆಲ ಸಣ್ಣ ಪುಟ್ಟ ತಪ್ಪುಗಳನ್ನು ಹೊರೆತು ಪಡಿಸಿದರೆ ಬಹುತೇಕ ಲೇಖನಗಳು ಮಾಹಿತಿಗಳು ಚನ್ನಾಗಿವೆ ನನಗೆ ತುಂಬಾ ಇಷ್ಟವಾಯಿತು

● ಚನ್ನಬಸಪ್ಪ ಬೇವಿನ ಮರದ್
ಬಾಗಲಕೋಟೆ

### ಓದುವ ವಾರಪತ್ರಿಕೆಗಳು ಇವೆ ಎನ್ನುವ ಖುಷಿ

ನಾನು ಪತ್ರಿಕೆಯನ್ನು ಇತ್ತೀಚಗೆ ಓದುತ್ತಿರಲಿಲ್ಲ ಕಳೆದ ಎರಡು ತಿಂಗಳ ಹಿಂದೆ ಬೆಂಗಳೂರಿನಿಂದ ಬರುವಾಗ ಪತ್ರಿಕೆ ಅಂಗಡಿಯಲ್ಲಿ ನಿಮ್ಮ ಪತ್ರಿಕೆ ಕಣ್ಣಿಗೆ ಕಾಣಿಸಿತು ಅದರ ಹೆಸರನ್ನು ನೋಡಿ ಖರೀದಿ ಮಾಡಿದೆ ಬಸ್ಸಿನಲ್ಲಿ ಬರುವಾಗ ಓದುತ್ತಾ ಬಂದೆ ಹಲವಾರು ಲೇಖನಗಳು ಉತ್ತಮವಾಗಿ ಇತ್ತೀಚಗೆ ಒಂದು ಪತ್ರಿಕೆ ಓದುಸುತ್ತದೆ ಎಂದರೆ ವಾರಪತ್ರಿಕೆಗಳು ಇನ್ನೂ ಓದುವಷ್ಟರ ಮಟ್ಟಿಗೆ ಜೀವಂತವಾಗಿವೆ ಎನ್ನುವ ಖುಷಿಯಾಯಿತು. ಎಲ್ಲಾ ಲೇಖನಗಳು ವಿಶಿಷ್ಟವಾಗಿವೆ .

● ಸಿದ್ದಪ್ಪ ಗುಡೇದ್ ಕೆ.
ಧಾರವಾಡ.




### ಇನ್ನಷ್ಟು ಚನ್ನಾಗಿ ಮೂಡಿಬರಲಿ

ಕೆಂಧೂಳಿ ಇತ್ತೀಚಗೆ ಉತ್ತಮ ಲೇಖನಗಳನ್ನೊಳಗೊಂಡಿದೆ. ಉಮಾಪತಿ ಅಂತವರ ಬರಹ ಒಂದು ಸೈದ್ಧಾಂತಿಕ ಹಿನ್ನೆಲಯುಳ್ಳದ್ದಾಗಿವೆ ಹಾಗೆಯೇ ಮನಮಿಡಿತ. ಮತ್ತು ಮುಖ್ಯ ಸುದ್ದಿಗಳು ಕೂಡ ಯಾರ ಪರವೂ ಅಲ್ಲದೆ ಒಂದು ಜನಪರವಾಗಿ ಬರುತ್ತಿದೆ. ಇನ್ನಷ್ಟು ಪತ್ರಿಕೆ ಬೆಳೆಯಲಿ ಎಂದು ಆಶಿಸುತ್ತೇನೆ.

● ಗುರುರಾಜ್ ಕುಲಕರ್ಣಿ ಹುಬ್ಬಳ್ಳಿ.

### ಉತ್ತಮವಾದ ಲೇಖನಗಳು

ಕೆಂಧೂಳಿ ವಿಶೇಷಾಂಕ ನೋಡಿದೆ ತುಂಬಾ ಉತ್ತಮವಾಗಿದೆ. ಗುಣಮಟ್ಟದ ಲೇಖನಗಳು ಮತ್ತು ವಿಶೇಷ ಸಂಚಿಕೆಗೆಂದೆ ಸಾಹಿತಿಗಳು ಬರೆದಿರುವ ಲೇಖನಗಳು ಮಾಹಿತಿಪೂರ್ಣವಾಗಿವೆ. ನಿಮ್ಮ ಪತ್ರಿಕೆಯನ್ನು ಕಳೆದ ಆರು ತಿಂಗಳಿನಿಂದಲೂ ಗಮನಿಸುತ್ತಿದ್ದೇನೆ,ಹಿಟ್ ಅಂಡ್ ರನ್ ಎಲೆಕ್ಟ್ರಾನಿಕ್ ಮಾಧ್ಯಮಗಳ ಕುರಿತು ಬರೆಯುತ್ತಿರುವ ಅಂಕಣ ಚನ್ನಾಗಿ ಮೂಡಿ ಬರುತ್ತಿದೆ ಆದರೆ ಈ ವಾರದ ವಿಶೇಷಾಂಕದಲ್ಲಿ ಆ ಕಾಲಂ ಇರಲಿಲ್ಲ .. ಹಾಗೆಯೇ ಸೋಮಶೇಖರ್ ಅವರ ಪರಿಶೋಧನೆ ಇತಿಹಾಸ ಕುರಿತು ಅದ್ಭುತ ಲೋಕವನ್ನೇ ತೆರದಿಡುತ್ತದೆ .ಡಿ.ಉಮಾಪತಿ ಅವರ ಲೇಖನವನ್ನು ಈ ಸಂಚಿಕೆಯಲ್ಲಿ ಗಮನಸಿಲಿಲ್ಲ.. ಇರಲಿ ಒಟ್ಟಾರೆಯಾಗಿ ಪತ್ರಿಕೆ ಚನ್ನಾಗಿ ಮೂಡಿಬರುತ್ತಿದೆ.

● ಕರಿಸಬಸಪ್ಪ ಎನ್.ಎಂ
ಗದಗ

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109

KENDHOOLI Kannada Weekly
ಸಂಪುಟ - 02 | ಸಂಚಿಕೆ - 66 | ಪುಟ - 16 | ರೂ. 16/- | ಫೆಬ್ರವರಿ 17 ರಿಂದ ಫೆಬ್ರವರಿ 23, 2022
kendhooli.com/e-paper/
RNI no KARKAN/2018/76310




# ಜೇಮ್ಸ್ ಪಕ್ಕಾ ಆಕ್ಷನ್ ಸಿನಿಮಾ

ಪುನೀತ್ ರಾಜ್‌ಕುಮಾರ್ ನಟನೆಯ ಜೇಮ್ಸ್ ಸಿನಿಮಾದ ಅಧಿಕೃತ ಟೀಸರ್ ಪಿಆರ್‌ಕೆ ಆಡಿಯೋ ಬಿಡುಗಡೆಗೊಳಿಸಿದ್ದು ಜೇಮ್ಸ್ ಸಿನಿಮಾ ನೋಡಲು ಜನ ತುದಿಗಾಲಲ್ಲಿ ನಿಂತಿದ್ದಾರೆ.

ಚಿತ್ರತಂಡ ಮೊದಲೇ ತಿಳಿಸಿದಂತೆ ಟೀಸರ್ ರಿಲೀಸ್ ಮಾಡಿದೆ. ಟೀಸರ್ ಅಭಿಮಾನಿಗಳ ಮನಗೆಲ್ಲುತ್ತಿದ್ದು, ಮೋಡಿ ಮಾಡುತ್ತಿದೆ. 1 ನಿಮಿಷ 27 ಸೆಕೆಂಡ್ ಗಳ ಟೀಸರ್ ನಲ್ಲಿ ಜೇಮ್ಸ್ ನ ಒಂದು ಸಣ್ಣ ಪರಿಚಯವಿದೆ. ಪಕ್ಕಾ ಆಕ್ಷನ್ ಕಟ್ ಸಿನಿಮಾ ಇದಾಗಿರಲಿದೆ ಎನ್ನುವುದಕ್ಕೆ ಟೀಸರ್ ಸಾಕ್ಷಿ ಒದಗಿಸಿದೆ. ಅಪ್ಪು ಗೆ ಶಿವಣ್ಣ ಕಂಠದಾನ ಮಾಡಿದ್ದು, ಒಂದು ಪವರ್ ಫುಲ್ ಡೈಲಾಗ್ ಕೂಡ ಟೀಸರ್ ನಲ್ಲಿದೆ. ನಿರ್ದೇಶಕ ಚೇತನ್ ಆಕ್ಷನ್ ಕಟ್ ಹೇಳಿರುವ ಜೇಮ್ಸ್ ಸಿನಿಮಾ ಅಪ್ಪು ಬರ್ತ್ ಡೇ ದಿನ ರಿಲೀಸ್ ಮಾಡಲು ಚಿತ್ರತಂಡ ತಯಾರಿ ನಡೆಸುತ್ತಿದೆ. ಅಪ್ಪು ಕೊನೆಯ ಸಿನಿಮಾ ನೋಡಿ ಕಣ್ತುಂಬಿಕೊಳ್ಳಲು ಇಡೀ ಕರುನಾಡು ಕಾಯುತ್ತಿದೆ ಅನ್ನೋದು ಈ ಟೀಸರ್ ನೋಡಿದ ಮೇಲೆ ತಿಳಿಯುತ್ತದೆ.



# ಡ್ರಾಮಾ ಜ್ಯೂನಿಯರ್ಸ್‌ನಲ್ಲಿ ತೀರ್ಪುಗಾರರಾಗಿ ರವಿಚಂದ್ರನ್

'ಕ್ರೇಜಿ ಸ್ಟಾರ್ ರವಿಚಂದ್ರನ್ ಕಿಡ್ನ್ಯಾಪ್ ಆಗಿದ್ದಾರೆ' ಎಂಬ ವಿಷಯ ಕೆಲವರು ನಿಜ ಎಂದು ಭಾವಿಸಿದ್ದರು ಆ ಸುದ್ದಿಯನ್ನು ಟಿವಿಗಳಲ್ಲಿ ನೋಡಲು ಟಿವಿ ಮುಂದೆ ಕೂತಿದ್ದರು ಆದರೆ ಆ ಸುದ್ದಿಯ ಸುಳಿವೇ ಇರಲ್ಲಿಲ್ಲ ಆದರೆ ಕೆಲವು ಡಿಜಿಟಲ್ ಮೀಡಿಯಾಗಳು ಈ ಸುದ್ದಿಯನ್ನು ಪ್ರಸಾರ ಮಾಡುತ್ತಲೆ ಇದ್ದವು ಕೆಲವರ ಆತಂಕ ಮನೆ ಮಾಡಿತ್ತು ದೂರವಾಣಿ ಮೂಲಕ ಕನ್ಫರ್ಮ್ ಮಾಡಿಕೊಳ್ಳಲು ಸ್ನೇಹಿತರಿಗೆ ಮೊದಲಾದವರಿಗೆ ದೂರವಾಣಿ ಕರೆ ಮಾಡಿ ತಿಳಿದುಕೊಳ್ಳಲು ಮುಂದಾಗಿದ್ದರು ಆದರೆ ನಂತರ ಗೊತ್ತಿಗಿದ್ದು ಅದು ಡ್ರಾಮಾ ಜನ್ಯೂನಿಯರ್ಸ್‌ನ ಪ್ರೊಮೋ ಎಂದು ಅಲ್ಲಿಗೆ ಎಲ್ಲರೂ ನಿಟ್ಟಿಸಿರು ಬಿಟ್ಟಿದ್ದರು.

ನಂತರ ಅದು ಜೀ ಕನ್ನಡವಾಹಿನಿಯಲ್ಲಿ ಸಿರಿಯಲ್‌ಗಳ ಮಧ್ಯೆ ಈ ಬ್ರೇಕಿಂಗ್ ಬಂದು ಹೋಗುತ್ತಿತ್ತು ಅ ನಂತರ ಅದರ ಸ್ಪಷ್ಟತೆ ಅರಿವಾಗಿತ್ತು.

ಹೌದು ರವಿಚಂದ್ರನ್ ಈಗ ಡ್ರಾಮಾ ಜೂನಿಯರ್ಸ್ ರಿಯಾಲಿಟಿ ಶೋನ ತೀರ್ಪುಗಾರರಾಗಲಿದ್ದಾರೆ.ಈಗಾಗಲೇ ಅದರ ಪ್ರೊಮೋಗಳು ಸಿದ್ದವಾಗಿವೆ.

'ಡ್ರಾಮಾ ಜ್ಯೂನಿಯರ್ಸ್–4' ಕಾರ್ಯಕ್ರಮಕ್ಕೆ ರವಿಚಂದ್ರನ್ ತೀರ್ಪುಗಾರರಾಗಿರುವುದು ಅಧಿಕೃತವಾಗಿದೆ. ರವಿಚಂದ್ರನ್ ಜೊತೆ ತೀರ್ಪುಗಾರರಾಗಿ ಯಾರೆಲ್ಲಾ ಇರುತ್ತಾರೆ ಎಂಬುದನ್ನ ಜೀ ಕನ್ನಡ ವಾಹಿನಿ ಇನ್ನೂ ಬಹಿರಂಗ ಪಡಿಸಿಲ್ಲ.

ಸದ್ಯಕ್ಕೆ 'ಡ್ರಾಮಾ ಜ್ಯೂನಿಯರ್ಸ್ – 4' ಕಾರ್ಯಕ್ರಮಕ್ಕೆ ರವಿಚಂದ್ರನ್ ಜಡ್ಜ್ ಆಗಿ ಬರ್ತಿದ್ದಾರೆ ಎಂಬ ಪ್ರೋಮೋ ಪ್ರಸಾರವಾಗುತ್ತಿದೆ. ಈ ಕಾರ್ಯಕ್ರಮ ಯಾವಾಗ್ಲಿಂದ ಶುರುವಾಗಲಿದೆ ಎಂಬುದಿನ್ನೂ ಗುಟ್ಟಾಗಿಯೇ ಇದೆ ಆದರೆ ಒಂದು ಮೂಲದ ಪ್ರಕಾರ್ ಮಾರ್ಚ್ ಎರಡನೇ ವಾರದಲ್ಲಿ ಆರಂಭವಾಗಲಿದೆ ಎನ್ನಲಾಗುತ್ತಿದೆ.

# ರಾಣದಲ್ಲಿ ಸಂಯುಕ್ತ ಹೆಗಡೆ ಸಖತ್ ಸ್ಟೆಪ್



ನಾಯಕ ಶ್ರೇಯಸ್ ಮಂಜು ಜೊತೆ ಕಿರಿಕ್ ಪಾರ್ಟಿ ಬೆಡಗಿ ಸಂಯುಕ್ತಾ ಹೆಗಡೆ ಹೆಜ್ಜೆ ಹಾಕಿರುವ 'ರಾಣ' ಸಿನಿಮಾದ 'ಮಳ್ಳಿ ಮಳ್ಳಿ' ಹಾಡಿನ ಮ್ಯೂಸಿಕ್ ವಿಡಿಯೋ ಯೂಟ್ಯೂಬಿನಲ್ಲಿ ಬಿಡುಗಡೆಯಾಗಿದೆ.

ಕನ್ನಡ ರಾಪರ್ ಚಂದನ್ ಶೆಟ್ಟಿ ಸಂಗೀತ ನಿರ್ದೇಶನದಲ್ಲಿ ಮೂಡಿ ಬಂದಿರುವ ಈ ಹಾಡು ಉತ್ತರಕರ್ನಾಟಕ ಸೊಗಡಿನಲ್ಲಿ ಮೂಡಿ ಬಂದಿದೆ.

ಮಳ್ಳಿ ಮಳ್ಳಿ ಹಾಡಿಗೆ ಶ್ರೇಯಸ್ ಮಂಜು ಮತ್ತು ಸಂಯುಕ್ತಾ ಹೆಗಡೆ ಭರ್ಜರಿ ಸ್ಟೆಪ್ಸ್ ಹಾಕಿದ್ದಾರೆ. ನಟಿ ಸಂಯುಕ್ತಾ ಹೆಗಡೆ ಹಾಕಿರುವ ಹಾಟ್ ಸ್ಟೆಪ್ಪುಗಳು ಪಡ್ಡೆ ಹುಡುಗರ ನಿದ್ದೆ ಕದಿಯುವುದು ಪಕ್ಕಾ.

ಈ ಹಾಡಿನ ಮೂಲಕ ಸಂಯುಕ್ತಾ ಹೆಗಡೆ ತಮ್ಮ ನೃತ್ಯ ಕೌಶಲ್ಯವನ್ನು ಸಾಬೀತುಪಡಿಸಿದ್ದಾರೆ. ರಾಣ ಸಿನಿಮಾವನ್ನು ನಂದ ಕಿಶೋರ್ ನಿರ್ದೇಶಿಸಿದ್ದು, ಶೇಖರ್ ಚಂದ್ರ ಸಿನಿಮೆಟೊಗ್ರಾಫರ್ ಹೊಣೆ ಹೊತ್ತಿದ್ದಾರೆ. ಗುಜ್ಜಾಲ್ ಪುರುಷೋತ್ತಮ್ ಅವರು ಸಿನಿಮಾಗೆ ಹಣ ಹೂಡಿದ್ದಾರೆ.



# ಮಲೆಯಾಳಂ ಚಿತ್ರದಲ್ಲಿ ಸಾನ್ವಿ ಶ್ರೀವಾಸ್ತವ

ಜನಪ್ರಿಯ ಮಲಯಾಳಂ ನಟ ನಿವಿನ್ ಪೌಲಿ ನಾಯಕನಾಗಿ ನಟಿಸಿರುವ, ಬಹುಕೋಟಿ ವೆಚ್ಚದ ಬಹುನಿರೀಕ್ಷಿತ ಮಲಯಾಳಂ ಸಿನಿಮಾ 'ಮಹಾವೀರ್ಯರ್'ಗೆ ಸ್ಯಾಂಡಲ್ ವುಡ್ ನಟಿ ಶಾನ್ವಿ ಶ್ರೀವಾಸ್ತವ ನಾಯಕಿಯಾಗಿ ನಟಿಸುತ್ತಿದ್ದಾರೆ. ಇತ್ತೀಚಿಗಷ್ಟೆ ಸಿನಿಮಾದ ಫರ್ಸ್ಟ್ ಲುಕ್ ಬಿಡುಗಡೆಯಾಗಿದೆ.

ಸಿನಿಮಾದಲ್ಲಿ ನಿವಿನ್ ಪೌಲಿ ಜತೆಗೆ ಆಸಿಫ್ ಅಲಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. 'ಮಹಾವೀರ್ಯರ್' ಸಿನಿಮಾ ಸಂಪೂರ್ಣ ಫ್ಯಾಂಟಸಿ ಕಥೆಯನ್ನು ಹೊಂದಿದೆ. ಟೈಮ್ ಟ್ರಾವೆಲಿಂಗ್ ಸೇರಿ ಕಾನೂನು, ಕಟ್ಟಳೆಗಳ ಬಗ್ಗೆಯೂ ಚಿತ್ರ ಬೆಳಕು ಚೆಲ್ಲಲಿದೆ. ನಾಯಕ ನಟ ನಿವಿನ್ ಪೌಲಿ ಅವರೇ ಸಿನಿಮಾಗೆ ಹಣ ಹೂಡುತ್ತಿರುವುದು ವಿಶೇಷ.

ಈ ಹಿಂದೆ ನಿವಿನ್ ಅವರ '1983' ಮತ್ತು 'ಆಕ್ಷನ್ ಹೀರೋ ಬಿಜು' ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದ ಅಬ್ರಿದ್ ಶೈನ್, 'ಮಹಾವೀರ್ಯರ್' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act